# ಜನತಾ ವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು : ಎಂ.ಎಸ್. ವಿಕಾಸ್

ದಾವಣಗೆರೆ ಸೋಮವಾರ, ಸೆಪ್ಟಂಬರ್ 30, 2024

ಸಂಪುಟ : 51 ಸಂಚಿಕೆ : 138 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com





# ಹಣ್ಣು, ತರಕಾರಿಗಳನ್ನು ಹೆಚ್ಚು ಸೇವಿಸಿದಲ್ಲಿ ಹೃದಯಾಘಾತ, ಕ್ಯಾನ್ಸರ್ ತಡೆಗಟ್ಟುವಿಕೆ ಸಾಧ್ಯ

ದಾವಣಗೆರೆ, ಸೆ. 29- ವಿಶ್ವ ಹೃದಯ ದಿನದ ನಡಿಗೆಯನ್ನು ಒಂದು ದಿನಕ್ಕೆ ಸೀಮಿತಗೊಳಿಸುವುದು ಬೇಡ. ಇದು ನಿತ್ಯ ನಿರಂತರವಾಗಿರಲಿ ಎಂದು ನಟಿ ದಾವಣಗೆರೆಯ ಅಧಿತಿ ಪ್ರಭುದೇವ್ ಹೇಳಿದರು.

ನಗರದ ಮೋತಿ ವೀರಪ್ಪ ಸರ್ಕಾರಿ ಪದವಿ ಪೂರ್ವ ಕಾಲೇಜು ಸಮೀಪವಿರುವ ಎಸ್‌ಎಸ್‌ಐಎಂಎಸ್ ಅಂಡ್ ರಿಸರ್ಚ್ ಸೆಂಟರ್ ಆವರಣದಲ್ಲಿ ಎಸ್.ಎಸ್. ನಾರಾಯಣ ಹೃದಯಾಲಯದಿಂದ 'ಯೂಸ್ ಆಕ್ಷನ್ ಫಾರ್ ಹಾರ್ಟ್' ಧ್ಯೇಯ ವಾಕ್ಯದೊಂದಿಗೆ ಆಯೋಜಿಸಿದ್ದ ವಿಶ್ವ ಹೃದಯ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸಂಗೀತ, ನೃತ್ಯ, ಕಲೆ ಯಾವುದೇ ಇರಲಿ ಮನಸ್ಸನ್ನು ಉಲ್ಲಾಸಭರಿತವಾಗಿ ಇಟ್ಟುಕೊಳ್ಳಲು ಏನೇನು ಸಾಧ್ಯತೆ ಇದೆಯೋ ಅದೆಲ್ಲವನ್ನೂ ಕಲಿಸಿ ಸಂತೋಷದಿಂದ ಇರಿ ಎಂದು ಸಲಹೆ ನೀಡಿದರು.

ಸದೃಢ ದೇಹಕ್ಕೋಸ್ಕರ ಸದೃಢ ಹೃದಯ ಹೊಂದಿರಬೇಕು. ಹೃದಯ ಚನ್ನಾಗಿರಲು ನಮ್ಮ ಮನಸ್ಸು ಸಹ ಸದೃಢವಾಗಿರಬೇಕು. ನಮ್ಮ ದೇಹದ, ನಮ್ಮ ಆಲೋಚನೆಗಳ ಬಗ್ಗೆ ನಿಯಂತ್ರಣ ಸಾಧಿಸಬೇಕು. ಆಗ ಮಾತ್ರ ನಮ್ಮ ದೇಹ, ಮನಸ್ಸು ಹಾಗೂ ಜೀವನ ಹತೋಟಿಯಲ್ಲಿರುತ್ತದೆ ಎಂದರು.

**ವಿಶ್ವ ಹೃದಯ ದಿನಾಚರಣೆ ಕಾರ್ಯಕ್ರಮದಲ್ಲಿ ಡಾ.ಜಿ. ಶಿವಲಿಂಗಪ್ಪ**

ವಿದ್ಯಾರ್ಥಿಗಳು, ಅಧಿಕಾರಿಗಳು, ವೈದ್ಯರು, ಕಾರ್ಮಿಕರದು ಒತ್ತಡದ ಬದುಕು ಎಂಬುದು ಸಾಮಾನ್ಯ ಮಾತು. ನಮ್ಮ ಜೀವನದಲ್ಲಿ ಬಲವಾದ ನಂಬಿಕೆ ಇಟ್ಟುಕೊಂಡರೆ ನಮ್ಮ ಜೀವನ ಸುಂದರವಾಗಿರುತ್ತದೆ. ಜೀವನದಲ್ಲಿ ಯಾವುದೇ ಕೆಟ್ಟ ಆಲೋಚನೆ, ದುರಭ್ಯಾಸ, ಆಹಾರ ಪದ್ಧತಿ ಬೇಡ. ಮನಸ್ಸು ಒಳ್ಳೆಯತನವನ್ನು ತುಂಬಿಕೊಂಡರೆ ಹೃದಯ ಕೂಡ ಪವಿತ್ರವಾಗಿದ್ದು, ಆರೋಗ್ಯ ಸಹ ಚನ್ನಾಗಿರುತ್ತದೆ ಎಂದು ಹೇಳಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಉಮಾ ಪ್ರಶಾಂತ್ ಮಾತನಾಡಿ, ವೈದ್ಯರೆಂದರೆ ದೇವರೆಂಬ ಭಾವನೆ ಜನ ಸಾಮಾನ್ಯರಲ್ಲಿದೆ. ಅದರಂತೆ ಹೃದಯ ಮನುಷ್ಯನ ಪ್ರಮುಖ ಭಾಗವಾಗಿದೆ. ಹೃದಯಾಘಾತವಾಗದಂತೆ ಜೀವನ ಶೈಲಿಯನ್ನು ಬದಲಾಯಿಸಿಕೊಳ್ಳಬೇಕೆಂದು ಜಾಗೃತಿ ಮೂಡಿಸುವ ಉದ್ದೇಶದಿಂದ ವಾಕಥಾನ್ ಹಮ್ಮಿಕೊಳ್ಳಲಾಗಿತ್ತು ಎಂದರು.

ಜನರು ನಿತ್ಯ ಒತ್ತಡದ ಜೀವನ ನಡೆಸುತ್ತಿದ್ದು, ಇದರಿಂದ ಹೃದಯಾಘಾತವಾಗುವ ಸಂಭವವಿದ್ದು, ಪೌಷ್ಟಿಕಯುಕ್ತ ಆಹಾರ ಸೇವನೆ, ನಿತ್ಯ ಯೋಗ, ಧ್ಯಾನ ಮಾಡುವುದರಿಂದ ದೈಹಿಕ ವ್ಯಾಯಾಮದಿಂದ ಇಂತಹ ಹೃದಯ ಸಂಬಂಧಿ ಕಾಯಿಲೆಗಳನ್ನು ತಡೆಗಟ್ಟಬಹುದು ಎಂದು ಹೇಳಿದರು.

ಮನುಷ್ಯನಿಗೆ ಜೀವನ ಶೈಲಿ ಮುಖ್ಯ. ಇತ್ತೀಚಿನ ದಿನಗಳಲ್ಲಿ ಚಿಕ್ಕ ವಯಸ್ಸಿನ ಮಕ್ಕಳಿಗೂ ಹೃದಯಾಘಾತ ಆಗುವುದು ಸಾಮಾನ್ಯವಾಗಿದೆ. ಈ ಬಗ್ಗೆ ಅರಿವು ಅಗತ್ಯ ಎಂದು ತಿಳಿಸಿದರು.

ಹಿರಿಯ ವೈದ್ಯ ಡಾ. ಜಿ. ಶಿವಲಿಂಗಪ್ಪ ಮಾತನಾಡಿ, ಜೀವನ ಶೈಲಿ ಬದಲಾವಣೆ ಮಾಡಿಕೊಂಡರೆ ಹೃದಯಾಘಾತ, ಕ್ಯಾನ್ಸರ್ ಮುಂತಾದ ಕಾಯಿಲೆಗಳನ್ನು ತಡೆಗಟ್ಟಲು ಸಾಧ್ಯವಿದೆ. ಹಣ್ಣು, ತರಕಾರಿಗಳನ್ನು ಹೆಚ್ಚು ತಿನ್ನಬೇಕು ಎಂದು ಸಲಹೆ ನೀಡಿದರು.

ರೋಗಿಗಳು ಎಲ್ಲಿಯೇ ಇರಲಿ ಅವರು ಇರುವ ಸ್ಥಳಕ್ಕೆ ತೆರಳಿ ಇಸಿಜಿ ಮಾಡಿ ವ್ಯವಸ್ಥಿತವಾಗಿ ಆರೋಗ್ಯ ವಿಚಾರಿಸಲು ಸಾಧ್ಯ. ಇದರಿಂದ ತಕ್ಷಣದ ಚಿಕಿತ್ಸೆ ನೀಡುವುದರಿಂದ ಶೇ.99 ರಷ್ಟು ರೋಗಿಗಳ ಜೀವವನ್ನು ಉಳಿಸಲು ಸಾಧ್ಯವಾಗುತ್ತದೆ ಎಂದು (3ನೇ ಪುಟಕ್ಕೆ)

# ಸಿಎಂ ಸ್ಥಾನಕ್ಕಾಗಿ ಸಾವಿರ ಕೋಟಿ !

## ಸ್ವಪಕ್ಷೀಯರ ವಿರುದ್ಧವೇ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಆರೋಪ

ದಾವಣಗೆರೆ, ಸೆ. 29 – ಕಾಂಗ್ರೆಸ್ ಸರ್ಕಾರ ಒಡೆದು ಮುಖ್ಯಮಂತ್ರಿಯಾಗಲು ಬಿಜೆಪಿಯಲ್ಲಿ ಕೆಲವರು ಸಾವಿರ ಕೋಟಿ ರೂ. ಇಟ್ಟುಕೊಂಡಿದ್ದಾರೆ ಎಂದು ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಹೇಳಿದ್ದಾರೆ.

ನಗರಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಡಿಸೆಂಬರ್‌ನಲ್ಲಿ ದೊಡ್ಡ ಕ್ರಾಂತಿ ಆಗಲಿದೆ. ಆಗ ಕಾಂಗ್ರೆಸ್ ಸರ್ಕಾರ ಕೆಡವಿ ನಾನೇ ಮುಖ್ಯಮಂತ್ರಿ ಆಗಬೇಕು ಎಂದು ಕೆಲವರು ಸಾವಿರ ಕೋಟಿ ರೂ. ಕಾಯ್ದಿಟ್ಟುಕೊಂಡಿದ್ದಾರೆ ಎಂದರು.

ಈ ಹಿಂದೆ 17 ಜನರನ್ನು ಪಕ್ಷಕ್ಕೆ ಕರೆತಂದು ಬಿಜೆಪಿಯ ಪರಿಸ್ಥಿತಿ ಹೀಗಾಗಿದೆ. ಮತ್ತೆ ಆಪರೇಷನ್ ಕಮಲ ನಡೆಸುವುದು ನಮಗೆ ಒಪ್ಪಿಗೆ ಇಲ್ಲ ಎಂದು ಯತ್ನಾಳ್ ಹೇಳಿದರು.

ಗ್ಯಾರಂಟಿ ಕಾರಣದಿಂದಾಗಿ ಸರ್ಕಾರ ಈಗಾಗಲೇ ದಿವಾಳಿಯಾಗಿದೆ. ಇಂತಹ ಪರಿಸ್ಥಿತಿಯಲ್ಲಿ ಆಪರೇಷನ್, ಖರೀದಿ ಇತ್ಯಾದಿಗಳಿಗೆ ನಾವು ಹಾಗೂ ಪಕ್ಷದ ಹೈಕಮಾಂಡ್ ಒಪ್ಪುವುದಿಲ್ಲ ಎಂದವರು ತಿಳಿಸಿದರು.

ಕೆಲವರ ಬಳಿ ಭ್ರಷ್ಟಾಚಾರ ಮಾಡಿದ ಹಣ ಇರಬಹುದು. ಈ ಹಿಂದೆ ಕೆಲವರ ಮನೆಯಲ್ಲಿ ಹಣ ಎಣಿಕೆ ಯಂತ್ರ ದೊರೆತಿತ್ತು. ಅವರು ಮುಖ್ಯಮಂತ್ರಿಯಾಗಲು ಬಯಸಬಹುದು. ಇಂತಹವರು ಕೇವಲ ಬಿಜೆಪಿಯಲ್ಲಷ್ಟೇ ಅಲ್ಲ, ಕಾಂಗ್ರೆಸ್‌ನಲ್ಲೂ ಇದ್ದಾರೆ ಎಂದು ಯತ್ನಾಳ್ ಹೇಳಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಹಿಂದಿದ್ದವರೇ ಶಾಸಕರ ಖರೀದಿಯಲ್ಲಿ ತೊಡಗಿದ್ದಾರೆ. ಕಾಂಗ್ರೆಸ್ ಪಕ್ಷದಲ್ಲೇ ಕುದುರೆ ವ್ಯಾಪಾರ ನಡೆಯುತ್ತಿದೆ. ಸಿದ್ದರಾಮಯ್ಯನವರ ಮುಡಾ ಹಗರಣದ ವಿಷಯ ಬಯಲಿಗೆ ಎಳೆದಿದ್ದು ಕಾಂಗ್ರೆಸ್‌ನವರೇ. ಈ ಕುರಿತ ಕಡತಗಳನ್ನು ಅವರೇ ತಂದುಕೊಟ್ಟಿದ್ದಾರೆ. ಪಾದಯಾತ್ರೆಯನ್ನೂ ಅವರೇ ಮಾಡಿಸಿದ್ದಾರೆ ಎಂದೂ ಬಿಜೆಪಿ ಶಾಸಕ ಹೇಳಿದರು. ಈಗಿನ ಸರ್ಕಾರ ವಿಸರ್ಜನೆ (4ನೇ ಪುಟಕ್ಕೆ)



# ರಾಜ್ಯದಲ್ಲಿ ಪಾಕಿಸ್ತಾನಿ ಸರ್ಕಾರ ಅಧಿಕಾರದಲ್ಲಿದೆ

## ಶಾಸಕ ಯತ್ನಾಳ್, ಮಾಜಿ ಸಂಸದ ಪ್ರತಾಪ್ ಸಿಂಹ ತರಾಟೆ

ದಾವಣಗೆರೆ, ಸೆ. 29 - ರಾಜ್ಯದಲ್ಲಿ ಕಾಂಗ್ರೆಸ್ ನೇತೃತ್ವದ ಪಾಕಿಸ್ತಾನಿ ಸರ್ಕಾರ ಅಧಿಕಾರದಲ್ಲಿದೆ ಎಂದು ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಆರೋಪಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಗಣೇಶ ಹಬ್ಬದ ಸಂದರ್ಭದಲ್ಲಿ ರಾಜ್ಯ ಕಾಂಗ್ರೆಸ್ ಸರ್ಕಾರ ವಿಧಿಸಿರುವ ನಿಬಂಧನೆಗಳನ್ನು ನೋಡಿದರೆ ಕರ್ನಾಟಕದಲ್ಲಿ ಯಾವ ಸರ್ಕಾರ ಅಧಿಕಾರದಲ್ಲಿದೆ ಎಂಬ ಅನುಮಾನ ಮೂಡುತ್ತಿದೆ ಎಂದರು.

ಈದ್ ಮಿಲಾದ್ ಮೆರವಣಿಗೆಯಲ್ಲಿ ಪ್ಯಾಲೆಸ್ತೇನಿ ಬಾವುಟ ಪ್ರದರ್ಶನ ಮತ್ತು ಅವರ ಪರವಾದ ಘೋಷಣೆಗಳನ್ನು ಕೇಳಿದರೆ ಕರ್ನಾಟಕದಲ್ಲಿ ಪಾಕಿಸ್ತಾನ ಸಂಸ್ಕೃತಿಯ ತಾಲಿಬಾನಿ ಸರ್ಕಾರ ಅಧಿಕಾರದಲ್ಲಿದೆಯಾ? ಎಂಬ ಸಂಶಯ ಮೂಡುತ್ತಿದೆ ಎಂದರು.

ಈ ವರ್ಷ ಗಣೇಶ ಪ್ರತಿಷ್ಠಾಪನೆಯ ಸಂಘಟನೆಗಳಿಗೆ ಹಾಕುತ್ತಿರುವ ನಿಯಮಗಳನ್ನು ಗಮನಿಸಿದರೆ, ಮುಂದಿನ ವರ್ಷ ಗಣೇಶೋತ್ಸವದ ಮೇಲೆ ನಿರ್ಬಂಧ ಇರುವ ಸಾಧ್ಯತೆಗಳಿವೆ. ವಿನಾಕಾರಣ ಇಲ್ಲದ ನಿಯಮಗಳನ್ನು ಹಿಂದೂಗಳ ಮೇಲೆ ಹೇರಲಾಗುತ್ತಿದೆ. ಅದೇ ಮುಸಲ್ಮಾನರು ರಸ್ತೆಯಲ್ಲೇ ಕುಳಿತು ನಮಾಜ್ ಮಾಡಿದರೂ, ತಲ್ವಾರ್ ಪ್ರದರ್ಶನ ಮಾಡಿದರು ಅವರ ವಿರುದ್ಧ ಕ್ರಮ ಇಲ್ಲ ಎಂದು ಆರೋಪಿಸಿದರು.

ದಾವಣಗೆರೆಯಲ್ಲಿ ನಡೆದ ಗಲಭೆ ಸಂಬಂಧ ಮುಸ್ಲಿಂ ಸಮುದಾಯದವರ ವಿರುದ್ಧ ಎರಡು ಎಫ್.ಐ.ಆರ್. ದಾಖಲಿಸಿದ್ದರೆ, (4ನೇ ಪುಟಕ್ಕೆ)

**ಪ್ಯಾಲೆಸ್ತೇನ್ ಧ್ವಜ ಏಕೆ? ಅಲ್ಲಿಗೇ ಹೋಗಿ ಹೋರಾಡಿ**

ಇಲ್ಲಿಯೇ ಹುಟ್ಟಿ, ಇಲ್ಲಿಯೇ ಬೆಳೆದು, ಇಲ್ಲಿನದ್ದೇ ಎಲ್ಲಾ ಸೌಲಭ್ಯ ಪಡೆದರೂ, ಕೆಲವರು ಪ್ಯಾಲೇಸ್ತೇನ್ ಧ್ವಜ ಪ್ರದರ್ಶನ ಮಾಡುತ್ತಿದ್ದಾರೆ. ಕೇವಲ ಪ್ಯಾಲೆಸ್ತೇನ್ ಧ್ವಜ ಪ್ರದರ್ಶಿಸುತ್ತಿರುವವರ ವಿರುದ್ಧವಷ್ಟೇ ಅಲ್ಲದೇ, ಧ್ವಜ ಹೊಲಿದವರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು ಎಂದು ಮಾಜಿ ಸಂಸದ ಪ್ರತಾಪ್ ಸಿಂಹ ಒತ್ತಾಯಿಸಿದರು.

ಪ್ಯಾಲೆಸ್ತೇನ್ ಬಗ್ಗೆ ಅಷ್ಟು ಕಾಳಜಿ ಇದ್ದರೆ ಇಲ್ಲಿ ಧ್ವಜ ಪ್ರದರ್ಶನ ಮಾಡುವ ಬದಲು ಅಲ್ಲಿಗೇ ಹೋಗಿ ಹೋರಾಟ ನಡೆಸಿ. ಇಸ್ರೇಲ್ ಗುಂಡುಗಳು ಕಾದಿವೆ ಎಂದು ಕಿಡಿ ಕಾರಿದರು.


॥ ಶ್ರೀ ಉಚ್ಚಂಗೆಮ್ಮ ದೇವಿ ಪ್ರಸನ್ನ ॥ ॥ ಶ್ರೀ ಆಂಜನೇಯ ಪ್ರಸನ್ನ॥

# ಕೈಲಾಸ ಸಮಾರಾಧನೆ ಆಹ್ವಾನ ಪತ್ರಿಕೆ

ಶ್ರೀಮತಿ ರಂಗಮ್ಮ ದಾಸಕರಿಯಪ್ಪ, ದಾವಣಗೆರೆ ಇವರು ಮಾಡುವ ವಿಜ್ಞಾಪನೆಗಳು.

ದಿನಾಂಕ : 22.09.2024ನೇ ಭಾನುವಾರ ರಾತ್ರಿ 11.55 ಗಂಟೆಗೆ ನನ್ನ ಪೂಜ್ಯ ಪತಿಯವರಾದ

**ಶ್ರೀ ಟಿ. ದಾಸಕರಿಯಪ್ಪನವರು**

ದೈವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ

**'ಕೈಲಾಸ ಸಮಾರಾಧನೆ'ಯನ್ನು**

**ಶ್ರೀ ಶ್ರೀ ಶ್ರೀ ಪ್ರಸನ್ನಾನಂದಪುರಿ ಮಹಾಸ್ವಾಮಿಗಳು,**

ಶ್ರೀ ವಾಲ್ಮೀಕಿ ಗುರುಪೀಠ, ರಾಜನಹಳ್ಳಿ, ಹರಿಹರ ತಾ. ಇವರ ಕೃಪಾಶೀರ್ವಾದದೊಂದಿಗೆ


ದಿನಾಂಕ 30.09.2024ನೇ ಸೋಮವಾರ ಬೆಳಿಗ್ಗೆ 11.30 ಗಂಟೆಗೆ

ದಾವಣಗೆರೆ - ಹರಿಹರ ಅರ್ಬನ್ ಬ್ಯಾಂಕ್ ಸಮುದಾಯ ಭವನ,

ಎಂ.ಸಿ.ಸಿ. ಎ ಬ್ಲಾಕ್, ದಾವಣಗೆರೆಯಲ್ಲಿ

ನೆರವೇರಿಸಲು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ,

ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.



ಶ್ರೀಮತಿ ರಂಗಮ್ಮ ದಾಸಕರಿಯಪ್ಪ

ಶ್ರೀಮತಿ ಸರೋಜಮ್ಮ ಕೆ.ಸಿ. ಸಿದ್ದಪ್ಪ ಮತ್ತು ಮಕ್ಕಳು, ದಾವಣಗೆರೆ

ಶ್ರೀಮತಿ ಉಮಾ ಮತ್ತು ಗಣೇಶ್ ದಾಸಕರಿಯಪ್ಪ, ಜೆಡಿಎಸ್ ಮುಖಂಡರು

ಶ್ರೀಮತಿ ಸಂಧ್ಯಾ ಮತ್ತು ಶ್ರೀನಿವಾಸ್ ದಾಸಕರಿಯಪ್ಪ, ಉಪಾಧ್ಯಕ್ಷರು, ರಾಜ್ಯ ಬಿಜೆಪಿ ಎಸ್‌ಟಿ ಮೋರ್ಚಾ

ಶ್ರೀಮತಿ ಲಲಿತಾ ಮತ್ತು ಪ್ರಕಾಶ್, ಶಿವಮೊಗ್ಗ

ಶ್ರೀಮತಿ ತೇಜೇಶ್ವರಿ ಮತ್ತು ರವಿ, ಹುಲಿಕೋಟಿ - ಗದಗ

ದಿ. ಶ್ರೀಮತಿ ನೇತ್ರಾವತಿ ಮತ್ತು ಜಗದೀಶ್, ತುಮಕೂರು

ಮತ್ತು ಮೊಮ್ಮಕ್ಕಳು ಹಾಗೂ ತುಂಬಿಗೆರೆ ಮುದುಕಪ್ಪ ವಂಶಸ್ಥರು

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.

## ಹೆಚ್ಡಿಕೆ ಹಂದಿ ಎಂದ ಅಧಿಕಾರಿ ವಿರುದ್ಧ ಕ್ರಮ : ಜೋಶಿ

ಹುಬ್ಬಳ್ಳಿ, ಸೆ. 29 - ಕೇಂದ್ರ ಸಚಿವ ಕುಮಾರಸ್ವಾಮಿ ವಿರುದ್ಧ 'ಹಂದಿ' ಪದ ಬಳಸಿ ಅವಹೇಳನ ಮಾಡಿದ ಲೋಕಾಯುಕ್ತ ಎಡಿಜಿಪಿ ಎಂ.ಚಂದ್ರಶೇಖರ್ ವಿರುದ್ಧ ಕೇಡರ್ ಕಂಟ್ರೋಲ್ ಮೂಲಕ ಕ್ರಮ ಕೈಗೊಳ್ಳಲಾಗುವುದು ಎಂದು ಕೇಂದ್ರ ಆಹಾರ ಮತ್ತು ಗ್ರಾಹಕ ವ್ಯವಹಾರ ಸಚಿವ ಪ್ರಹ್ಲಾದ್ ಜೋಶಿ ತಿಳಿಸಿದ್ದಾರೆ.

ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಈ ಲೋಕಾಯುಕ್ತ ಎಡಿಜಿಪಿಗೆ ಏನಾದರೂ ಸೇವಾ ನಿಯಮಗಳ ಬಗ್ಗೆ ಜ್ಞಾನವಿದ್ದರೆ ತಕ್ಷಣ ಕ್ಷಮಾಪಣೆ ಕೇಳಲಿ ಎಂದು ಹೇಳಿದರು.

ಒಬ್ಬ ಜನಪ್ರತಿನಿಧಿ, ಅದರಲ್ಲೂ ಕೇಂದ್ರ ಸಚಿವರ ಬಗ್ಗೆ ಹೀಗೆ ಅಸಭ್ಯ ಭಾಷೆಯಲ್ಲಿ, ಕೆಟ್ಟ ಪದ ಬಳಸುವುದನ್ನು ಯಾವುದೇ ಕಾರಣಕ್ಕೂ ಸಹಿಸಲು ಸಾಧ್ಯವಿಲ್ಲ. ಕೇಡರ್ ಕಂಟ್ರೋಲ್ ಇದನ್ನು ಗಂಭೀರವಾಗಿ ಪರಿಗಣಿಸಲಿದೆ ಎಂದು ತಿಳಿಸಿದರು.

ಕುಮಾರಸ್ವಾಮಿ ಅವರ ಬಗ್ಗೆ ಕೆಟ್ಟ ಪದದಲ್ಲಿ ಸಂಬೋಧನೆ ಮಾಡಿರುವುದು ಅಧಿಕಾರಿಯ ಅಹಂಕಾರದ ಪರಮಾವಧಿಯಾಗಿದ್ದು, ಮುಂದಿನ ದಿನಗಳಲ್ಲಿ ಇದಕ್ಕೆ ಬೆಲೆ ತೆರಬೇಕಾಗುತ್ತದೆ ಎಂದು ಜೋಶಿ ಹೇಳಿದರು.

## ಹೌತಿ ಬಂಡುಕೋರರ ನೆಲೆ ಮೇಲೆ ಇಸ್ರೇಲ್ ದಾಳಿ

ಜೆರುಸಲೇಂ, ಸೆ. 29 - ಯೆಮನ್‌ನಲ್ಲಿರುವ ಹೌತಿ ಬಂಡುಕೋರರ ನೆಲೆಗಳ ಮೇಲೆ ಇಸ್ರೇಲ್ ವೈಮಾನಿಕ ದಾಳಿ ನಡೆಸಿದೆ. ಇಸ್ರೇಲ್ ಮೇಲೆ ದಾಳಿ ನಡೆಸಿದ್ದಕ್ಕಾಗಿ ಈ ಪ್ರತಿದಾಳಿ ನಡೆಸಲಾಗಿದೆ. ಹೊಡೀಡಾ ನಗರದ ವಿದ್ಯುತ್ ಘಟಕ ಹಾಗೂ ಸಮುದ್ರ ಬಂದರುಗಳ ಮೇಲೆ ದಾಳಿ ನಡೆಸಲಾಗಿದೆ ಎಂದು ಇಸ್ರೇಲ್ ಸೈನ್ಯ ತಿಳಿಸಿದೆ. ಇಸ್ರೇಲ್ ಪ್ರಧಾನ ಮಂತ್ರಿ ಬೆಂಜಮಿನ್ ನೇತನ್ಯಾಹು ಅವರು ಶನಿವಾರ ಬೆನ್ ಗುರಿಯನ್ ವಿಮಾನ ನಿಲ್ದಾಣಕ್ಕೆ ಬಂದಿದ್ದರು. ಅವರನ್ನು ಗುರಿಯಾಗಿಟ್ಟುಕೊಂಡು ಹೌತಿ ಬಂಡುಕೋರರು ಕ್ಷಿಪಣಿ ದಾಳಿ ನಡೆಸಿದ್ದರು.

## ಥ್ರೋ ಬಾಲ್: ಜಿಲ್ಲಾ ಮಟ್ಟಕ್ಕೆ ವಿಶ್ವಚೇತನ

ದಾವಣಗೆರೆ, ಸೆ.29- ಪದವಿ ಪೂರ್ವ ಶಿಕ್ಷಣ ಇಲಾಖೆ ವತಿಯಿಂದ ಈಚೆಗೆ ಜರುಗಿದ ತಾಲ್ಲೂಕು ಮಟ್ಟದ ಬಾಲಕಿಯರ ಥ್ರೋ ಬಾಲ್ ಪಂದ್ಯಾವಳಿಯಲ್ಲಿ ನಗರದ ವಿಶ್ವಚೇತನ ವಿದ್ಯಾನಿಕೇತನ ವಸತಿಯುತ ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿಗಳಾದ ತನಿಷ್ಕಾ ಎಂ, ಪೂಜಾ ಡಿ.ವೈ, ಜಯಶ್ರಿ ಪಿ.ಎ, ಪೂಜಾ ಹೆಚ್, ಪುಷ್ಪ ಡಿ.ಆರ್, ಎನ್, ಧನುಶ್ರೀ, ಭವ್ಯ ಪಾಟೀಲ್, ಅಮೃತ ಎನ್.ಜಿ, ಗೌರಿಶ್ರೀ ಎನ್.ಪಿ, ಹಾಸೀನಿ ಡಿ.ಕೆ, ಮಹೇಶ್ವರಿ ಜಿ ಮತ್ತು ಭೂಮಿಕಾ ಡಿ.ಆರ್ ಇವರುಗಳು ಪ್ರಥಮ ಸ್ಥಾನ ಪಡೆದು ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿರುತ್ತಾರೆ.

ವಿದ್ಯಾರ್ಥಿಗಳನ್ನು ಕಾಲೇಜಿನ ಅಧ್ಯಕ್ಷೆ ಡಾ.ವಿಜಯಲಕ್ಷ್ಮೀ ವೀರಮಾಚನೇನಿ, ಪ್ರಾಂಶುಪಾಲ ಜಿ.ವಿನೋದ್, ದೈಹಿಕ ಶಿಕ್ಷಕರಾದ ಚೌಡಪ್ಪ ಮತ್ತು ನಟರಾಜ್ ಅಭಿನಂದಿಸಿದ್ದಾರೆ.

# ಯೋಗ್ಯರು ರಾಜಕಾರಣಕ್ಕೆ ಬಾರದಿದ್ದರೆ ಅಯೋಗ್ಯರು ನಮ್ಮನ್ನು ಆಳುತ್ತಾರೆ





**ಕೊಕ್ಕನೂರು ತಾಲ್ಲೂಕು ಕುರುಬರ ಸಂಘದ ಪ್ರತಿಭಾ ಪುರಸ್ಕಾರದಲ್ಲಿ ಜಿ.ಬಿ. ವಿನಯ್‌ಕುಮಾರ್ ಆತಂಕ**

ಮಲೇಬೆನ್ನೂರು, ಸೆ.29- ಸಮಾಜದಲ್ಲಿ ಅಭಿವೃದ್ಧಿ ಕಾಣಬೇಕೆಂದರೆ ಮಕ್ಕಳಿಗೆ ಉನ್ನತ ಶಿಕ್ಷಣ ಕೊಡಿಸಬೇಕು. ಆ ನಂತರ ಸಮಾಜದಲ್ಲಿ ಉದ್ಯಮಿಗಳು ತಯಾರಾಗಬೇಕು. ಅಧಿಕಾರಿಗ ಳಾಬೇಕು ಮತ್ತು ಯುವಕರು ರಾಜಕಾರಣಕ್ಕೆ ಬರಬೇಕೆಂದು ಇನ್‌ಸೈಟ್ಸ್ ಐಎಎಸ್ ಸಂಸ್ಥಾಪಕ ಜಿ.ಬಿ.ವಿನಯಕುಮಾರ್ ಹೇಳಿದರು.

ಅವರು, ಭಾನುವಾರ ಕೊಕ್ಕನೂರು ಗ್ರಾಮದ ಪವನ ದೇವ ಕಲ್ಯಾಣ ಮಂಟಪದಲ್ಲಿ ಹರಿಹರ ತಾ. ಕುರುಬರ ಸಂಘದಿಂದ ಹಮ್ಮಿಕೊಂಡಿದ್ದ ಸಂಘದ 2ನೇ ವರ್ಷದ ಸರ್ವ ಸದಸ್ಯರ ಸಭೆ ಮತ್ತು ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಮಾತನಾಡಿದರು.

ನೀವು, ನಿಮ್ಮ ಶಿಕ್ಷಣದ ಆಧಾರದ ಮೇಲೆ ಒಳ್ಳೆಯ ನಿರ್ಧಾರ ತೆಗೆದುಕೊಳ್ಳುವ ಅರ್ಹತೆ ನಿಮಗೆ ಇರುತ್ತದೆ. ಈ ನಿಟ್ಟಿನಲ್ಲಿ ವಿಮರ್ಶಾತ್ಮಕ ಯೋಚನಾ ಶಕ್ತಿ ಬೆಳೆಸಿಕೊಳ್ಳಬೇಕು. ಪ್ರತಿನಿತ್ಯ ಕನ್ನಡ, ಇಂಗ್ಲಿಷ್ ದಿನಪತ್ರಿಕೆಗಳನ್ನು ಓದಬೇಕು. ಜೊತೆಗೆ ದೊಡ್ಡ ಕನಸು, ಮಹತ್ವಾಕಾಂಕ್ಷೆ, ಸರಿಯಾದ ಮಾರ್ಗದರ್ಶನ ಇದ್ದರೆ ಐಎಎಸ್ ಅಥವಾ ಕೆಎಎಸ್ ಉತ್ತೀರ್ಣ ಮಾಡಿ, ಉನ್ನತ ಅಧಿಕಾರಿಗಳಾಗಬಹುದೆಂದು ಅವರು ವಿದ್ಯಾರ್ಥಿಗಳನ್ನು ಹುರಿದುಂಬಿಸಿದರು.

ಯೋಗ್ಯರು ರಾಜಕಾರಣಕ್ಕೆ ಬರಬೇಕು. ಇಲ್ಲದಿದ್ದರೆ, ಅಯೋಗ್ಯರು ನಮ್ಮನ್ನು ಆಳುತ್ತಾರೆ ಎಂದು ವಿನಯ್ ಕುಮಾರ್ ಆತಂಕ ವ್ಯಕ್ತಪಡಿಸಿದರು.

ಕಾರ್ಯಕ್ರಮವನ್ನು ದೀಪ ಬೆಳಗಿಸಿ ಉದ್ಘಾಟಿಸಿದ ಕಾಂಗ್ರೆಸ್ ಮುಖಂಡ ನಂದಿಗಾವಿ ಶ್ರೀನಿವಾಸ್ ಮಾತನಾಡಿ, ಸಮಾಜದಲ್ಲಿ ಹಿರಿಯರ ಮತ್ತು ಯುವಕರ ಮಧ್ಯೆ ಇರುವ ಗ್ಯಾಪ್ ಮೊದಲು ಸರಿಪಡಿಸಬೇಕು ಎಂದು ಹಿತ ನುಡಿದರು.

ಉಪನ್ಯಾಸ ನೀಡಿದ ಕನ್ನಡ ಉಪನ್ಯಾಸಕ ಗೊಲ್ಲರಹಳ್ಳಿ ಮಂಜುನಾಥ್ ಅವರು, ಜ್ಞಾನ ಯಾವತ್ತೂ ಸ್ಥಿರವಾಗಿರುತ್ತದೆ. ಅಂತಹ ಜ್ಞಾನವನ್ನು ಪ್ರತಿಯೊಬ್ಬರೂ ಪಡೆದಾಗ ಮತ್ರ ಕುಟುಂಬದಲ್ಲಿ ಹಾಗೂ ಸಮಾಜದಲ್ಲಿ ಬದಲಾವಣೆ ಸಾಧ್ಯ. ಮನಸ್ಸು ಮಾಡಿದರೆ ಮತ್ತು ಕನಸನ್ನು ಬೆನ್ನಟ್ಟಿದರೆ ಯಾವುದೂ ಅಸಾಧ್ಯವಲ್ಲ ಎಂದು ಮಂಜುನಾಥ್ ವಿದ್ಯಾರ್ಥಿಗಳಿಗೆ ಹೇಳಿದರು.

ಉದ್ಯಮಿ ಕುಂಬಳೂರು ವಿರೂಪಾಕ್ಷಪ್ಪ, ಕಮಲಾಪುರ ಮಲ್ಲೇಶ್, ಕಾಳಿದಾಸ ವಿದ್ಯಾಸಂಸ್ಥೆ ಅಧ್ಯಕ್ಷ ಕೆ.ಬಿ.ರಾಜಶೇಖರ್, ಹರಿಹರ ನಗರಸಭೆ ಮಾಜಿ ಅಧ್ಯಕ್ಷೆ ಶ್ರೀಮತಿ ನಿಂಬಕ್ಕ ಚಂದಾಪೂರ್, ಚನ್ನಗಿರಿ ತಾ. ಕುರುಬ ಸಮಾಜದ ಅಧ್ಯಕ್ಷ ಶಿವಣ್ಣ ಮಾತನಾಡಿದರು.

ಶಿಕ್ಷಕ ಗದ್ದಿಗೆಪ್ಪ ಕುರಿಯರ್ ವಿಶೇಷ ಉಪನ್ಯಾಸ ನೀಡಿದರು. ಹರಿಹರ ತಾ. ಕುರುಬರ ಸಂಘದ ಅಧ್ಯಕ್ಷ ಪೂಜಾರ್ ಹಾಲೇಶಪ್ಪ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ಧಾರವಾಡದ ಮನ್ಸೂರು ಶ್ರೀ ರೇವಣಸಿದ್ದೇಶ್ವರ ಮಹಾಮಠದ ಶ್ರೀ ಬಸವರಾಜ ದೇವರು ಸಾನ್ನಿಧ್ಯ ವಹಿಸಿದ್ದರು.

ಹಿರಿಯ ವೈದ್ಯ ಡಾ. ಎಂ.ಹನುಮಂತಪ್ಪ, ಸಂಘದ ಸಂಚಾಲಕ ಡಾ.ಕರಿಬಸಯ್ಯ ಮಠದ, ಗೌರವಾಧ್ಯಕ್ಷ ಟಿ.ಗೋವಿಂದಪ್ಪ, ಉಪಾಧ್ಯಕ್ಷ ಹಾಲಿವಾಣದ ರೇವಣಸಿದ್ದಪ್ಪ, ಎಳೆಹೊಳೆ ಕರಿಬಸಪ್ಪ, ಕಾರ್ಯದರ್ಶಿ ಮಿಟ್ಲಕಟ್ಟೆ ಎನ್. ಚಂದ್ರಪ್ಪ, ಖಜಾಂಚಿ ಗಂಗನರಸಿ ರೇವಣ ಸಿದ್ದಪ್ಪ, ತಿಪ್ಪಣ್ಣ ಕಬ್ಬಾರ್, ಮಲ್ಲನಾಯ್ಕನಹಳ್ಳಿ ಶೇಖರಪ್ಪ, ಪೂಜಾರ್ ಬೀರಪ್ಪ, ಕುಣಿಬೆಳಕೆರೆ ಜಿ.ಸಿ.ರುದ್ರಪ್ಪ, ಹಾಲಿವಾಣದ ಡಿ.ಡಿ.ಚಿಕ್ಕಪ್ಪ, ಕುಂಬಳೂರಿನ ವೈ.ಶ್ರೀನಿವಾಸ್, ಸಮಾಜದ ಮುಖಂಡರಾದ ಪದ್ಮಪ್ಪ, ಕೆ.ಪಿ.ಗಂಗಾಧರ್, ಜಿ.ಡಿ.ಪರಮೇಶ್ವರಪ್ಪ, ನಾಗೇನಹಳ್ಳಿ ಮಾಲತೇಶ್, ಪಿ.ಹೆಚ್.ಶಿವಕುಮಾರ್ ಸೇರಿದಂತೆ ಇನ್ನೂ ಅನೇಕರು ಭಾಗವಹಿಸಿದ್ದರು.

## ಹರಪನಹಳ್ಳಿ: ಪೌಷ್ಟಿಕ ಆಹಾರ ವಿತರಣೆಗೆ ಚಾಲನೆ



ಹರಪನಹಳ್ಳಿ, ಸೆ. 29- ವಿಜಯನಗರ ಜಿಲ್ಲಾ ಹರಪನಹಳ್ಳಿ ತಾಲ್ಲೂಕು ಶಿಂಗ್ರಿಹಳ್ಳಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಅಜೀಮ್ ಪ್ರೇಮ್ ಜಿ ಫೌಂಡೇಶನ್ ಸಹಯೋಗದೊಂದಿಗೆ ಆಂಗ್ಲ ಮಾಧ್ಯಮದ ಎಲ್‌ಕೆಜಿ, ಯುಕೆಜಿ, ಒಂದರಿಂದ 7ನೇ ತರಗತಿ ಮಕ್ಕಳಿಗೆ ಮೊಟ್ಟೆ, ಶೇಂಗಾ ಚಿಕ್ಕಿ, ಬಾಳೆಹಣ್ಣು, ವಿತರಣೆ ಕಾರ್ಯಕ್ರಮಕ್ಕೆ ಎಸ್‌ಡಿಎಂಸಿ ಅಧ್ಯಕ್ಷರು, ಉಪಾಧ್ಯಕ್ಷರು ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಮುಖ್ಯ ಗುರುಗಳು, ಶಿಕ್ಷಕ, ಶಿಕ್ಷಕಿಯರು ಉಪಸ್ಥಿತರಿದ್ದರು.

## ಹೊನ್ನಾಳಿ : ಹನುಮಸಾಗರ ಗ್ರಾಮ ಪಂಚಾಯಿತಿ ನೂತನ ಕಟ್ಟಡ ಉದ್ಘಾಟನೆ ಇಂದು



ಹೊನ್ನಾಳಿ ತಾಲ್ಲೂಕಿನ ಹನುಮಸಾಗರ ಗ್ರಾಮ ಪಂಚಾಯಿತಿ ನೂತನ ಕಟ್ಟಡದ ಉದ್ಘಾಟನಾ ಸಮಾರಂಭವು ಇಂದು ನಡೆಯಲಿದೆ. ಶಾಸಕ ಡಿ.ಜಿ. ಶಾಂತನಗೌಡ ನೂತನ ಕಟ್ಟಡವನ್ನು ಉದ್ಘಾಟನೆ ಮಾಡಲಿದ್ದಾರೆ. ಎನ್‌ಆರ್‌ಎಲ್‌ಎಂ ಘಟಕದ ಕಟ್ಟಡವನ್ನು ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಉದ್ಘಾಟನೆ ಮಾಡಲಿದ್ದಾರೆ. ರಾಷ್ಟ್ರಧ್ವಜ ಸ್ತಂಭವನ್ನು ಸಂಸದೆ ಡಾ. ಪ್ರಭಾ ಮಲ್ಲಿಕಾರ್ಜುನ್ ಉದ್ಘಾಟನೆ ಮಾಡಲಿದ್ದಾರೆ.

ಸಮಾರಂಭದ ಅಧ್ಯಕ್ಷತೆಯನ್ನು ಗ್ರಾ.ಪಂ. ಅಧ್ಯಕ್ಷೆ ಶೃತಿ ಮಂಜುನಾಥ್ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ವಿಧಾನಪರಿಷತ್ ಸದಸ್ಯ ಡಿ.ಎಸ್. ಅರುಣ್, ಎಸ್.ಎಲ್ ಭೋಜೆಗೌಡ, ಧನಂಜಯ್ ಸರ್ಜಿ, ಅಬ್ದುಲ್ ಜಬ್ಬಾರ್, ಹಾಗೂ ಜಿ.ಪಂ. ಸಿಇಒ, ಉಪವಿಭಾಗಾಧಿಕಾರಿ, ತಾ.ಪಂ. ಇಒ, ತಹಶೀಲ್ದಾರ್, ಗ್ರಾ.ಪಂ. ಉಪಾಧ್ಯಕ್ಷ ನಾಗರಾಜ್‌ನಾಯ್ಕ ಹಾಗೂ ಇತರರು ಭಾಗವಹಿಸಲಿದ್ದಾರೆ.

## ಬಸ್ ನಿಲ್ದಾಣಕ್ಕೆ 'ಕವಿರತ್ನ ಕಾಳಿದಾಸ' ಹೆಸರಿಡಲು ಆಗ್ರಹ



ಹೊನ್ನಾಳಿ, ಸೆ.29- ಪಟ್ಟಣದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣಕ್ಕೆ 'ಕವಿರತ್ನ ಕಾಳಿದಾಸ' ಎಂದು ಹೆಸರು ಸೂಚಿಸುವಂತೆ ಆಗ್ರಹಿಸಿ ವಿಶ್ವ ಕರ್ನಾಟಕ ರಕ್ಷಣಾ ವೇದಿಕೆಯು ಪುರಸಭೆ ಅಧ್ಯಕ್ಷ ಮೈಲಪ್ಪ ಅವರಿಗೆ ಮನವಿ ಸಲ್ಲಿಸಿತು. ಈ ವೇಳೆ ವೇದಿಕೆಯ ತಾಲ್ಲೂಕು ಅಧ್ಯಕ್ಷ ಪ್ರದೀಪ್ ಮಾರಗುಂಡನಹಳ್ಳಿ, ಉಪಾಧ್ಯಕ್ಷೆ ಸಾವಿತ್ರಮ್ಮ ವಿಜೇಂದ್ರಪ್ಪ, ಮುಖ್ಯ ಅಧಿಕಾರಿ ಲೀಲಾವತಿ ಮತ್ತು ಪುರಸಭಾ ಸದಸ್ಯರು ಇದ್ದರು.

## ನೇತನ್ಯಾಹು ಸಂಪುಟ ಸೇರಿದ ಮಾಜಿ ಎದುರಾಳಿ

ಜೆರುಸಲೇಂ, ಸೆ. 29 – ತಮ್ಮ ಮಾಜಿ ಎದುರಾಳಿ ಗಿಡಿಯಾನ್ ಸಾರ್ ಅವರನ್ನು ಸಂಪುಟ ಸದಸ್ಯರಾಗಿ ಇಸ್ರೇಲ್ ಪ್ರಧಾನ ಮಂತ್ರಿ ಬೆಂಜಮಿನ್ ನೇತನ್ಯಾಹು ನೇಮಿಸಿದ್ದಾರೆ. ಇದರಿಂದಾಗಿ ನೇತನ್ಯಾಹು ಸರ್ಕಾರದ ಮೈತ್ರಿ ವಿಸ್ತರಣೆಯಾಗಿದೆ ಹಾಗೂ ಇಸ್ರೇಲ್ ನಾಯಕತ್ವಕ್ಕೆ ನೆರವಾಗಲಿದೆ. ಪ್ರಸಕ್ತ ನಡೆಯುತ್ತಿರುವ ಯುದ್ಧ ನಿರ್ವಹಿಸುತ್ತಿರುವ ಸಂಪುಟದ ಭದ್ರತಾ ಸಮಿತಿಯಲ್ಲಿ ಸಾರ್ ಸ್ಥಾನ ಪಡೆಯಲಿದ್ದಾರೆ.

## ಅಭಿವೃದ್ಧಿ ಪಥದತ್ತ ಕಿತ್ತೂರು ರಾಣಿ ಚೆನ್ನಮ್ಮ ಸಹಕಾರ ಸಂಘ

### 15 ನೇ ವಾರ್ಷಿಕ ಮಹಾಸಭೆಯಲ್ಲಿ ಅಧ್ಯಕ್ಷ ಸಿರಿಗೆರೆ ಪರಮೇಶ್ವರ ಗೌಡ್ರು



ಹರಿಹರ, ಸೆ. 29- ಕಿತ್ತೂರು ರಾಣಿ ಚೆನ್ನಮ್ಮ ವಿವಿಧೋದ್ದೇಶ ಸಹಕಾರ ಸಂಘವು ದಿನದಿಂದ ದಿನಕ್ಕೆ ಅಭಿವೃದ್ಧಿ ಪಥದತ್ತ ಸಾಗುತ್ತಿದೆ ಎಂದು ಸಂಘದ ಅಧ್ಯಕ್ಷ ಸಿರಿಗೆರೆ ಪರಮೇಶ್ವರ ಗೌಡ್ರು ಹೇಳಿದರು.

ನಗರದ ಕದಂಬ ಕಾಂಪ್ಲೆಕ್ಸ್ ಸಭಾಂಗಣದಲ್ಲಿ ಸಂಘದ 15 ನೇ ವರ್ಷದ ವಾರ್ಷಿಕ ಮಹಾಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಈ ಸಾಲಿನಲ್ಲಿ 37 ಲಕ್ಷ ರೂಪಾಯಿ ವಹಿವಾಟು ನಡೆಸಿದೆ. ಸಾಲವನ್ನು ಪಡೆದವರು ಪ್ರಾಮಾಣಿಕವಾಗಿ ಮರುಪಾವತಿ ಮಾಡಿದ್ದರಿಂದ ಸೊಸೈಟಿ ಪ್ರಗತಿಯ ಹಾದಿಯಲ್ಲಿ ಸಾಗಿರುತ್ತದೆ. ಎಂದರು. ಕಾರ್ಯದರ್ಶಿ ಎನ್.ಎಸ್. ನಾಗರಾಜ್ ವಾರ್ಷಿಕ ವರದಿ ಮಂಡಿಸಿದರು.

ಈ ಸಂದರ್ಭದಲ್ಲಿ ಆಡಳಿತ ಮಂಡಳಿಯ ಸದಸ್ಯರಾದ ಜಿ. ಬಸವನಗೌಡ, ಯಶೋಧಮ್ಮ, ಹೆಚ್. ರಾಮಪ್ಪ, ಸಲಳ್ಳಿ ಕೊಟ್ರಪ್ಪ, ಗಣ್ಯರಾದ ಸೈಯದ್ ಪಾಪಮಯ್ಯ, ನಿಂಗಪ್ಪ, ಶಿವಕುಮಾರ್, ಬಸವರಾಜ್, ಜಿ. ನೀಲನಗೌಡ, ಹೆಚ್. ನಿಂಗಪ್ಪ, ಶಿವಕುಮಾರ್, ಮಂಜುನಾಥ್ ಇತರರು ಹಾಜರಿದ್ದರು.

## ವಿನೋಬನಗರದಲ್ಲಿ ವಿಷ್ಣು ಜನ್ಮ ದಿನಾಚರಣೆ



ದಾವಣಗೆರೆ, ಸೆ. 29- ಡಾ. ವಿಷ್ಣುವರ್ಧನ್ ರವರ 74 ನೇ ವರ್ಷದ ಹುಟ್ಟು ಹಬ್ಬವನ್ನು ವಿನೋಬನಗರದಲ್ಲಿರುವ ವಿಷ್ಣು ಕಾಲೋನಿಯಲ್ಲಿ ಆಚರಿಸಲಾಯಿತು. ಮಹಾನಗರ ಪಾಲಿಕೆ ಸದಸ್ಯ ಎ.ನಾಗರಾಜ್, ಎಸ್.ಆರ್. ರಮೇಶ್, ಮಂಜು, ಶ್ರೀಧರ, ಜಿ.ಎನ್. ಹಾಲೇಶ್, ನವೀನ್, ಸುರೇಶ್, ಹೆಚ್. ಸಿದ್ದಣ್ಣ, ನಾರಾಯಣಪ್ಪ, ಚಂದ್ರಣ್ಣ, ಸತೀಶ್ ಶೆಟ್ಟಿ, ರಾಮಚಂದ್ರ ರಾಯ್ಕರ್, ಸುರೇಶ್ ಉತ್ತಂಗಿ, ಯೋಗೀಶ್, ತಮ್ಮಣ್ಣ ಮತ್ತಿತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

## ನಗರ ಮನೋರಂಜನಾ ಕೇಂದ್ರದ ಅಧ್ಯಕ್ಷರಾಗಿ ಐಗೋಳ್ ಚಿದಾನಂದ





ಹರಪನಹಳ್ಳಿ, ಸೆ. 29 ನಗರದ ಮನೋರಂಜನಾ ಕೇಂದ್ರದಲ್ಲಿ ಸರ್ವ ಸದಸ್ಯರ ಸಭೆ ನಡೆಸಿದ್ದು, ಈ ಸಭೆಯಲ್ಲಿ ನೂತನ ಅಧ್ಯಕ್ಷರಾಗಿ ಐಗೋಳ್ ಚಿದಾನಂದ್ ವಕೀಲರು, ಉಪಾಧ್ಯಕ್ಷರಾಗಿ ಬಿ.ಕೆ. ಪ್ರಕಾಶ್, ಕಾರ್ಯದರ್ಶಿ ಹೆಚ್. ವಸಂತ್‌ರಾಜ್ ಕಾರ್ಯಕಾರಿ ಮಂಡಳಿಯ ಸದಸ್ಯರುಗಳಾದ ಶಂಕರಗೌಡ, ಪಿ. ಬಸವರಾಜ್, ಕಂಚಿಕೆರೆ ಕೆಂಚಪ್ಪ, ಪೂಜಾರ್ ಮಂಜುನಾಥ್, ಸಿ. ಪೀರ್ ಆಹ್ಮದ್, ದೇವರಾಜ್ ಅವರುಗಳು ಅವಿರೋಧವಾಗಿ ಆಯ್ಕೆ ಆಗಿದ್ದಾರೆ.

ಈ ಸಂದರ್ಭದಲ್ಲಿ ನಿಕಟ ಪೂರ್ವ ಅಧ್ಯಕ್ಷ ಮತ್ತಿಹಳ್ಳಿ ಅಜ್ಜಣ್ಣ, ವೆಂಕಟೇಶ್, ರಾಮ್‌ಪ್ರಸಾದ್ ಗಾಂಧಿ, ವೇಣುಗೋಪಾಲ್, ಎಸ್.ಎನ್. ವೀರಭದ್ರಯ್ಯ, ಪಿ. ಜಗದೀಶ್ ಗೌಡ್ರು, ಡಿ.ಎಸ್. ವೆಂಕಟೇಶ್, ಇಟಗಿ ಚಂದ್ರಪ್ಪ, ಕಾನಹಳ್ಳಿ ರುದ್ರಪ್ಪ, ಮತ್ತು ಇತರೆ ಸದಸ್ಯರು ಇದ್ದರು.

## ಬಿ.ವಿ. ಕರಿಬಸಪ್ಪ ಅವರಿಗೆ ಚಿನ್ನದ ಪದಕ



ದಾವಣಗೆರೆ, ಸೆ. 29 - ನಗರದ ಕೆ.ಇ.ಬಿ. ಸಮುದಾಯ ಭವನದಲ್ಲಿ ನಡೆದ ಮೂರನೇ ರಾಷ್ಟ್ರೀಯ ಮಾಸ್ಟರ್ಸ್ ವೇಯ್ಟ್ ಲಿಫ್ಟಿಂಗ್ ಚಾಂಪಿಯನ್ ಶಿಪ್ 81 ಕೆ.ಜಿ. ವಿಭಾಗದಲ್ಲಿ ಕರಿಬಸಪ್ಪ ಬಿ.ವಿ. ಭಾಗವಹಿಸಿ ಚಿನ್ನದ ಪದಕ ಪಡೆದಿದ್ದಾರೆ. ಕರಿಬಸಪ್ಪ ಬಿ.ವಿ. ಅವರಿಗೆ ಕರ್ನಾಟಕ ರಾಜ್ಯದ ವೇಯ್ಟ್ ಲಿಫ್ಟಿಂಗ್ ಉಪಾಧ್ಯಕ್ಷ ಹೆಚ್. ಬಸವರಾಜ್, ಜಿಲ್ಲಾ ವೇಯ್ಟ್ ಲಿಫ್ಟಿಂಗ್ ಅಧ್ಯಕ್ಷ ಹೆಚ್. ಮಹೇಶಣ್ಣ, ಪಾಲಿಕೆ ಸದಸ್ಯ ವೀರೇಶ್ ಪೈಲ್ವಾನ್, ಎಸ್. ಕೆ. ಪಾಂಡುರಾಜ್, ಮಹಾನಗರ ಪಾಲಿಕೆ ಜಿಮ್ ತರಬೇತುದಾರ ಹನುಮಂತಪ್ಪ ಅಭಿನಂದಿಸಿದರು.

## ಹೊನ್ನಾಳಿಗಿಂದು ಪಂಚಮಸಾಲಿ ಸಮಾಜದ ರಾಜ್ಯಾಧ್ಯಕ್ಷ ಸೋಮನಗೌಡ ಪಾಟೀಲ್

ಪಂಚಮಸಾಲಿ ಸಮಾಜದ ನೂತನ ರಾಜ್ಯಾಧ್ಯಕ್ಷ ಸೋಮನಗೌಡ ಪಾಟೀಲ್ ಇಂದು ಬೆಳಿಗ್ಗೆ 9 ಕ್ಕೆ ಹೊನ್ನಾಳಿಗೆ ಆಗಮಿಸಲಿದ್ದಾರೆ.

ಸಮಾಜ ಸಂಘಟನೆಗಾಗಿ ಆಗಮಿಸುತ್ತಿರುವ ಅವರು, ಬೆಳಿಗ್ಗೆ ಹೊನ್ನಾಳಿಯಿಂದ 9 ಗಂಟೆಗೆ ತೆರಳಿ ಮಾರಿಕೊಪ್ಪ, ಕತ್ತಿಗೆ, ಬೆಳಗುತ್ತಿ, ನ್ಯಾಮತಿ, ದೊಡ್ಡತ್ತಿನಹಳ್ಳಿ, ಕಂಕನಹಳ್ಳಿ, ಕುಂಕುವ, ಒಡೆಯರ್ ಹತ್ತೂರು, ಕುರುವ, ಗೋವಿನಕೋವಿ, ಕಮ್ಮಾರಗಟ್ಟೆ, ಸಾಸ್ವೆಹಳ್ಳಿ, ರಾಂಪುರ, ಹಿರೇಬಾಸೂರು, ಬಳ್ಳೇಶ್ವರ, ಹರಳಳ್ಳಿ, ಕೋಟೆಮಲ್ಲೂರು ಪ್ರವಾಸದ್ಯೆ ನಂತರ ಸಂಜೆ 6 ಕ್ಕೆ ಹೊನ್ನಾಳಿ ಪಟ್ಟಣದ ವೀರಭದ್ರೇಶ್ವರ ದೇವಸ್ಥಾನದಲ್ಲಿ ಸಭೆ ನಡೆಸಲಿದ್ದಾರೆ.

ಪ್ರವಾಸ ಸಂದರ್ಭದಲ್ಲಿ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಪಟ್ಟಣಶೆಟ್ಟಿ ಪರಮೇಶ್, ತಾಲ್ಲೂಕು ಅಧ್ಯಕ್ಷ ಬೆನಕನಹಳ್ಳಿ ವೀರಣ್ಣ, ನ್ಯಾಮತಿ ತಾಲ್ಲೂಕು ಅಧ್ಯಕ್ಷ ಚಂದ್ರಶೇಖರ್ ಪೂಜಾರ್ ಸೇರಿದಂತೆ, ಸಮಾಜದ ವಿವಿಧ ಘಟಕದ ಪದಾಧಿಕಾರಿಗಳು ಭಾಗವಹಿಸಲಿದ್ದಾರೆ.

**ಮೊದಲನೇ ವರ್ಷದ ಪುಣ್ಯಸ್ಮರಣೆ**



ಜನನ : 19.07.1962


ಮರಣ : 30.09.2023

**ಶ್ರೀಮತಿ ಶಿವಗಂಗಮ್ಮ**


*ನೀವು ನಮ್ಮನ್ನಗಲಿ ಇಂದಿಗೆ ಒಂದು ವರ್ಷವಾಯಿತು. ಸದಾ ನಿಮ್ಮ ಸ್ಮರಣೆಯಲ್ಲಿ ಹಾಗೂ ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿದ್ದೇವೆ.*

ದುಃಖತಪ್ತರು : **ಪತಿ ಮತ್ತು ಮಕ್ಕಳು, ಮೊಮ್ಮಕ್ಕಳು, ಅಳಿಯಂದಿರು ಹಾಗೂ ಬಂದು ಮಿತ್ರರು**

**ಮಹೇಶ ಎಂ. ಹರಿಹರ ನಿಧನ**



ಹರಿಹರ ನಗರದ KHB ಕಾಲೋನಿ ವಾಸಿ ಮಹೇಶ ಎಂ. (50) ಇವರು ದಿನಾಂಕ 29.9.2024ರ ಭಾನುವಾರ ಮಧ್ಯಾಹ್ನ 1.40ಕ್ಕೆ ನಿಧನರಾದರು. ಪತ್ನಿ, ಪುತ್ರಿಯರು, ಸಹೋದರರು, ಸಹೋದರಿಯರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 30.9.2024ರ ಸೋಮವಾರ ಬೆಳಿಗ್ಗೆ 11 ಗಂಟೆಗೆ ಹರಿಹರ ಕೈಲಾಸ ನಗರದ ಹಿಂದೂ ರುದ್ರಭೂಮಿಯಲ್ಲಿ ನೆರವೇರಲಿದೆ.



ಶ್ರೀಮತಿ ಸುಲೋಚನಮ್ಮ

(ದಿ|| ಉಮಾಮಹೇಶ್ವರಪ್ಪ ಬೂಸನೂರು ಇವರ ಧರ್ಮಪತ್ನಿ)

ಲಿಂಗೈಕ್ಯ : 30.09.1982

**ಸವಿನೆನಪು**

ನೀವು ನಮ್ಮನ್ನಗಲಿ ಇಂದಿಗೆ 42 ವರ್ಷಗಳು ಸಂದವು,

ಸದಾ ನಿಮ್ಮ ಸ್ಮರಣೆಯಲ್ಲಿರುವ...

ಮಕ್ಕಳಾದ : **ಡಾ|| ಬಿ.ಯು. ಯೋಗೇಂದ್ರಕುಮಾರ್, ಶ್ರೀ ಬಿ.ಯು. ಧೀರೇಂದ್ರಕುಮಾರ್, ಬಿ.ಯು. ವೀರೇಂದ್ರಕುಮಾರ್.**

ಸೊಸೆಯಂದಿರಾದ : **ಶ್ರೀಮತಿ ಸುಷ್ಮಾ, ಶ್ರೀಮತಿ ನಾಗವೇಣಿ, ಶ್ರೀಮತಿ ಮಂಜುಳ**

ಮೊಮ್ಮಕ್ಕಳಾದ : **ನಿರೀಕ್ಷಾ, ಹಿಮಘ್ನ, ಶ್ರೇಷ್ಠ, ಅಥರ್ವ, ಶ್ರೀತನ್**

**ಹಾಗೂ ಬಂಧು-ಮಿತ್ರರು.**

# ತಂಬಾಕು ಉತ್ಪನ್ನಗಳ ಸೇವನೆ ದುಷ್ಪರಿಣಾಮದ ಜಾಗೃತಿ



ದಾವಣಗೆರೆ, ಸೆ. 29 - ತಂಬಾಕು ಉತ್ಪನ್ನಗಳ ಸೇವನೆಗಳಿಂದಾಗುವ ದುಷ್ಪರಿಣಾಮಗಳ ಬಗ್ಗೆ ಜಿಲ್ಲೆಯಾದ್ಯಂತ ವ್ಯಾಪಕವಾಗಿ ಪ್ರಚಾರದ ಜೊತೆಗೆ, ಕಾನೂನು ಬಾಹಿರ ಮಾರಾಟ ಮಾಡುವವರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಮಹಾವೀರ್ ಮ. ಕರೆಣ್ಣವರ್ ತಿಳಿಸಿದರು.

ಅವರು ಇಂದು ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಮಂಗಳವಾರ ಆಯೋಜಿಸಿದ್ದ ತಂಬಾಕು ಮುಕ್ತ ಯುವ ಅಭಿಯಾನ 2 ಕಾರ್ಯಕ್ರಮದ ಅನುಕ್ರಮದ ಸಮನ್ವಯ ಸಮಿತಿ ಸಭೆಯಲ್ಲಿ ಮಾತನಾಡಿದರು.

ಜಿಲ್ಲೆಯಲ್ಲಿ ಸೆ.24 ರಿಂದ ನ.23 ರವರೆಗೆ ತಂಬಾಕು ಮುಕ್ತ ಯುವ ಅಭಿಯಾನ 2.0 ಆರಂಭವಾಗಲಿದೆ. ಈ ಅಭಿಯಾನವನ್ನು ಪರಿಣಾಮಕಾರಿಯಾಗಿ ಅನುಕರಣಗೊಳಿಸಬೇಕು ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ತಂಬಾಕು ಉತ್ಪನ್ನಗಳ ಸೇವನೆಯಿಂದ ಉಂಟಾಗುವ ದುಷ್ಪರಿಣಾಮಗಳ ಕುರಿತು ಅರಿವು ಮೂಡಿಸಬೇಕು ಎಂದು ಅಧಿಕಾರಿಗಳಿಗೆ ತಿಳಿಸಿದರು.

ಜಿಲ್ಲೆಯಲ್ಲಿನ 160 ಶಾಲಾ-ಕಾಲೇಜುಗಳಲ್ಲಿ 60 ದಿನಗಳ ಕಾಲ ವಿದ್ಯಾರ್ಥಿಗಳಿಗೆ, ಸಾರ್ವಜನಿಕರಿಗೆ ತಂಬಾಕು ಸೇವನೆಯಿಂದ ಉಂಟಾಗುವ ದುಷ್ಪರಿಣಾಮಗಳ ಕುರಿತು ಜಾಗೃತಿ ಮೂಡಿಸಬೇಕು ಹಾಗೂ ತಂಬಾಕು ಮುಕ್ತ ಗ್ರಾಮ, ತಂಬಾಕು ಮುಕ್ತ ಕಚೇರಿ ಹಾಗೂ ತಂಬಾಕು ಮುಕ್ತ ಶಾಲೆ ಘೋಷಣೆ ಮಾಡಲು ನಾವೆಲ್ಲರು ಶ್ರಮಿಸಬೇಕು ಎಂದು ತಿಳಿಸಿ, ಶಾಲಾ-ಕಾಲೇಜು ಆವರಣಗಳಲ್ಲಿ 100 ಮೀಟರ್ ಪ್ರದೇಶ ವ್ಯಾಪ್ತಿಯಲ್ಲಿ ತಂಬಾಕು ಸೇವನೆ ಹಾಗೂ ಮಾರಾಟ ನಿಷೇಧ ಎಂದು ಹಳದಿ ಬಣ್ಣದ ಲೈನ್ ಹಾಕಿಕೊಳ್ಳಬೇಕು ಎಂದು ಸೂಚಿಸಿದರು.

ಅಪರ ಜಿಲ್ಲಾಧಿಕಾರಿ ಪಿ.ಎನ್. ಲೋಕೇಶ್ ಅಧ್ಯಕ್ಷತೆ ವಹಿಸಿ ಜಿಲ್ಲಾ ಮಟ್ಟದ ತಂಬಾಕು ಮುಕ್ತ ಯುವ ಅಭಿಯಾನ 2.0 ಪೋಸ್ಟರ್ ಬಿಡುಗಡೆ ಮಾಡಿದರು.

ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ, ರಾಘವನ್ ತಂಬಾಕು ಮುಕ್ತ ಅರಿವು ಕಾರ್ಯಕ್ರಮ ಆಯೋಜಿಸುವ ಕುರಿತು ಸಂಕ್ಷಿಪ್ತ ಮಾಹಿತಿ ನೀಡಿದರು.

ಸಭೆಯಲ್ಲಿ ಹೆಚ್ಚುವರಿ ಪೊಲೀಸ್ ಅಧೀಕ್ಷಕ ವಿಜಯ ಕುಮಾರ್ ಎಂ. ಸಂತೋಷ್, ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಕೃಷ್ಣನಾಯ್ಕ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ. ಷಣ್ಮುಖಪ್ಪ, ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಇಲಾಖೆ ಉಪನಿರ್ದೇಶಕ ಕೊಟ್ರೇಶ್ ಹಾಗೂ ಇನ್ನಿತರೆ ಅಧಿಕಾರಿಗಳು ಉಪಸ್ಥಿತರಿದ್ದರು.

## ಹರಿಹರ : ಬೀಡಿ, ಗಣಿ ಕಾರ್ಮಿಕರ ಮಕ್ಕಳಿಂದ ವಿದ್ಯಾರ್ಥಿ ವೇತನಕ್ಕೆ ಅರ್ಜಿ

ಹರಿಹರ, ಸೆ. 29 - ಕೇಂದ್ರ ಸರ್ಕಾರದ ಕಾರ್ಮಿಕ ಮತ್ತು ಉದ್ಯೋಗ ಇಲಾಖೆ ವತಿಯಿಂದ ಬೀಡಿ ಹಾಗೂ ಗಣಿ ಕಾರ್ಮಿಕರ ಮಕ್ಕಳ ವಿದ್ಯಾರ್ಥಿ ವೇತನಕ್ಕಾಗಿ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಪ್ರಸಕ್ತ ಸಾಲಿನ ವಿದ್ಯಾರ್ಥಿ ವೇತನಕ್ಕಾಗಿ ಒಂದನೇ ತರಗತಿಯಿಂದ ಪದವಿ ಮಟ್ಟದ ವರೆಗೂ ಅಭ್ಯಾಸ ಮಾಡುತ್ತಿರುವ ಬೀಡಿ ಹಾಗೂ ಗಣಿ ಕಾರ್ಮಿಕರ ಮಕ್ಕಳು ಆನ್‌ಲೈನ್ ವೆಬ್‌ಸೈಟ್ ವಿಳಾಸ - scholarship.gov.in ಮೂಲಕ ವಿದ್ಯಾರ್ಥಿ ವೇತನಕ್ಕೆ ಅರ್ಜಿ ಸಲ್ಲಿಸಬಹುದು.

ಒಂದನೇ ತರಗತಿಯಿಂದ ಹತ್ತನೇ ತರಗತಿ ವಿದ್ಯಾರ್ಥಿಗಳು ಮತ್ತು ಪಿ.ಯು.ಸಿ., ಐ.ಟಿ.ಐ., ಡಿಪ್ಲೋಮಾ ಹಾಗೂ ವೃತ್ತಿಪರ ಪದವಿ ಕೋರ್ಸ್ ಅಭ್ಯಾಸ ಮಾಡುತ್ತಿರುವ ವರು ಅಕ್ಟೋಬರ್ 31 ರೊಳಗಾಗಿ ವಿದ್ಯಾರ್ಥಿವೇತನಕ್ಕೆ ಅರ್ಜಿ ಸಲ್ಲಿಸಬಹುದಾಗಿದೆ ಎಂದು ಹರಿಹರದ ಬೀಡಿ ಕಾರ್ಮಿಕರ ಆಸ್ಪತ್ರೆ ವೈದ್ಯಾಧಿಕಾರಿ ತಿಳಿಸಿದ್ದಾರೆ.

# ಹಳೆ ಊರಲ್ಲಿನ ಹಳೆ ಕಾಲದ ಗಣೇಶೋತ್ಸವದ ಸ್ವಾರಸ್ಯಗಳು




**ಚತುರ್ಥಿಯಂದು ಸ್ಥಾಪಿಸಿದ ಗಣೇಶನನ್ನು ನೋಡಲು ಜನ ಹೋಗುವುದು ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ಭರದಿಂದ ನಡೆಯುತ್ತಿವೆ.**

## ನಿಜಾ ಗಣಪತಿ ಲೆಕ್ಕಕ್ಕೆ ಸೇರ್ಸಂಗಿಲ್ಲ

> ನಮ್ಮ ಬಾಲ್ಯದಲ್ಲಿ ಹಳೆ ದಾವಣಗೆರೆ ಭಾಗದಲ್ಲಿನ ಗಣೇಶೋತ್ಸವದ ಸ್ವಾರಸ್ಯ...
> - ಹೆಚ್.ಬಿ.ಮಂಜುನಾಥ, ಹಿರಿಯ ಪತ್ರಕರ್ತ

ನಮ್ಮ ವಿದ್ಯಾರ್ಥಿ ದೆಸೆಯಲ್ಲಿ ನಮಗಿಂತ ಚಿಕ್ಕ ಮಕ್ಕಳು ಗಣೇಶ ಚತುರ್ಥಿಯ ದಿನ ಡಬ್ಬಿಯಲ್ಲೋ, ಕಾಗದದ ಪೊಟ್ಟಣದಲ್ಲೋ ಒಂದಷ್ಟು ಅಕ್ಷತೆ ಕಾಳನ್ನು ಹಿಡಿದುಕೊಂಡು ಮನೆ-ಮನೆಗೂ ಹೋಗಿ, ಹೋಗಿ ಎನ್ನುವುದಕ್ಕಿಂತ ನುಗ್ಗಿ ಗಣಪತಿಯ ಮೇಲೆ ಅಕ್ಷತೆ ಎರಚಿ ಲೆಕ್ಕ ಮಾಡುತ್ತಾ ಮಾರನೆಯ ದಿನ 'ನಂದು ನೂರು ಆದ್ವು', 'ನಂದು ಇನ್ನೂರಾದ್ವು' ಎಂದೆಲ್ಲಾ ಲೆಕ್ಕ ಹೇಳುವ ಸಂಭ್ರಮ ನಡೆಯುತ್ತಿತ್ತು.



ಹಾಗೆ ಹೇಳುವಾಗ ಒಮ್ಮೆ ಮಕ್ಕಳು 'ನಿಜಾ ಗಣೇಶ ಲೆಕ್ಕಕ್ಕೆ ಸೇರ್ಸಂಗಿಲ್ಲ' ಎಂದವು. ಏನಿದು 'ನಿಜಾ ಗಣೇಶ?!' ಎಂದು ವಿಚಾರಿಸಿದಾಗ ತಿಳಿಯಿತು. ಹಾಗೆ ಮನೆ ಮನೆಗೂ ಹೋಗುವ ಮಕ್ಕಳು ದೇವಸ್ಥಾನಗಳಿಗೂ ಹೋಗಿ ಅಲ್ಲಿ ಇಟ್ಟಿರುವ ಗಣಪತಿಗೂ ಅಕ್ಷತೆ ಎರಚಿ ತಮ್ಮ ಲೆಕ್ಕಕ್ಕೆ ಸೇರಿಸಿಕೊಳ್ಳುತ್ತಿದ್ದರು. ಚೌಕಿಪೇಟೆಯಲ್ಲಿ ಬರುವಾಗ ಬಕ್ಕೇಶ್ವರ ದೇವಸ್ಥಾನದಲ್ಲಿ ಇಟ್ಟ ಗಣಪತಿಗೂ ಅಕ್ಷತೆ ಹಾಕಿ ಮುಂದೆ ಬಂದು ಜೈನ ಬಾಂಧವರ ಶ್ರೀ ಸುಪಾರ್ಶ್ವನಾಥ ದೇವಸ್ಥಾನ ಅಂದರೆ ರೂಢಿಯಲ್ಲಿ ಮಾರ್ವಾಡಿ ದೇವಸ್ಥಾನ ಎಂದು ಕರೆಯುತ್ತಿದ್ದರು. ಆಗ ಅದು ಹಳೆಯ ಕಟ್ಟಡ, ಮಹಡಿಯ ಮೇಲಿನ ಸುಪಾರ್ಶ್ವನಾಥ ಸ್ವಾಮಿಯ ಪುಟ್ಟ ಮೂರ್ತಿಯ ಮೇಲೂ ಒಂದಷ್ಟು ಅಕ್ಷತೆ ಎರಚಿ ಅದನ್ನೂ ತಮ್ಮ ಗಣಪತಿಯ ಲೆಕ್ಕಕ್ಕೆ ಸೇರಿಸಿಕೊಳ್ಳುತ್ತಿದ್ದರು.

ಆ ಸಂದರ್ಭದಲ್ಲಿ ವಿಗ್ರಹಕ್ಕೆ 'ಅಂಗಿ' ಎಂಬುದಾಗಿ ವಿಶೇಷ ಅಲಂಕಾರ ಮಾಡಿರುತ್ತಿದ್ದರು. ಮಕ್ಕಳು ಹೀಗೆ ನುಗ್ಗಿ ಅಕ್ಷತೆ ಎರಚುವುದರಿಂದ ಅಲಂಕಾರಕ್ಕೆ ಘಾಸಿಯಾಗುತ್ತದೆ ಎಂದು ದೇವಸ್ಥಾನದ ಅರ್ಚಕರು ಆಗ ಆ ದೇವಸ್ಥಾನದಲ್ಲಿ ವ್ರತದ ಅಡುಗೆ ಮಾಡುವ ರಾಜಸ್ಥಾನ ಮೂಲದ 'ಸೋಪಾ' ಎಂಬ ಅಡುಗೆಭಟ್ಟನಿಗೆ ದೇವಸ್ಥಾನದ ಮುಂಭಾಗದಲ್ಲಿ ಕೂರಲು ಹೇಳಿ, ಅಕ್ಷತೆ ಹಾಕಲು ಧಾವಿಸುವ ಮಕ್ಕಳನ್ನು ತಡೆದು 'ಇಲ್ಲಿ ಗಣೇಶ ಇಲ್ಲ ಹೋಗಿ' ಎಂದು ಹೇಳಲು ಸೂಚಿಸಿದರು.

ರಾಜಸ್ಥಾನದಿಂದ ಬಂದ ಸೋಪನಿಗೆ ಕನ್ನಡ ಬರುತ್ತಿರಲಿಲ್ಲ. ಅಕ್ಷತೆ ಎರಚಲು ಧಾವಿಸುವ ಮಕ್ಕಳನ್ನು ತಡೆದು ಆತ 'ಗಣೇಶ ನೀ ಜಾ' ಎನ್ನುತ್ತಿದ್ದ. 'ನೀ' ಎಂದರೆ 'ಇಲ್ಲ', 'ಜಾ' ಎಂದರೆ 'ಹೋಗು' ಎಂದರ್ಥ ಇರಬೇಕು. ಆದರೂ ಕೆಲ ಮಕ್ಕಳು ಸೋಪನ ಮೇಲೇ ನಾಲ್ಕು ಅಕ್ಷತೆ ತೂರಿ ಅದನ್ನೂ ಗಣೇಶನ ಲೆಕ್ಕಕ್ಕೆ ಸೇರಿಸಿ ಮಾರನೇ ದಿನ ಹೇಳುತ್ತಿದ್ದರು. ಅದಕ್ಕೇ ಮತ್ತೆ ಕೆಲ ಮಕ್ಕಳು 'ನಿಜಾ ಗಣೇಶ ಲೆಕ್ಕಕ್ಕೆ ಸೇರ್ಸಂಗಿಲ್ಲ' ಎಂದು ಹೇಳಿದ್ದು.

## ರೈಲ್ವೆ ಹಳಿಗಳ ಮೇಲೆ ವಸ್ತುಗಳನ್ನು ಇಡುವುದು, ಕಲ್ಲೆಸೆಯುವುದು ಅಪರಾಧ

ದಾವಣಗೆರೆ, ಸೆ.29- ರೈಲುಗಳಿಗೆ ಕಲ್ಲು ಎಸೆಯುವುದು, ರೈಲ್ವೆ ಹಳಿಯ ಮೇಲೆ ಕಲ್ಲು ಅಥವಾ ಬೇರೆ ವಸ್ತುಗಳನ್ನು ಇಡುವುದು ತಪ್ಪು ಎಂದು ರೈಲ್ವೇ ರಕ್ಷಣಾ ದಳದ ಇನ್ಸ್‌ಪೆಕ್ಟರ್ ಬಿ.ಎನ್. ಕುಬೇರಪ್ಪ ತಿಳಿಸಿದರು.

ಶ್ರೀರಾಮನಗರದಲ್ಲಿರುವ ಎಸ್.ಓ.ಜಿ ಕಾಲೋನಿಯ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆ ಹಾಗೂ ಲಯನ್ಸ್ ಇಂಗ್ಲಿಷ್ ಮೀಡಿಯಂ ಶಾಲೆಯಲ್ಲಿ ರೈಲ್ವೆ ಸುರಕ್ಷಾ ಜಾಗೃತಿ ಕಾರ್ಯಕ್ರಮದಲ್ಲಿ ಮಾತಾನಾಡಿದ ಅವರು, ಎಲ್ಲಿ ಬೇಕೆಂದರಲ್ಲಿ ಹಳಿ ದಾಟುವುದು, ಇಂತಹ ಕೃತ್ಯಗಳಿಂದ ಜೀವ ಮತ್ತು ಆಸ್ತಿಯ ಹಾನಿಯಾಗುತ್ತದಲ್ಲದೇ, ರೈಲ್ವೆ ಅಧಿನಿಯಮ 2003 ರ ಪ್ರಕಾರ ದಂಡನೀಯ ಅಪರಾಧವಾಗಿರುತ್ತದೆ ಎಂದು ತಿಳಿಸಿದರು.

ಪಿಎಸ್ಐ ಲಕ್ಷ್ಮವ್ವ ಎನ್. ಪಾಟೀಲ್, ಮತ್ತು ಸಿಬ್ಬಂದಿಗಳು ಪ್ರೌಢಶಾಲೆಯ ಮುಖ್ಯಶಿಕ್ಷಕಿ ಸತ್ಯವತಿ, ಮುಖಂಡರಾದ ಕಲ್ಲೇಶಪ್ಪ, ಬಾತಿ ಶಿವಕುಮಾರ್, ಆಂಜಿನಪ್ಪ, ಎಲ್ ಜಯಪ್ಪ ಮತ್ತು ಇತರರು ಕಾರ್ಯಕ್ರಮದಲ್ಲಿ ಹಾಜರಿದ್ದರು.

# ವಿಶಾಲವಾದ ತಳಹದಿಯ ಮೇಲೆ ಮಹಿಳಾ ನಾಯಕತ್ವದಲ್ಲಿ ದೇಶವನ್ನು ಕಟ್ಟುವ ಅಗತ್ಯವಿದೆ



**ಯುವ ಮತ್ತು ಮಹಿಳಾ ನಾಯಕತ್ವ ಶಿಬಿರದಲ್ಲಿ ವಕೀಲರ ಸಂಘದ ಅಧ್ಯಕ್ಷ ಎಲ್.ಎಚ್.ಅರುಣ್ ಕುಮಾರ್ ಅಭಿಮತ**

ದಾವಣಗೆರೆ. ಸೆ. 29 - ಪ್ರಸ್ತುತ ಧರ್ಮ, ಜಾತಿ, ವರ್ಗ, ಲಿಂಗಬೇಧವನ್ನು ಮೀರಿ ವಿಶಾಲವಾದ ತಳಹದಿಯ ಮೇಲೆ ಮಹಿಳಾ ನಾಯಕತ್ವದಲ್ಲಿ ದೇಶವನ್ನು ಕಟ್ಟುವ ಅಗತ್ಯವಿದೆ ಎಂದು ವಕೀಲರ ಸಂಘದ ಅಧ್ಯಕ್ಷ ಎಲ್.ಎಚ್. ಅರುಣ್ ಕುಮಾರ್ ಹೇಳಿದರು.

ನಗರದ ರೋಟರಿ ಬಾಲಭವನದಲ್ಲಿ ಸ್ಲಂ ಜನಾಂದೋಲನಾ ಕರ್ನಾಟಕ ಹಾಗೂ ಸಾವಿತ್ರಿ ಬಾಯಿ ಪುಲೆ ಮಹಿಳಾ ಸಂಘಟನೆ ಜಿಲ್ಲಾ ಸಮಿತಿಯಿಂದ ಕಳೆದ ವಾರ ಹಮ್ಮಿಕೊಂಡಿದ್ದ ಯುವ ಮತ್ತು ಮಹಿಳಾ ನಾಯಕತ್ವ ಶಿಬಿರ ಹಾಗೂ ಅಸಂಘಟಿತ ವಲಯದ ಕಾರ್ಮಿಕರಿಗೆ ಮಾಹಿತಿ ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಭಾರತೀಯ ಸಂವಿಧಾನವು ಮಹಿಳೆಯರೆಲ್ಲರಿಗೂ ಸಮಾನತೆ, ಸಮಾನ ಅವಕಾಶ ಮತ್ತು ಸವಲತ್ತುಗಳನ್ನು ಹೊಂದುವ ಅವಕಾಶವನ್ನು ಕಲ್ಪಿಸಿದೆ. ಮಹಿಳೆಯರು ಸ್ಥಳೀಯ ಚಳುವಳಿಗಳ ಮುಖಾಂತರ ನಾಯಕಿಯರಾಗಿ ಮುಂದೆ ಬಂದಿದ್ದರೆ. ಅದೇ ನಿಟ್ಟಿನಲ್ಲಿ ಮಹಿಳೆಯರು ರಾಷ್ಟ್ರಮಟ್ಟದಲ್ಲಿ ಪಾಲ್ಗೊಳ್ಳಬೇಕಾಗಿದೆ.

ಇದಕ್ಕಾಗಿ ಮಹಿಳೆಯರಲ್ಲಿ ಆತ್ಮವಿಶ್ವಾಸ ಹೆಚ್ಚಿಸುವಂತಹ ಮತ್ತು ಮಹಿಳೆಯರೇ ಸ್ವಯಂ ನಿರ್ಧಾರ ಕೈಗೊಳ್ಳುವಂತಹ ಅವಕಾಶ ಮಾಡಿಕೊಡಬೇಕಿದೆ. ಮಹಿಳೆಯರು ಸಮಾಜದ ಎಲ್ಲಾ ಸಮುದಾಯಗಳಲ್ಲಿ ಭಾಗವಹಿಸುವಂತಹ ವಾತಾವರಣ ಕಲ್ಪಿಸಬೇಕಾಗಿರುವುದು ನಮ್ಮ ಕರ್ತವ್ಯವಾಗಿದೆ ಎಂದು ತಿಳಿಸಿದರು.

ಕಳೆದ 75 ವರ್ಷಗಳಿಂದಲೂ ಪುರುಷರಿಗೆ ಸಮಾನವಾದ ಕೆಲಸಗಳನ್ನು ಮಾಡುತ್ತಾ ಬಂದಿರುವ ಮಹಿಳೆಯರು ಇಂದಿಗೂ ಕೂಡ ದಬ್ಬಾಳಿಕೆ ದೌರ್ಜನ್ಯ ಎದುರಿಸಬೇಕಾಗಿದೆ. ರಾಜಕೀಯದಲ್ಲಿ ಮಹಿಳೆಯರನ್ನು ಬದಿಗಿಟ್ಟು ಪುರುಷ ಪ್ರಧಾನ ವ್ಯವಸ್ಥೆ ವಿಜೃಂಭಿಸುತ್ತಿರುವುದು ಸರಿಯಲ್ಲ. ಇಂದಿರಾ ಗಾಂಧಿ ಪ್ರಧಾನಿಯಾದರು ಮತ್ತು ಇತರೆ ಮಹಿಳೆಯರು ರಾಷ್ಟ್ರಪತಿಗಳಾದರು ಕೂಡ ದೇಶದ ಮಹಿಳೆಯರ ಪರಿಸ್ಥಿತಿ ಮಾತ್ರ ಸುಧಾರಿಸಿಲ್ಲ. ಅನೇಕ ಅವಕಾಶಗಳಿಂದ ತಾಯಂದಿರು ವಂಚಿತರಾಗು ತ್ತಿದ್ದಾರೆ. ಈ ಸಂದರ್ಭದಲ್ಲಿ ಮಹಿಳೆಯರ ಸಬಲೀಕರಣ ಮತ್ತು ಅವರ ನಾಯಕತ್ವ ದೇಶಕ್ಕೆ ಅಗತ್ಯವಾಗಿದೆ ಎಂದು ಪ್ರತಿಪಾದಿಸಿದರು.

ಜನಾಂದೋಲನ ಸಮಿತಿ ರಾಜ್ಯ ಸಂಚಾಲಕ ಎ. ನರಸಿಂಹ ಮೂರ್ತಿ ಪ್ರಾಸ್ತಾವಿಕವಾಗಿ ಮಾತನಾಡಿ, ಆರ್ಥಿಕ ಸುಸ್ಥಿರತೆ ಬೇಕಾದರೆ ಮಹಿಳೆಯರಿಗೆ ನಾಯಕತ್ವ ಅಗತ್ಯವಾಗಿದೆ. ಈ ನಿಟ್ಟಿನಲ್ಲಿ ಈ ರೀತಿಯ ಕಾರ್ಯಾಗಾರಗಳು ಸಹಕಾರಿಯಾಗಿವೆ ಎಂದು ಹೇಳಿದರು.

ಜಿಲ್ಲಾ ಕಾರ್ಮಿಕ ಅಧಿಕಾರಿ ಇಬ್ರಾಹಿಂ ಮಾತ ನಾಡಿ, ಕಾರ್ಮಿಕರ ಪರವಾದ ಅನೇಕ ಕಾರ್ಯಕ್ರಮಗಳನ್ನು ಸರ್ಕಾರ ಜಾರಿಗೆ ತಂದಿದೆ. ಕಾಲ ಕಾಲಕ್ಕೆ ಸರಿಯಾಗಿ ಸಂಘಟಿತ ವಲಯದಲ್ಲಿ ನೋಂದಣಿ ಮಾಡಿಸಿಕೊಂಡು ಸರ್ಕಾರದ ಸೌಲಭ್ಯಗಳನ್ನು ಪಡೆದುಕೊಳ್ಳಬಹುದು ಎಂದು ತಿಳಿಸಿದರು.

ಸಂಘಟನೆಯ ಗೌರವಾಧ್ಯಕ್ಷ ಎಸ್.ಎಲ್. ಆನಂದಪ್ಪ ಅಧ್ಯಕ್ಷತೆ ವಹಿಸಿದ್ದರು. ಅಖಿಲ ಕರ್ನಾಟಕ ಗೃಹ ಕಾರ್ಮಿಕರ ವೃತ್ತಿ ಸಂಘಟನೆಯ ಮುಖಂಡೆ ಶ್ರೀಮತಿ ರಂಗಮ್ಮ, ಸ್ಲಂ ಜನಾಂದೋಲನದ ಪ್ರಧಾನ ಕಾರ್ಯದರ್ಶಿ ರೇಣುಕಾ ಯಲ್ಲಮ್ಮ, ಸ್ಲಂ ಜನಾಂದೋಲನದ ಕರ್ನಾಟಕದ ಅಧ್ಯಕ್ಷ ಎಂ. ಶಬ್ಬೀರ್‌ಸಾಬ್, ನಿವೇಶನ ರಹಿತರ ಹೋರಾಟ ಸಮಿತಿಯ ಅಧ್ಯಕ್ಷೆ ಶ್ರೀಮತಿ ಮಂಜುಳ ಹಾಗೂ ಕಾರ್ಯಕರ್ತರುಗಳಾದ ಜಂಷಿದಾ ಬಾನು, ಬಾಲಪ್ಪ, ರೇಷ್ಮಾ, ರೇಖಾ, ಅಸ್ಮಾ, ರಾಜೇಶ್ವರಿ, ಬೀಬೀಜಾನ್, ಗೀತಮ್ಮ, ಚಮನ್, ಸಲಾಂ ಸಾಬ್, ಆರಿಫ್, ಪರ್ವಿನ್ ಬಾನು, ರಜಿಯಾ ಬೀ, ನೂರ್‌ಜಹಾನ್, ಪವಿತ್ರ, ಸಿಕಂದರ್, ಯೂಸುಫ್ ಸಾಬ್, ಮಹಬೂಬ್ ಸಾಬ್, ಡಿ.ಕೆ. ನಯಾಜ್ ಎಲ್ಲಾ ಪದಾಧಿಕಾರಿಗಳು ಇತರರು ಉಪಸ್ಥಿತರಿದ್ದರು.



## ಜಿಲ್ಲಾ ಅತ್ಯುತ್ತಮ ಸೇವಾ ಶಿಕ್ಷಕಿ ಪ್ರಶಸ್ತಿ ಪ್ರದಾನ

ಹರಿಹರ, ಸೆ. 29 - ಗುತ್ತೂರು ಕಾಲೋನಿಯ ಶ್ರೀ ರಾಮಕೃಷ್ಣ ಇಂಟರ್ ನ್ಯಾಷನಲ್ ಶಾಲೆಯ ಸಹ ಶಿಕ್ಷಕಿ ಕು. ಆರ್. ಶಶಿಕಲಾ ಅವರಿಗೆ ಜಿಲ್ಲಾ ಅತ್ಯುತ್ತಮ ಸೇವಾ ಶಿಕ್ಷಕಿ ಪ್ರಶಸ್ತಿ ಲಭಿಸಿದೆ. ದಾವಣಗೆರೆಯ ಕುವೆಂಪು ಕನ್ನಡ ಭವನದಲ್ಲಿ ಜಿಲ್ಲಾ ಖಾಸಗಿ ಶಾಲೆಗಳ ಆಡಳಿತ ಮಂಡಳಿಗಳ ಒಕ್ಕೂಟದ ವತಿಯಿಂದ ಜಿಲ್ಲಾ ಅತ್ಯುತ್ತಮ ಶಿಕ್ಷಕಿ ಸೇವಾ ಪ್ರಶಸ್ತಿ ಹಾಗೂ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಅಧಿಕ ಅಂಕ ಗಳಿಸಿದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ಶಶಿಕಲಾ ಅವರಿಗೆ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಈ ಸಂದರ್ಭದಲ್ಲಿ ಸಂಸ್ಥೆಯ ಕಾರ್ಯದರ್ಶಿ ವಿಜಯಕುಮಾರ್, ನಿರ್ದೇಶಕರುಗಳಾದ ಶ್ರೀಮತಿ ಸಹನ ವಿಜಯಕುಮಾರ್, ಶ್ರೀಮತಿ ಸ್ನೇಹ ಕಿರಣ್ ಕುಮಾರ್, ಮುಖ್ಯ ಶಿಕ್ಷಕರಾದ ಉದಯಕುಮಾರ್ ಹಾಗೂ ಇತರರು ಪಾಲ್ಗೊಂಡಿದ್ದರು.

## ವಿದ್ಯಾರ್ಥಿವೇತನಕ್ಕಾಗಿ ಅರ್ಜಿ ಸಲ್ಲಿಕೆ ಅವಧಿ ವಿಸ್ತರಣೆ

ದಾವಣಗೆರೆ, ಸೆ. 29 - ಪ್ರಸಕ್ತ ಸಾಲಿನ ಮೆಟ್ರಿಕ್ ನಂತರದ ಕೋರ್ಸುಗಳಾದ ಪಿ.ಯು.ಸಿ. ಮತ್ತು ಸಮಾನಾಂತರ, ಸಾಮಾನ್ಯ ಪದವಿ ಮತ್ತು ಸಂಯೋಜಿತ ಪದವಿ ಕೋರ್ಸುಗಳಿಗೆ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಹಾಗೂ ಪ್ರವರ್ಗ-1 ರ ಅಲೆಮಾರಿ, ಅರೆ ಅಲೆಮಾರಿ ವಿದ್ಯಾರ್ಥಿಗಳಿಂದ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ, ಶುಲ್ಕ ವಿನಾಯಿತಿ ಮತ್ತು ವಿದ್ಯಾಸಿರಿ-ಊಟ ಮತ್ತು ವಸತಿ ಸಹಾಯ ಯೋಜನೆ ಸೌಲಭ್ಯಕ್ಕಾಗಿ ಈಗಾಗಲೇ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದ್ದು, ಅರ್ಜಿ ಸಲ್ಲಿಸುವ ಅವಧಿಯನ್ನು ಅಕ್ಟೋಬರ್ 15 ರ ವರೆಗೆ ವಿಸ್ತರಿಸಲಾಗಿದೆ ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಅಧಿಕಾರಿ ತಿಳಿಸಿದ್ದಾರೆ.

## ಹಾಸ್ಟೆಲ್‌ಗಳಿಗೆ ಜಿಲ್ಲಾಧಿಕಾರಿ ಗಂಗಾಧರ ಸ್ವಾಮಿ ಅನಿರೀಕ್ಷಿತ ಭೇಟಿ

ದಾವಣಗೆರೆ, ಸೆ. 29 - ಸಮಾಜ ಕಲ್ಯಾಣ ಇಲಾಖೆಯಿಂದ ನಡೆಸಲಾಗುವ ಎಂ.ಸಿ.ಸಿ ಬಿ. ಬ್ಲಾಕ್‌ನಲ್ಲಿನ ಮೆಟ್ರಿಕ್ ಪೂರ್ವ ಹಾಗೂ ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿನಿಲಯಕ್ಕೆ ಮಂಗಳವಾರ ಜಿಲ್ಲಾಧಿಕಾರಿ ಜಿ.ಎಂ.ಗಂಗಾಧರಸ್ವಾಮಿ ಅನಿರೀಕ್ಷಿತ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಹಾಸ್ಟೆಲ್‌ಗೆ ರಾತ್ರಿ ಭೇಟಿ ನೀಡಿ ಶುಚಿತ್ವ, ಊಟೋಪಚಾರ, ಮೆನು ಅನ್ವಯ ನೀಡಲಾಗುತ್ತಿರುವ ಆಹಾರದ ಬಗ್ಗೆ ಮತ್ತು ಆಹಾರದ ಗುಣಮಟ್ಟದ ಬಗ್ಗೆ ಪರಿಶೀಲನೆ ನಡೆಸಿ ವಿದ್ಯಾರ್ಥಿಗಳಿಂದ ಮಾಹಿತಿ ಪಡೆದರು. ವಿದ್ಯಾರ್ಥಿಗಳಿಗೆ ಚನ್ನಾಗಿ ವ್ಯಾಸಂಗ ಮಾಡುವ ಮೂಲಕ ಜಿಲ್ಲೆಗೆ ಉತ್ತಮ ಹೆಸರು ತರುವಂತಾಗಬೇಕೆಂದು ತಿಳಿಸಿ ಹಾಸ್ಟೆಲ್‌ನಲ್ಲಿ ಯಾವುದೇ ತರದ ಕುಂದುಕೊರತೆಗಳಿದ್ದಲ್ಲಿ ನನ್ನ ಗಮನಕ್ಕೆ ತರಬೇಕೆಂದು ತಿಳಿಸಿದರು.

ಈ ವೇಳೆ ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ನಾಗರಾಜ್ ಉಪಸ್ಥಿತರಿದ್ದರು.

## ಕ್ಯಾನ್ಸರ್ ತಡೆಗಟ್ಟುವಿಕೆ ಸಾಧ್ಯ

**(1ನೇ ಪುಟದಿಂದ)** ಹೇಳಿದರು.

ಎಸ್.ಎಸ್. ನಾರಾಯಣ ಹೃದಯಾಲಯದ ವ್ಯವಸ್ಥಾಪಕ ಸುನೀಲ್ ಭಂಡಾರಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಷಣ್ಮುಖಪ್ಪ, ಜಿಲ್ಲಾ ಶಸ್ತ್ರ ಚಿಕಿತ್ಸಾ ತಜ್ಞ ಡಾ. ನಾಗರಾಜ್, ಡಾ. ಮಲ್ಲೇಶ್, ಡಾ. ಧನಂಜಯ, ಪ್ರಶಾಂತ್ ಸೇರಿದಂತೆ ವಿವಿಧ ವಿಭಾಗಗಳ ವೈದ್ಯರು, ವಿದ್ಯಾರ್ಥಿಗಳು ಭಾಗವಹಿಸಿದ್ದರು.

ರೆಡ್‌ಕ್ರಾಸ್, ಲೈಫ್‌ಲೈನ್ ಸ್ವಯಂ ಪ್ರೇರಿತ ರಕ್ತದಾನಿಗಳ ಸಮೂಹ, ಜಿಲ್ಲಾ ಯೋಗ ಒಕ್ಕೂಟ, ಲಯನ್ಸ್ ಕ್ಲಬ್, ರೋಟರಿ ಸಂಸ್ಥೆ, ದಾಣಗೆರೆ ತಾಲ್ಲೂಕು ಫೋಟೋ ಗ್ರಾಫರ್ಸ್ ಅಂಡ್ ವಿಡಿಯೋ ಗ್ರಾಫರ್ಸ್ ಅಸೋಸಿಯೇಷನ್ ಪದಾಧಿಕಾರಿಗಳು, ವಿವಿಧ ಸಂಘ-ಸಂಸ್ಥೆಗಳ ಪದಾಧಿಕಾರಿಗಳು, ಸಾರ್ವಜನಿಕರು ಪಾಲ್ಗೊಂಡಿದ್ದರು.



## ಮಲೇಬೆನ್ನೂರು : ಕುಂಬಳೂರು ಚಿಟ್ಟಕ್ಕಿ ಸ್ಕೂಲ್ ಜಿಲ್ಲಾ ಮಟ್ಟಕ್ಕೆ ಆಯ್ಕೆ

ಮಲೇಬೆನ್ನೂರು, ಸೆ. 29 - ಹರಿಹರ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿ ಹಾಗೂ ಹರಿಹರ ಶಾಲಾ ಶಿಕ್ಷಣ ಇಲಾಖೆ ಇವರ ಆಶ್ರಯದಲ್ಲಿ ಶುಕ್ರವಾರ ಹರಿಹರ ನಗರದಲ್ಲಿ ಹಮ್ಮಿಕೊಂಡಿದ್ದ ಹಿರಿಯ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳ ತಾಲ್ಲೂಕು ಮಟ್ಟದ ಕ್ರೀಡಾಕೂಟದಲ್ಲಿ ಕುಂಬಳೂರು ಗ್ರಾಮದ ಚಿಟ್ಟಕ್ಕಿ ಇಂಟರ್ ನ್ಯಾಷನಲ್ ಸ್ಕೂಲ್ ನ ಬಾಲಕರು ಕಬಡ್ಡಿ ಗುಂಪು ಆಟ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನಗಳಿಸುವ ಮೂಲಕ ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

**ವಿಜೇತ ವಿದ್ಯಾರ್ಥಿಗಳು :** ಗಣೇಶ್ ಎಸ್.ವೈ., ಶ್ರೇಯಸ್ ಎಸ್. ಹೆಚ್., ತರುಣ್ ಸಿ.ಆರ್, ವಿನಾಯಕ ಎಸ್. ಕೆ, ಮುರುಳಿ ಕೆ.ಹೆಚ್, ಸಿದ್ದಾರ್ಥ್ ಪಿ. ಯು, ಯಶವಂತ್ ಕೆ, ಧ್ರುವ ಹೆಚ್.ಎಸ್, ಮಹಮ್ಮದ್ ಗೌಸ್ ಖಾನ್, ರಾಕೇಶ್ ಕೆ.ಎನ್., ಮೇಘರಾಜ ಬಿ.ಎಂ ,ಅರ್ಜುನ್ ಬಿ.ಆರ್, ಧನುಷ್ ಕೆ.ವೈ, ಎಂಬ ವಿದ್ಯಾರ್ಥಿಗಳು ಕಬಡ್ಡಿ ಆಟದಲ್ಲಿ ಪ್ರಥಮ ಸ್ಥಾನದೊಂದಿಗೆ ವಿಜೇತರಾಗುವ ಮೂಲಕ ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಚಿಟ್ಟಕ್ಕಿ ರಮೇಶ್ , ಆಡಳಿತಾಧಿಕಾರಿ ಎಸ್.ಕೆ. ಕುಮಾರ್, ಪ್ರಾಂಶುಪಾಲ ಚೇತನ್ ಕುಮಾರ್ ಹಂಪಕ್ಕನವರ್ , ಉಪ ಪ್ರಾಂಶುಪಾಲ ಅಖಿಲೇಶ್ವರಿ, ಕ್ರೀಡಾ ವ್ಯವಸ್ಥಾಪಕ ವೀರಭದ್ರಾಚಾರ್, ದೈಹಿಕ ಶಿಕ್ಷಕ ರಾಘವೇಂದ್ರ , ಕ್ರೀಡಾ ಉಸ್ತುವಾರಿ ಮುತ್ತುರಾಜ್ , ತರಬೇತುದಾರರಾದ ವಿಕಾಸ್ ಅವರು ವಿಜೇತ ವಿದ್ಯಾರ್ಥಿಗಳನ್ನು ಅಭಿನಂದಿಸಿದ್ದಾರೆ.

# ದೇಶದ ಆರ್ಥಿಕಾಭಿವೃದ್ಧಿಯಲ್ಲಿ ಸಹಕಾರ ಸಂಘಗಳ ಪಾತ್ರ ದೊಡ್ಡದು

## ರಾಣೇಬೆನ್ನೂರು ಜೇಸಿಸ್ ಕೋ-ಆಪ್ ಸೊಸೈಟಿ ಅಧ್ಯಕ್ಷ ಶ್ರೀನಿವಾಸ ದೊಡ್ಡನಾಗಪ್ಪ ಕಾಕಿ



ರಾಣೇಬೆನ್ನೂರು, ಸೆ.29- ಸಹಕಾರ ಸಂಘ-ಸಂಸ್ಥೆಗಳು ದೇಶ ಕಟ್ಟುವ ಸತ್ಕಾರ್ಯದಲ್ಲಿ ತೊಡಗಿದ್ದು, ಆರ್ಥಿಕ ಅಭಿವೃದ್ಧಿ ಹೆಚ್ಚಿಸುವಲ್ಲಿ ಪ್ರಮುಖ ಪಾತ್ರ ವಹಿಸಿವೆ ಎಂದು ಜೇಸಿಸ್ ಕ್ಷೇಮಾಭಿವೃದ್ಧಿ ಕ್ರೆಡಿಟ್ ಕೋ-ಆಪ್ ಸೊಸೈಟಿ ಅಧ್ಯಕ್ಷ ಶ್ರೀನಿವಾಸ ದೊಡ್ಡನಾಗಪ್ಪ ಕಾಕಿ ಹೇಳಿದರು. ನಗರದ ಜೇಸಿವಾಣಿ ಅರಮನೆಯಲ್ಲಿ ಸೊಸೈಟಿಯ ವಾರ್ಷಿಕ ಸಾಮಾನ್ಯ ಸಭೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸಹಕಾರ ಕ್ಷೇತ್ರವನ್ನು ಬೆಳೆಸಿದಾಗ ಮಾತ್ರ ದೇಶದ ಅಭಿವೃದ್ಧಿ ಸಾಧ್ಯವಾಗಿದ್ದು, ಇದಕ್ಕೆ ಸದಸ್ಯರ ಪಾತ್ರ ಬಹಳ ಮುಖ್ಯವಾಗಿರುತ್ತದೆ. ಸೊಸೈಟಿಯ ಸರ್ವಾಂಗೀಣ ಪ್ರಗತಿಗೆ ಸರ್ವಸದಸ್ಯರ, ಸಿಬ್ಬಂದಿಗಳ ಸಹಕಾರ ಅವಶ್ಯವಿದೆ. ಮುಂದಿನ ದಿನಮಾನಗಳಲ್ಲಿ ಇನ್ನಷ್ಟು ಪ್ರಗತಿ ಸಾಧಿಸಲು ಅನೇಕ ಯೋಜನೆಗಳನ್ನು ಹಮ್ಮಿಕೊಳ್ಳಲು ಚಿಂತನೆ ನಡೆಸಲಾಗಿದೆ ಎಂದರು.

ಸಹಕಾರಿ ಸಂಘಗಳು ಅಭಿವೃದ್ಧಿಗೆ ಬಾಕಿ ವಸೂಲಾತಿ ಹಾಗೂ ಗ್ರಾಹಕರ ವಿಶ್ವಾಸ ಮುಖ್ಯವಾಗಿರುತ್ತದೆ. ಕಳೆದ ವರ್ಷಕ್ಕಿಂತ ಈ ಬಾರಿ ಶೇ.25ರಷ್ಟು ಠೇವಣೆ ಹೆಚ್ಚಾಗಿದೆ. ಶೇ.60ರಷ್ಟು ಸಾಲ ಸೌಲಭ್ಯ ನೀಡಲಾಗಿದೆ. ಶೇ.80ರಷ್ಟು ನಿವ್ವಳ ಲಾಭ ಬಂದಿದೆ. ಸದಸ್ಯರಿಗೆ ಶೇ.12ರಷ್ಟು ಡಿವಿಡೆಂಡ್ ನೀಡಲಾಗಿದೆ ಎಂದರು.

ಜೇಸಿಐ ಘಟಕದ ಅಧ್ಯಕ್ಷ ಶಿವಶಂಕರ, ಉಪಾಧ್ಯಕ್ಷ ಪ್ರಭುಲಿಂಗಪ್ಪ ಹಲಗೇರಿ, ನಿರ್ದೇಶಕರಾದ ಶಿವಾನಂದ ಹಿತ್ತಲಮನಿ, ಎಚ್. ಎನ್.ದೇವಕುಮಾರ, ಭೀಮಣ್ಣ ಕಾಕಿ, ಜಯಣ್ಣ ಕರಡೇರ, ಮಂಜುನಾಥ ಗೋಂದಕರ, ಗದಿಗೆಪ್ಪ ಬಗಾಡೆ, ಲಕ್ಷ್ಮಣ ಕನಕಿ, ಲತಾ ಅತಡಕರ, ಶಶಿಕಲ ಮಾಗನೂರ, ಪ್ರಕಾಶ ಗಚ್ಚಿನಮಠ, ಪ್ರಭು ಎಳೆಹೊಳೆ, ಎನ್. ಬಸಪ್ಪ, ವ್ಯವಸ್ಥಾಪಕ ಪ್ರವೀಣ ಸುರಹೊನ್ನಿ, ಸಹಾಯಕ ಪ್ರಕಾಶ ಹಿರೇಕೆರೂರ, ಜೇಸಿ ಸದಸ್ಯರಾದ ವೆಂಕಟೇಶ ಕಾಕಿ, ಸಿದ್ದಪ್ಪ ಅತಡಕರ, ಮೃತ್ಯುಂಜಯ ಮಾಗನೂರ, ಜೇಸಿಐ ಘಟಕದ ಕಾರ್ಯದರ್ಶಿ ಕುಮಾರ ಬೆಣ್ಣೆ, ಲಕ್ಷ್ಮಿ ಅಡಕಿ ಹಾಗೂ ಸೊಸೈಟಿಯ ಸದಸ್ಯರಿದ್ದರು.

## ಅಂಗನವಾಡಿ ಕಾರ್ಯಕರ್ತೆ : ಅರ್ಜಿ

ದಾವಣಗೆರೆ, ಸೆ. 29 - ಜಿಲ್ಲೆಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಡಿ ಕಾರ್ಯನಿರ್ವಹಿಸು ತ್ತಿರುವ ಚನ್ನಗಿರಿ ತಾಲ್ಲೂಕಿನ ಶಿಶು ಅಭಿವೃದ್ಧಿ ಯೋಜನೆಗಳ ವ್ಯಾಪ್ತಿ ಯಲ್ಲಿ ಬರುವ ಅಂಗನವಾಡಿ ಕೇಂದ್ರಗಳಲ್ಲಿ ಖಾಲಿ ಇರುವ 16 ಅಂಗನವಾಡಿ ಕಾರ್ಯಕರ್ತೆ ಹಾಗೂ 52 ಅಂಗನವಾಡಿ ಸಹಾ ಯಕಿಯರ ಗೌರವ ಸೇವೆಯ ಹುದ್ದೆಗಳಿಗೆ ನೇಮಕ ಮಾಡಲು ಅರ್ಹ ಮಹಿಳಾ ಹಾಗೂ ಲಿಂಗತ್ವ ಅಲ್ಪ ಸಂಖ್ಯಾತ ಮಹಿಳಾ ಅಭ್ಯರ್ಥಿ ಗಳಿಂದ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸುವ ಅವಧಿಯನ್ನು ಅಕ್ಟೋಬರ್ 10 ವರೆಗೆ ವಿಸ್ತರಿಸಲಾಗಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ರಾಜಾನಾಯ್ಕ ತಿಳಿಸಿದ್ದಾರೆ.


## ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯ ಪಡಿಸುವುದೇನೆಂದರೆ, ದಾವಣಗೆರೆಯ 1ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯದಲ್ಲಿ ಕೆಳಕಂಡ ಷೆಡ್ಯೂಲ್ ಸ್ವತ್ತಿನ ವಿಚಾರವಾಗಿ ನಮ್ಮ ಕಕ್ಷಿದಾರರಾದ **ಶ್ರೀ ಉಮೇಶ್ ಎಸ್.ಎಸ್.** ಮತ್ತು **ಶ್ರೀ ಶಿವಕುಮಾರ ಎಸ್.ಎಸ್.** ಅವರು **ಶ್ರೀ ಚನ್ನಕುಮಾರ್** ಬಿ. ಮತ್ತು **ಶ್ರೀ ಪ್ರಭು** ಎಸ್.ಎಂ. ಅವರ ವಿರುದ್ಧ ಅಸಲು ದಾವಾ ಸಂಖ್ಯೆ 448/2023 ನ್ನು ದಾಖಲಿಸಿದ್ದು, ದಾವೆಯು ಇನ್ನು ವಿಚಾರಣಾ ಹಂತದಲ್ಲಿರುತ್ತದೆ. ಸಾರ್ವಜನಿಕರು ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಕ್ರಯದ ಕರಾರು, ಕ್ರಯಪತ್ರ, ವಿಲ್, ದಾನಪತ್ರ, ಭೋಗ್ಯದ ಕರಾರು ಅಥವಾ ಅಡಮಾನ ಪತ್ರ ಇನ್ನು ಮುಂತಾದ ಯಾವುದೇ ಪತ್ರ ವ್ಯವಹಾರವನ್ನು ಮಾಡಿಕೊಳ್ಳದಂತೆ ಒಂದು ವೇಳೆ ಮಾಡಿಕೊಂಡಿರುವುದಾದಲ್ಲಿ ಮಾನ್ಯ ಘನ ನ್ಯಾಯಾಲಯದ ಅಂತಿಮ ಆದೇಶಕ್ಕೆ ವ್ಯತಿರಿಕ್ತವಾದಲ್ಲಿ ತಾವುಗಳೇ ಹೊಣೆಗಾರರಾಗಿರುತ್ತೀರೆಂದು ಸಾರ್ವಜನಿಕರಿಗೆ ಈ ಪತ್ರಿಕಾ ಪ್ರಕಟಣೆ ಮೂಲಕ ತಿಳಿಯ ಪಡಿಸಲಾಗಿದೆ.

**ನೋಟಿಸ್ 'ಎ' ಷೆಡ್ಯೂಲ್**

ದಾವಣಗೆರೆ ಸಿಟಿ, 1ನೇ ವಾರ್ಡ್, 1ನೇ ಡಿವಿಜನ್, ವಕ್ಕಲಿಗರ ಪೇಟೆಯಲ್ಲಿ ಬರುವ ಮುನಿಸಿಪಲ್ ಹಳೇ ಖಾನೇಷುಮಾರಿ ನಂಬರ್ 820 ಚಾಲ್ತಿ ಮುನಿಸಿಪಲ್ ಡೋರ್ ನಂ. 223 ವುಳ್ಳ ಪೂರಾ ಸ್ವತ್ತಿನ ಪೈಕಿ ದಕ್ಷಿಣ ದಿಕ್ಕಿನ ಕಡೆಗೆ ಬರುವ ಸ್ವತ್ತಿನ ಅಳತೆ ಪೂರ್ವ ಪಶ್ಚಿಮ 11 ಅಡಿ, 10 1/2 ಅಂಗುಲ ಅಗಲ, ಉತ್ತರ ದಕ್ಷಿಣ 43 ಅಡಿ ಉದ್ದವುಳ್ಳ ಪೂರಾ ಜಾಗ ಹಾಗೂ ಜಾಗದಲ್ಲಿ ಈ ಹಿಂದೆ ಇಟ್ಟಿಗೆ ಮತ್ತು ಮಣ್ಣಿನಿಂದ ಗೋಡೆಗಳನ್ನು ಕಟ್ಟಿ ಮೇಲ್ಛಾವಣಿಗೆ ಕರೇ ಹೆಂಚಿನ ಹೊದಿಕೆ ಇರತಕ್ಕ ಸ್ವತ್ತಿಗೆ ಚೆಕ್ಕುಬಂದಿ : ಪೂರ್ವಕ್ಕೆ - ಸುಬ್ಬಣ್ಣನವರ ಖಾಲಿ ನಿವೇಶನ, ಪಶ್ಚಿಮಕ್ಕೆ - ಸಂಗಪ್ಪನವರ ಮನೆ, ಉತ್ತರಕ್ಕೆ - ಪ್ರತಿವಾದಿಯರ ಸ್ವತ್ತು, ದಕ್ಷಿಣಕ್ಕೆ - ಕನ್ಸರ್‌ವೆನ್ಸಿ ರಸ್ತೆ,

**ನೋಟಿಸ್ 'ಬಿ' ಷೆಡ್ಯೂಲ್**

ದಾವಣಗೆರೆ ಸಿಟಿ, 1ನೇ ವಾರ್ಡು, 1ನೇ ಡಿವಿಜನ್, ವಕ್ಕಲಿಗರ ಪೇಟೆಯಲ್ಲಿ ಬರುವ ಮುನಿಸಿಪಲ್ ಹಳೇ ಖಾನೇಷುಮಾರಿ ನಂಬರ್ 820, ಚಾಲ್ತಿ ಮುನಿಸಿಪಲ್ ಡೋರ್ ನಂ. 223 ವುಳ್ಳ ಪೂರಾ ಸ್ವತ್ತಿನ ಪೈಕಿ ಉತ್ತರ ದಿಕ್ಕಿನ ಕಡೆಗೆ ಬರುವ ಸ್ವತ್ತಿನ ಅಳತೆ ಪೂರ್ವ ಪಶ್ಚಿಮ 12 ಅಡಿ, 6 ಅಂಗುಲ ಅಗಲ, ಉತ್ತರ, ದಕ್ಷಿಣ 54 ಅಡಿ ಉದ್ದವುಳ್ಳ ಪೂರಾ ಜಾಗ ಹಾಗೂ ಜಾಗದಲ್ಲಿ ಈ ಹಿಂದೆ ಇಟ್ಟಿಗೆ ಮತ್ತು ಮಣ್ಣಿನಿಂದ ಗೋಡೆಗಳನ್ನು ಕಟ್ಟಿ ಮೇಲ್ಛಾವಣಿಗೆ ಕರೇ ಹೆಂಚಿನ ಹೊದಿಕೆ ಇರತಕ್ಕ ಸ್ವತ್ತಿಗೆ ಚೆಕ್ಕುಬಂದಿ.

ಪೂರ್ವಕ್ಕೆ - ಸುಬ್ಬಣ್ಣನವರ ಖಾಲಿ ನಿವೇಶನ, ಪಶ್ಚಿಮಕ್ಕೆ - ಸಂಗಪ್ಪನವರ ಮನೆ, ಉತ್ತರಕ್ಕೆ - ವಕ್ಕಲಿಗರ ಪೇಟೆ ರಸ್ತೆ, ದಕ್ಷಿಣಕ್ಕೆ - ವಾದಿಯರ ಸ್ವತ್ತು.

**ನೋಟಿಸ್ 'ಸಿ' ಷೆಡ್ಯೂಲ್**

ದಾವಣಗೆರೆ ಸಿಟಿ, 1ನೇ ವಾರ್ಡು, 1ನೇ ಡಿವಿಜನ್, ವಕ್ಕಲಿಗರ ಪೇಟೆಯಲ್ಲಿ ಬರುವ ಮುನಿಸಿಪಲ್ ಹಳೇ ಖಾನೇಷುಮಾರಿ ನಂಬರ್ 820 ಚಾಲ್ತಿ ಮುನಿಸಿಪಲ್ ಡೋರ್ ನಂ. 223 ವುಳ್ಳ ದಾವಾ 'ಎ' ಷೆಡ್ಯೂಲ್ ಸ್ವತ್ತಿನ ಉತ್ತರ ಭಾಗದಲ್ಲಿ ಹಾಗೂ ದಾವಾ 'ಬಿ' ಷೆಡ್ಯೂಲ್ ಸ್ವತ್ತಿನ ದಕ್ಷಿಣ ಭಾಗದಲ್ಲಿ ಪ್ರತಿವಾದಿಯರು ಅಕ್ರಮ ಮತ್ತು ಕಾನೂನು ಬಾಹಿರವಾಗಿ ಪೂರ್ವ-ಪಶ್ಚಿಮ 11 ಅಡಿ 10 1/2 ಅಂಗುಲ ಹಾಗೂ ಉತ್ತರ ದಕ್ಷಿಣ 1 ಅಡಿ ಜಾಗದಲ್ಲಿ ಕಾಂಪೌಂಡ್ ಗೋಡೆ ನಿರ್ಮಿಸಲು ಪ್ರಯತ್ನಿಸುತ್ತಿರುವ ಮನೆಗೆ ಚೆಕ್ಕುಬಂದಿ : ಪೂರ್ವಕ್ಕೆ - ಸುಬ್ಬಣ್ಣನವರ ಖಾಲಿ ನಿವೇಶನ, ಪಶ್ಚಿಮಕ್ಕೆ - ಸಂಗಪ್ಪನವರ ಮನೆ, ಉತ್ತರಕ್ಕೆ - ನೋಟಿಸ್ 'ಬಿ' ಷೆಡ್ಯೂಲ್ ಸ್ವತ್ತು, ದಕ್ಷಿಣಕ್ಕೆ - ನೋಟಿಸ್ 'ಎ' ಷೆಡ್ಯೂಲ್ ಸ್ವತ್ತು.

ವಕೀಲರು, ಎನ್.ಎಂ. ಲೋಕೇಶ್
ಕಕ್ಷಿದಾರರು
#182, 10ನೇ ಕ್ರಾಸ್, 'ಎ' ಬ್ಲಾಕ್, ದೇವರಾಜ್ ಅರಸ್ ಬಡಾವಣೆ,
ದಾವಣಗೆರೆ - 577006. **ಮೊ : 99869 11962**


# ಪೋಕ್ಸೋ ತಡೆ, ಬಾಲ್ಯ ವಿವಾಹ ನಿಷೇಧ ಶಿಕ್ಷಕರ ಜವಾಬ್ದಾರಿ ಹೆಚ್ಚಿದೆ

**ಶಿಕ್ಷಕರ ಕಾರ್ಯಾಗಾರದಲ್ಲಿ ಹಿರಿಯ ಸಿವಿಲ್ ನ್ಯಾಯಾಧೀಶರಾದ ಮಹಾವೀರ ಮ. ಕರೆಣ್ಣವರ**



ದಾವಣಗೆರೆ, ಸೆ. 29 - ಪೋಕ್ಸೋ ಕಾನೂನು ಉಲ್ಲಂಘನೆ ತಡೆ ಮತ್ತು ಬಾಲ್ಯ ವಿವಾಹ ತಡೆಗಟ್ಟುವಲ್ಲಿ ಶಿಕ್ಷಕರ ಪಾತ್ರ ಬಹು ಮುಖ್ಯವಾದುದು ಎಂದು ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಮಹಾವೀರ ಮ. ಕರೆಣ್ಣವರ ತಿಳಿಸಿದರು.

ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ಪೋಕ್ಸೋ ತಡೆ ಸಮಿತಿ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಹಾಗೂ ಶಿಕ್ಷಣ ಇಲಾಖೆ ಇವರ ಸಹಯೋಗದೊಂದಿಗೆ ದಾವಣಗೆರೆ ತಾಲ್ಲೂಕಿನ ಶಾಲಾ ಶಿಕ್ಷಕಿಯರಿಗಾಗಿ ನಗರದ ಗುರು ಭವನದಲ್ಲಿ ಏರ್ಪಡಿಸಲಾಗಿದ್ದ ಕಾರ್ಯಾಗಾರ ಮತ್ತು ಕಾನೂನು ಅರಿವು ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಇತ್ತೀಚಿನ ದಿನಗಳಲ್ಲಿ ವರದಿಯಾಗುತ್ತಿರುವ ಪೋಕ್ಸೋ ಪ್ರಕರಣಗಳನ್ನು ಮತ್ತು ಬಾಲ್ಯ ವಿವಾಹಗಳನ್ನು ತಡೆಯುವಲ್ಲಿ ಶಿಕ್ಷಕರ ಜವಾಬ್ದಾರಿ ಹೆಚ್ಚಿದೆ ಎಂದು ಮನವರಿಕೆ ಮಾಡಿದರು. ಶಿಕ್ಷಕರಾದವರು ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಕೇವಲ ಪಠ್ಯಕ್ಕೆ ಸಂಬಂಧಿಸಿದ ಪಾಠಕ್ಕೆ ಸೀಮಿತವಾಗದೇ ಪಠ್ಯೇತರ ವಿಷಯಗಳ ಮಾಹಿತಿಗಳನ್ನು ಸಹ ವಿದ್ಯಾರ್ಥಿಗಳಿಗೆ ತಿಳಿಸಬೇಕೆಂದರು. ಯಾವುದೇ ಒಬ್ಬ ವ್ಯಕ್ತಿಯ ಜೀವನದಲ್ಲಿ ಶಿಕ್ಷಕರ ಪಾತ್ರ ಬಹುಮುಖ್ಯವಾಗಿದ್ದು, ಇದು ಜೀವನದುದ್ದಕ್ಕೂ ನಡೆಯಬೇಕೆಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕ್ಷೇತ್ರ ಶಿಕ್ಷಣಾಧಿಕಾರಿ ಪುಷ್ಪಲತಾ ಮಾತನಾಡಿ, ಸಮಾಜದಲ್ಲಿ ಗಂಡು ಮತ್ತು ಹೆಣ್ಣು ಮಕ್ಕಳನ್ನು ಪೋಷಣಾ ಕಾರ್ಯದಲ್ಲಿ ಎಲ್ಲರದೂ ಬಹುದೊಡ್ಡ ಜವಾಬ್ದಾರಿ ಇದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಧಿಕಾರಿ ಪ್ರಕಾಶ್ ಅವರು ಮಹಿಳೆಯರು, ಮಕ್ಕಳಿಗಾಗಿ ಇರುವ ಕಾನೂನುಗಳ ಬಗ್ಗೆ ಮತ್ತು ವಿವಿಧ ಇಲಾಖೆಗಳ ಸಮನ್ವಯತೆಯ ಬಗ್ಗೆ ಸಂಪೂರ್ಣವಾದ ಮಾಹಿತಿಯನ್ನು ನೀಡಿದರು.

ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಕವಿತಾ ಕಾರ್ಯಕ್ರಮ ಆಯೋಜಿಸಿ ಇಲಾಖೆಯ ಪರವಾಗಿ ಕೈಗೊಂಡ ಕ್ರಮಗಳ ಬಗ್ಗೆ ಮಾಹಿತಿ ನೀಡಿದರು.

# ಎಂಇಎಸ್ ಪ್ರಶಿಕ್ಷಣಾರ್ಥಿಗಳಿಂದ ಸ್ವಚ್ಛತಾ ಕಾರ್ಯ




ದಾವಣಗೆರೆ, ಸೆ.29- ರಾಷ್ಟ್ರ ಮಹಾತ್ಮಾಗಾಂಧಿಯವರ ಜನ್ಮ ದಿನಾಚರಣೆ ಅಂಗವಾಗಿ ಕೇಂದ್ರ ಸರ್ಕಾರದ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ನಿರ್ದೇಶನದ ಮೇರೆಗೆ ಸ್ವಚ್ಛತೆಯೇ ಸೇವೆ ಅಭಿಯಾನದ ಭಾಗವಾಗಿ ನಗರದ ಎಂ.ಇ.ಎಸ್ ಶಿಕ್ಷಣ ಮಹಾವಿದ್ಯಾಲಯದ ಪ್ರಶಿಕ್ಷಣಾರ್ಥಿಗಳು ವಿವೇಕಾನಂದ ಬಡಾವಣೆಯ ನಾಗರಿಕ ಹಿತರಕ್ಷಣಾ ಸಮಿತಿಯ ಸಹಯೋಗದಲ್ಲಿ ಶನಿವಾರ ಶ್ರಮದಾನದ ಮೂಲಕ ಸ್ವಚ್ಛತಾ ಕಾರ್ಯ ನೆರವೇರಿಸಿದರು.

ನಗರದ ಬಿಐಇಟಿ ರಸ್ತೆಯಲ್ಲಿರುವ ಶಿವಧ್ಯಾನ ಮಂದಿರ, ಸ್ವಾಮಿ ವಿವೇಕಾನಂದ ಬಡಾವಣೆಯಲ್ಲಿನ ದೂಡಾ ಉದ್ಯಾನವನ, ಬನ್ನಿ ಉದ್ಯಾನವನ, ನವಗ್ರಹ ಉದ್ಯಾನವನ ಹಾಗೂ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು ಆವರಣದ ಉದ್ಯಾನವನಗಳಲ್ಲಿ ಸ್ವಚ್ಛತಾ ಸೇವೆಯನ್ನು ನೆರವೇರಿಸಲಾಯಿತು.

ಈ ಸಂದರ್ಭದಲ್ಲಿ ಎಂಇಎಸ್ ಶಿಕ್ಷಣ ಸಂಸ್ಥೆ ವ್ಯವಸ್ಥಾಪಕ ನಿರ್ದೇಶಕ ಪ್ರದೀಪ್ ಕೆ.ಎಂ., ಆಡಳಿತಾಧಿಕಾರಿ ಸೌಮ್ಯ ಪ್ರದೀಪ್, ಪ್ರಾಚಾರ್ಯ ಡಾ.ವಾಗೀಶ್ ಹಿರೇಮಠ್, ಎನ್.ಎಸ್.ಎಸ್. ಕಾರ್ಯಕ್ರಮಾಧಿಕಾರಿ ಮಂಜುನಾಥ್ ಎಂ. ಕುಂಬಾರ್, ಹಿರಿಯ ಪ್ರಾಧ್ಯಾಪಕ ಬಸವರಾಜ್ ಬಿ.ಜಿ, ಸಹ ಪ್ರಾಧ್ಯಾಪಕ ಸುರೇಶ್ ಕೆ.ವಿ.ಪ್ರದೀಪ್ ಕುಮಾರ್ ಜೆ.ಪಿ. ಅಂಜನೇಯ ಕೆ.ಹೆಚ್. ರಂಗನಾಥ್ ಎನ್. ಶಶಿ ಜಿ.ಹೆಚ್, ದೈಹಿಕ ಶಿಕ್ಷಣ ನಿರ್ದೇಶಕ ನಾಗರಾಜ ಎಸ್ ಮತ್ತು ಎಲ್ಲಾ ಪ್ರಶಿಕ್ಷಣಾರ್ಥಿಗಳು ಶ್ರಮದಾನದಲ್ಲಿ ಭಾಗವಹಿಸಿದ್ದರು.

# ಸ್ವಚ್ಛತಾ ಹಿ ಸೇವಾ ಅಭಿಯಾನ, ಸೈಕಲ್ ಜಾಥಾ



ದಾವಣಗೆರೆ, ಸೆ. 29 - ಕೇಂದ್ರ ಸರ್ಕಾರದ ಸ್ವಚ್ಛ ಭಾರತ ಮಿಷನ್ ಯೋಜನೆಯ 10ನೇ ವಾರ್ಷಿಕೋತ್ಸವದ ಹಿನ್ನೆಲೆಯಲ್ಲಿ ಮಹಾನಗರ ಪಾಲಿಕೆ ಮತ್ತು ದಾವಣಗೆರೆ ಬೈಸಿಕಲ್ ಕ್ಲಬ್ ಸಹಯೋಗದಲ್ಲಿ ಸ್ವಚ್ಛತಾ ಹಿ ಸೇವಾ ಅಭಿಯಾನದ ಅಂಗವಾಗಿ ನಗರದ ಸ್ವಚ್ಛತೆ ಬಗ್ಗೆ ಇಂದು ಸಾರ್ವಜನಿಕರಿಗೆ ಅರಿವು ಮೂಡಿಸಲಾಯಿತು.

ಸೈಕಲ್ ಜಾಥಾ ಕಾರ್ಯಕ್ರಮವನ್ನು ಡಾ. ಎಂ.ಸಿ. ಮೋದಿ ವೃತ್ತದಿಂದ ಪ್ರಾರಂಭಿಸಿ ವಿದ್ಯಾರ್ಥಿ ಭವನ, ಜಯದೇವ ಸರ್ಕಲ್ ಮಹಾನಗರ ಪಾಲಿಕೆ, ಅರುಣಾ ಸರ್ಕಲ್, ಸಂಗೊಳ್ಳಿ ರಾಯಣ್ಣ ಸರ್ಕಲ್ ಮುಖಾಂತರ ಕ್ಲಾಕ್ ಟವರ್ ಸರ್ಕಲ್ ಮೂಲಕ ಆಫೀಸರ್ಸ್ ಕ್ಲಬ್‌ವರೆಗೂ ನಡೆಸಲಾಯಿತು.

ಕಾರ್ಯಕ್ರಮವನ್ನು ಮಹಾನಗರ ಪಾಲಿಕೆಯ ನೂತನ ಮೇಯರ್ ಚಮನ್ ಸಾಬ್ ಹಸಿರು ಬಾವುಟ ತೋರಿಸುವುದರ ಮೂಲಕ ಚಾಲನೆ ನೀಡಿದರು.

ಪಾಲಿಕೆ ಆಯುಕ್ತರಾದ ಶ್ರೀಮತಿ ರೇಣುಕಾ, ದಾವಣಗೆರೆ ಬೈಸಿಕಲ್ ಕ್ಲಬ್‌ನ ಅಧ್ಯಕ್ಷ ಟಿ.ಎಂ. ರಾಜೇಂದ್ರ ಕುಮಾರ್ ಕಾರ್ಯದರ್ಶಿ ಕೆ.ಎಸ್. ಮಹೇಶ್, ಸಂಘದ ನಿರ್ದೇಶಕ ಕಿರಣ್ ಬಾಳೆಹೊಲದ, ಪ್ರಸಾದ್ ಆರ್ಚಸ್, ಎಸ್.ಕೆ. ಕೊಟ್ರೇಶ್, ಹರೀಶ್ ಕೆ.ಆರ್. ಡಾ. ಮಾಲ್ತೇಶ್ ವಿಜಯ ಭಟ್, ನಾಗರಾಜ್, ಅನಿಲ್, 38ನೇ ವಾರ್ಡಿನ ಮಹಾನಗರ ಪಾಲಿಕೆಯ ಸದಸ್ಯ ಗಡಿಗುಡಾಳ್ ಮಂಜುನಾಥ್ ಮತ್ತು ನಗರದ ಸಂಚಾರಿ ಪೊಲೀಸ್ ಸಿಬ್ಬಂದಿ ವರ್ಗ ಮಹಾನಗರ ಪಾಲಿಕೆಯ ಸಿಬ್ಬಂದಿಗಳು ಇನ್ನು ಮುಂತಾದವರು ಸಹ ಸೈಕಲ್ ಜಾಥಾದಲ್ಲಿ ಭಾಗವಹಿಸಿದ್ದರು.

# ಸಿಎಂ ಸ್ಥಾನಕ್ಕಾಗಿ ಸಾವಿರ ಕೋಟಿ !

(1ನೇ ಪುಟದಿಂದ) ಯಾಗಲಿ. ಮರು ಚುನಾವಣೆಯಾದಲ್ಲಿ ಬಿಜೆಪಿಗೆ ಪೂರ್ಣ ಬಹುಮತದಿಂದ ಅಧಿಕಾರ ಸಿಗಲಿದೆ. ಗೊಂದಲದ ವ್ಯವಸ್ಥೆಯಲ್ಲಿ ಬಿಜೆಪಿ ಸರ್ಕಾರ ರಚನೆಯಾಗುವುದು ಬೇಡ ಎಂದರು.

ನಾವು ಭಿನ್ನಮತೀಯರಲ್ಲ. ಪಕ್ಷದ ನಿಷ್ಠಾವಂತರು. ಪಕ್ಷದ ಬೆಳವಣಿಗೆಗಾಗಿ ಹೋರಾಟ ನಡೆಸುತ್ತಿದ್ದೇವೆ.

ನಾವು ಬೆಳಗಾವಿಯಲ್ಲಿ ಸಭೆ ನಡೆಸಿದ ನಂತರ ಸಂಘ ಪರಿವಾರದ ಪ್ರಮುಖರು ನಮ್ಮ ಜೊತೆ ಮಾತನಾಡಿದ್ದಾರೆ. ನಮ್ಮ ನಿಲುವು ಪರಿಗಣಿಸಿದ್ದಾರೆ ಎಂದರು.

## ಪಕ್ಷಕ್ಕೆ ದ್ರೋಹ ಮಾಡಿದವರಿಂದ ಪಾಠ ಕಲಿಯಬೇಕಿಲ್ಲ

ಕಳೆದ ಲೋಕಸಭಾ ಚುನಾವಣೆಯಲ್ಲಿ ಪಕ್ಷ ವಿರೋಧಿ ಕೆಲಸ ಮಾಡಿದವರಿಂದ ನಾನು ಪಾಠ ಕಲಿಯಬೇಕಿಲ್ಲ ಎಂದು ಬಿಜೆಪಿ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಹೇಳಿದ್ದಾರೆ.

ಇತ್ತೀಚೆಗೆ ಚಿತ್ರದುರ್ಗದಲ್ಲಿ ಮಾತನಾಡಿದ್ದ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ಯತ್ನಾಳ್‌ರಿಂದ ಕಲಿಯುವುದು ಏನೂ ಇಲ್ಲ ಎಂದಿದ್ದರು. ಅದಕ್ಕೆ ಯತ್ನಾಳ್ ಪ್ರತಿಕ್ರಿಯಿಸಿದ್ದಾರೆ.

ನಾವು ಭಿನ್ನಮತೀಯ ಸಭೆ ನಡೆಸುವುದಿಲ್ಲ. ಡಿಸೆಂಬರ್‌ವರೆಗೆ ಕಾಯುತ್ತೇವೆ. ಆ ವೇಳೆಗೆ ವರಿಷ್ಠರು ರಾಜ್ಯಾಧ್ಯಕ್ಷರ ಬದಲಾವಣೆ ಕುರಿತು ನಿರ್ಧಾರ ತೆಗೆದುಕೊಳ್ಳುವ ನಿರೀಕ್ಷೆ ಇದೆ ಎಂದು ಯತ್ನಾಳ್ ಹೇಳಿದರು.

### ಪರೀಕ್ಷಾ ಕೇಂದ್ರ ವಿಳಾಸದ ಎಡವಟ್ಟು ಹಿನ್ನೆಲೆ

# ಕೆಇಎ ಪರೀಕ್ಷೆ ವಂಚಿತರಾದ ಅಭ್ಯರ್ಥಿಗಳು



ಜಗಳೂರು, ಸೆ.29- ಪಟ್ಟಣದ ಸರ್ಕಾರಿ ಪಿಯುಸಿ ಕಾಲೇಜು ಮುಂಭಾಗ ಭಾನುವಾರ ಗ್ರಾಮ ಆಡಳಿತ ಅಧಿಕಾರಿಗಳ ಆಯ್ಕೆಗೆ ನಡೆದ ಕನ್ನಡ ಕಡ್ಡಾಯ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಕೆಇಎ ಪ್ರವೇಶ ಪತ್ರದಲ್ಲಿ ಮಾಡಿದ ಪರೀಕ್ಷಾ ಕೇಂದ್ರ ವಿಳಾಸದ ಎಡವಟ್ಟಿನಿಂದ ಉದ್ಯೋಗ ಆಕಾಂಕ್ಷಿ ಅಭ್ಯರ್ಥಿಗಳು ಕಂಗಾಲಾಗಿ ಪರೀಕ್ಷಾ ಕೇಂದ್ರ ಹುಡುಕಾಟದಲ್ಲಿಯೇ ಸಮಯ ಕಳೆದು ಪರೀಕ್ಷೆಯಿಂದ ವಂಚಿತರಾಗಿ ಅಳಲು ತೋಡಿಕೊಂಡರು.

ಪರೀಕ್ಷೆಯಿಂದ ವಂಚಿತರಾದ ಹರಿಹರ ತಾಲ್ಲೂಕಿನ ಭಾನುವಳ್ಳಿ ಮತ್ತು ಮಲೇಬೆನ್ನೂರು ಸಮೀಪದ ಆದಾಪುರ ಗ್ರಾಮದ ಲಕ್ಷ್ಮಿ ಮತ್ತು ಗ್ರಾಮದ ರಾಜೇಶ್ವರಿ ಪ್ರವೇಶ ಪತ್ರದಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜು, ಜಗಳೂರು, ಇಇಬಿ ವೃತ್ತ, ದಾವಣಗೆರೆ ಜಗಳೂರು ಎಂಬ ವಿಳಾಸದ ಗೊಂದಲದಲ್ಲಿ ದಾವಣಗೆರೆಯಲ್ಲಿ ಪರೀಕ್ಷಾ ಕೇಂದ್ರ ಹುಡುಕಾಟ ನಡೆಸಿ ನಂತರ ಜಗಳೂರಿಗೆ 10.30 ಸಮಯದ ನಂತರ ಆಗಮಿಸಿದಾಗ ಪರೀಕ್ಷಾ ಕೇಂದ್ರಕ್ಕೆಪ್ರವೇಶದಸಮಯಮುಕ್ತಾಯವಾಗಿದ್ದರಿಂದ ಪರೀಕ್ಷೆಯಿಂದ ಹೊರಗುಳಿಯಬೇಕಾಯಿತು.

ಕೆಇಎ ಅವರು ಪ್ರವೇಶ ಪತ್ರದಲ್ಲಿ ಸರಿಯಾದ ವಿಳಾಸವನ್ನು ಅಭ್ಯರ್ಥಿಗಳಿಗೆ ನೀಡದೇ ಇರುವುದರಿಂದ ಪರೀಕ್ಷೆಯಿಂದ ವಂಚಿತರಾದರು ಎಂದು ಅಭ್ಯರ್ಥಿಗಳು ಆರೋಪಿಸಿದರು.

# ಕೆಇಎ ಪರೀಕ್ಷೆಗೆ 268 ಅಭ್ಯರ್ಥಿಗಳು ಗೈರು

ಜಗಳೂರು, ಸೆ.29- ಗ್ರಾಮ ಪಂಚಾಯಿತಿ ಆಡಳಿತಾಧಿಕಾರಿ ಹುದ್ದೆಗೆ ಇಂದು ನಡೆದ ಸ್ಪರ್ಧಾತ್ಮಕ ಪರೀಕ್ಷೆಗೆ ಸರ್ಕಾರಿ ಪದವಿಪೂರ್ವ ಕಾಲೇಜಿನಲ್ಲಿ 504 ಅಭ್ಯರ್ಥಿಗಳು ನೊಂದಣಿಯಾಗಿದ್ದು, 405 ಅಭ್ಯರ್ಥಿಗಳು ಹಾಜರಾಗಿದ್ದರು. 99 ಜನ ಅಭ್ಯರ್ಥಿಗಳು ಗೈರಾಗಿದ್ದಾರೆ

ನಾಲಂದ ಪದವಿಪೂರ್ವ ಕಾಲೇಜಿನಲ್ಲಿ ನೋಂದಣಿಯಾದ 600 ಅಭ್ಯರ್ಥಿಗಳ ಪೈಕಿ 106 ವಿದ್ಯಾರ್ಥಿಗಳು ಗೈರು ಹಾಜರಾಗಿದ್ದಾರೆ.

ಮಾಲತಿ ಪದವಿಪೂರ್ವ ಕಾಲೇಜಿನಲ್ಲಿ 313 ನೊಂದಣಿ ಅಭ್ಯರ್ಥಿಗಳಲ್ಲಿ 249 ಅಭ್ಯರ್ಥಿಗಳು ಹಾಜರಾಗಿದ್ದು, 63 ಅಭ್ಯರ್ಥಿಗಳು ಗೈರಾಗಿದ್ದಾರೆ ಎಂದು ಪರೀಕ್ಷಾ ನಿರ್ವಹಣಾ ಅಧಿಕಾರಿಗಳು ತಿಳಿಸಿದ್ದಾರೆ.

ಪರೀಕ್ಷಾ ಕೇಂದ್ರಗಳಿಗೆ ಬಿಇಓ ಹಾಲಮೂರ್ತಿ ಹಾಗೂ ಬಿಆರ್ ಸಿ ಡಿಡಿ ಹಾಲಪ್ಪ ಭೇಟಿ ನೀಡಿ ಪರಿಶೀಲಿಸಿದರು. ಪ್ರತಿ ಕೊಠಡಿಗಳಲ್ಲಿಯೂ ಸಿಸಿ ಕ್ಯಾಮೇರಾ ಕಣ್ಗಾವಲು ಅಳವಡಿಸಲಾಗಿತ್ತು. ಪರೀಕ್ಷಾ ಕೇಂದ್ರದ ಸುತ್ತಲೂ ಪೋಲೀಸ್ ಬಿಗಿಬಂದೋಬಸ್ತ್ ವ್ಯವಸ್ಥೆ ಕಲ್ಪಿಸಲಾಗಿತ್ತು.

# ಉಕ್ಕಡಗಾತ್ರಿ ಗ್ರಾ.ಪಂ.ನಿಂದ ಬಾಗಿನ



ಮಲೇಬೆನ್ನೂರು, ಸೆ. 29 - ಉಕ್ಕಡಗಾತ್ರಿ ಗ್ರಾಮ ಪಂಚಾಯಿತಿ ವತಿಯಿಂದ ಮಧ್ಯ ಕರ್ನಾಟಕದ ಜೀವನಾಡಿ ಭದ್ರಾ ಜಲಾಶಯಕ್ಕೆ ಶನಿವಾರ ಗಂಗೆ ಪೂಜೆ ಸಲ್ಲಿಸಿ ಬಾಗಿನ ಅರ್ಪಣೆ ಮಾಡಲಾಯಿತು. ಈ ಸಂದರ್ಭದಲ್ಲಿ ಗ್ರಾ.ಪಂ. ಅಧ್ಯಕ್ಷೆ ಶ್ರೀಮತಿ ಭಾರತಿ ಕಟಿಗೇರ, ಉಪಾಧ್ಯಕ್ಷೆ ಶ್ರೀಮತಿ ಗೀತಾ ಸಂಜೀವ ರೆಡ್ಡಿ, ಸದಸ್ಯರಾದ ಕರಿಬಸಮ್ಮ, ಜಯಮ್ಮ, ಕೆಂಚವೀರಯ್ಯ, ಹೇಮಪ್ಪ ಶಿವಣ್ಣನವರ, ಶಂಕರಪ್ಪ ಕಮದೋಡ, ರವಿಗೌಡ, ಪಿಡಿಓ ರಾಮಚಂದ್ರಪ್ಪ, ಸಿಬ್ಬಂದಿ ವರ್ಗದವರಾದ ಪ್ರಶಾಂತ, ಮಂಜಾನಾಯ್ಕ, ಅಶೋಕ, ಪ್ರಕಾಶ, ಜಗದೀಶ್, ಅಶೋಕ, ಮೈಲಪ್ಪ ಭಾಗವಹಿಸಿದ್ದರು.

# ಹರಿಹರ : ಶೋಭಾಯಾತ್ರೆಯಲ್ಲಿ ಗಮನ ಸೆಳೆದ ಬೆಣ್ಣೆದೋಸೆ ವ್ಯವಸ್ಥೆ



ಹರಿಹರ, ಸೆ.29- ನಗರದಲ್ಲಿ ಭಾನುವಾರ ಜರುಗಿದ ಹಿಂದೂ ಮಹಾಗಣಪತಿ ವಿಸರ್ಜನೆಯ ಬೃಹತ್ ಶೋಭಾಯಾತ್ರೆಯಲ್ಲಿ ಪಾಲ್ಗೊಂಡಿದ್ದ ಜನತೆಗೆ ಶಿವಮೊಗ್ಗ ಸರ್ಕಲ್ ಬಳಿ ಮಾಕನೂರು ತಿಪ್ಪೇಶ್, ಸಚ್ಚಿನ್ ಮೆಹರ್ವಾಡೆ, ಕೊಮಾರನಹಳ್ಳಿಯ ಕೆ.ಮಂಜುನಾಥ್, ಮುದೇಗೌಡ್ರ ವಿರೂಪಾಕ್ಷಿ, ಪ್ರಭು, ಮೂಲಿಮನಿ ರಮೇಶ್, ಶೇರಾಪುರ ರಾಜಣ್ಣ, ಮುನೀಂದ್ರ, ಉದಯ್ ಬೀಡಾ, ಮಹಾಂತೇಶ್, ಬೆಣ್ಣೇರ್ ಅಶೋಕ್, ಮುದೇಗೌಡ್ರ ಕುಮಾರ್, ವಕೀಲ ಹುಲ್ಮನಿ ಉಮೇಶ್, ಶಿವಶಕ್ತಿ ಶಿವು, ಜರೇಕಟ್ಟೆ ರಾಜಣ್ಣ, ಕೆ.ಜಿ.ಉಮೇಶ್, ಶಿವರಾಜ್ ಇವರುಗಳು ಸೇರಿ ಉಚಿತವಾಗಿ ಬೆಣ್ಣೆದೋಸೆ ವ್ಯವಸ್ಥೆ ಮಾಡಿ, ಗಮನ ಸೆಳೆದರು.

ಸುಮಾರು 3 ಸಾವಿರ ಜನರಿಗೆ ಬೆಣ್ಣೆದೋಸೆ ವಿತರಿಸಿದರು.

# ಸಮನ್ವಯಕಾರರಾಗಿ ಕಾರಟ್ ನೇಮಕ

ನವದೆಹಲಿ, ಸೆ. 29 - ಸಿಪಿಐ (ಎಂ) ಪಾಲಿಟ್ ಬ್ಯೂರೋ ಕೇಂದ್ರೀಯ ಸಮಿತಿ ಸಮನ್ವಯಕಾರರಾಗಿ ಪ್ರಕಾಶ್ ಕಾರಟ್ ಅವರನ್ನು ಹಂಗಾಮಿಯಾಗಿ ನೇಮಿಸಲಾಗಿದೆ. ಸಿಪಿಐ (ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚೂರಿ ಅವರು ಸೆಪ್ಟೆಂಬರ್ 12ರಂದು ನಿಧನರಾಗಿದ್ದರು. ಈ ಹಿನ್ನೆಲೆಯಲ್ಲಿ ಕಾರಟ್ ಅವರನ್ನು ನೇಮಿಸಲಾಗಿದೆ.

# ರಾಜ್ಯದಲ್ಲಿ ಪಾಕಿಸ್ತಾನಿ ಸರ್ಕಾರ ಅಧಿಕಾರದಲ್ಲಿದೆ

(1ನೇ ಪುಟದಿಂದ) ಹಿಂದೂ ಸಮುದಾಯದ ವಿರುದ್ಧ ಐದು ಎಫ್.ಐ.ಆರ್.ಗಳನ್ನು ದಾಖಲಿಸಲಾಗಿದೆ ಎಂದು ಯತ್ನಾಳ್ ಆಕ್ಷೇಪಿಸಿದರು.

ಹಿಂದೂಗಳ ವಿರುದ್ಧ ಪಕ್ಷಪಾತಿಯಾಗಿ ಕ್ರಮ ತೆಗೆದುಕೊಳ್ಳುತ್ತಿರುವ ಅಧಿಕಾರಿಗಳು, ಮುಂದೆ ಬಿಜೆಪಿ ರಾಜ್ಯದಲ್ಲಿ ಅಧಿಕಾರಕ್ಕೆ ಬರುವುದೇ ಇಲ್ಲ ಎಂದುಕೊಂಡಿದ್ದಾರೆ. ಸರ್ಕಾರದ ಗತಿ ನೋಡಿದರೆ ಯಾವಾಗ ಬೇಕಾದರೂ ಚುನಾವಣೆ ನಡೆಯಬಹುದು. ಆಗ ಬಿಜೆಪಿ 140 ಸ್ಥಾನ ಪಡೆಯಲಿದೆ. ಅಧಿಕಾರಿಗಳ ಪರಿಸ್ಥಿತಿಯೂ ಬದಲಾಗಲಿದೆ ಎಂದರು.

ಮಾಜಿ ಸಂಸದ ಪ್ರತಾಪ ಸಿಂಹ ಮಾತನಾಡಿ, ರಾಜ್ಯದಲ್ಲಿ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದರೆ ಹಿಂದೂಗಳ ಮೇಲೆ ದಾಖಲಿಸಿರುವ ಕೇಸ್ ಗಳನ್ನು ಹಿಂಪಡೆಯುತ್ತೇವೆ ಎಂದರು.

ದಾವಣಗೆರೆ ಗಾಂಧಿ ನಗರದ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಹಿಂದೂ ಧ್ವಜವನ್ನು ಕೆಳಗೆ ಇಳಿಸಿ, ಮುಸ್ಲಿಂ ಧ್ವಜ ಹಾಕಲಾಗಿತ್ತು. ಹಿಂದೂ ಸಂಘಟನೆ ಕಾರ್ಯಕರ್ತನಿಗೆ ಅವಾಚ್ಯವಾಗಿ ನಿಂದಿಸಿ, ಪ್ರಚೋದನಾಕಾರಿಯಾಗಿ ವಿಡಿಯೋ ಮಾಡಲಾಗಿತ್ತು. ನಂತರ ಗಣೇಶ ಮೆರವಣಿಗೆಯನ್ನು ಗುರಿಯಾಗಿಟ್ಟುಕೊಂಡು ಕಲ್ಲು ತೂರಾಟ ನಡೆಸಲಾಯಿತು. ಇಷ್ಟಾದರೂ, ಹಿಂದೂಗಳನ್ನೇ ಗುರಿಯಾಗಿಟ್ಟುಕೊಂಡು ಪೊಲೀಸರು ಕ್ರಮ ತೆಗೆದುಕೊಳ್ಳುತ್ತಿದ್ದಾರೆ ಎಂದು ಪ್ರತಾಪ್ ಸಿಂಹ ಆರೋಪಿಸಿದರು.

ದಾವಣಗೆರೆ ಅಷ್ಟೇ ಅಲ್ಲದೇ, ರಾಜ್ಯದಲ್ಲಿ ವ್ಯವಸ್ಥಿತವಾಗಿಯೇ ಇಂತಹ ಘಟನೆಗಳು ನಡೆಯುತ್ತಿವೆ. ಗಣೇಶ ಮೆರವಣಿಗೆಯನ್ನೇ ಗುರಿ ಮಾಡಿ, ಕಲ್ಲು ತೂರಾಟ ಮಾಡಲಾಗಿದೆ ಎಂದವರು ಆರೋಪಿಸಿದರು.

ಈ ಹಿಂದಿನ ಸಿದ್ದರಾಮಯ್ಯ ಸರ್ಕಾರದ ಅವಧಿಯಲ್ಲೂ ಪಿಎಫ್ಐ ರೀತಿಯ ಭಯೋತ್ಪಾದಕ ಸಂಘಟನೆಯ ಕಾರ್ಯಕರ್ತರ ವಿರುದ್ಧದ ಪ್ರಕರಣಗಳನ್ನು ವಾಪಸ್ ಪಡೆಯಲಾಗಿತ್ತು. ಇದರಿಂದಾಗಿ ಹಿಂದೂ ಕಾರ್ಯಕರ್ತರ ಹತ್ಯೆಗಳೂ ನಡೆದಿದ್ದವು. ಈಗಲೂ ಸಿದ್ದರಾಮಯ್ಯ ಅದನ್ನೇ ಮಾಡುತ್ತಿದ್ದಾರೆ ಎಂದು ಕಿಡಿ ಕಾರಿದರು.

ಆದರೆ, ಸಿದ್ದರಾಮಯ್ಯನವರ ತಾಲಿಬಾನ್ ಸರ್ಕಾರದ ವಿರುದ್ಧ ನಾವ್ಯಾರೂ ಕೈಕಟ್ಟಿ ಕುಳಿತುಕೊಳ್ಳುವುದಿಲ್ಲ. ರಾಜ್ಯವ್ಯಾಪಿ ತೀವ್ರ ಸ್ವರೂಪದ ಹೋರಾಟ ಮಾಡುತ್ತೇವೆ. ಹಿಂದೂ ಕಾರ್ಯಕರ್ತರ ಬೆನ್ನಿಗೆ ನಿಲ್ಲುತ್ತೇವೆ ಎಂದು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಮಾಜಿ ಕೇಂದ್ರ ಸಚಿವ ಜಿ.ಎಂ. ಸಿದ್ದೇಶ್ವರ, ಶಾಸಕ ಬಿ.ಪಿ. ಹರೀಶ್, ಬಿಜೆಪಿ ಮುಖಂಡರಾದ ಗಾಯತ್ರಿ ಸಿದ್ದೇಶ್ವರ, ಹನಗವಾಡಿ ವೀರೇಶ್, ಯಶವಂತರಾವ್ ಜಾಧವ್, ದೇವರಮನಿ ಶಿವಕುಮಾರ್, ಪಾಲಿಕೆ ಸದಸ್ಯ ಶಿವಪ್ರಕಾಶ್, ಬಿ.ಎಸ್. ಜಗದೀಶ್ ಮತ್ತಿತರರು ಉಪಸ್ಥಿತರಿದ್ದರು.

## ಆರೋಪಿಯ ವಂಶವೃಕ್ಷ ಏಕೆ ಬೇಕು?

ಪೊಲೀಸರು ಗಲಭೆ ಪ್ರಕರಣದಲ್ಲಿ ಆರೋಪಿಯಾಗಿರುವ ಹಿಂದೂ ಕಾರ್ಯಕರ್ತ ಸತೀಶ್ ಪೂಜಾರಿ ವಂಶವೃಕ್ಷವನ್ನು ಪೊಲೀಸರು ಕೇಳಿದ್ದಾರೆ ಎಂದು ಬಿಜೆಪಿ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಆಕ್ಷೇಪಿಸಿದರು.

ವಂಶಾವಳಿಯನ್ನು ಪೊಲೀಸರು ಯಾಕೆ ಕೇಳಿದ್ದೀರಿ? ಪೊಲೀಸ್ ಇಲಾಖೆಗೆ ಸತೀಶ ಪೂಜಾರಿ ವಂಶವೃಕ್ಷ ಯಾಕೆ ಬೇಕು? ಹತ್ಯೆ ರೀತಿಯ ಗಂಭೀರ ಪ್ರಕರಣಗಳಲ್ಲೇ ವಂಶವೃಕ್ಷ ಕೇಳುವುದಿಲ್ಲ. ಹೀಗಿರುವಾಗ ಹಿಂದೂ ಕಾರ್ಯಕರ್ತನಿಂದ ಮಾತ್ರ ವಂಶವೃಕ್ಷ ಕೇಳಲಾಗುತ್ತಿದೆ ಎಂದು ಟೀಕಿಸಿದರು.

# ಮಲೇಬೆನ್ನೂರು ಪಟ್ಟಣದಲ್ಲಿ ಸಂಭ್ರಮದ ಮೆರವಣಿಗೆ : ಗಣಪತಿಗಳ ವಿಸರ್ಜನೆ

ಮಲೇಬೆನ್ನೂರು, ಸೆ. 29 - ಪಟ್ಟಣದ ಶ್ರೀ ಕಾಲಭೈರವ ಮತ್ತು ಗ್ರಾಮದೇವತೆ ಶ್ರೀ ಏಕನಾಥೇಶ್ವರಿ ದೇವಸ್ಥಾನಗಳಲ್ಲಿ ಪ್ರತಿಷ್ಠಾಪಿಸಿದ್ದ ಗಣಪತಿಗಳ ವಿಸರ್ಜನೆಯು ಶುಕ್ರವಾರ ಸಂಭ್ರಮದ ಮೆರವಣಿಗೆ ಮೂಲಕ ನೆರವೇರಿತು.

ಬೆಳಿಗ್ಗೆ 11 ಗಂಟೆಗೆ ವಿಶೇಷ ಪೂಜೆಯ ನಂತರ ಆರಂಭದಲ್ಲಿ ಗಣಪತಿಗಳ ಮೆರವಣಿಗೆ ಸಂಜೆಯವರೆಗೂ ಪಟ್ಟಣದ ರಾಜ ಬೀದಿಗಳಲ್ಲಿ ಸಾಗಿ, ನಂತರ ಹರಳಹಳ್ಳಿ ರಸ್ತೆಯಲ್ಲಿರುವ ಬಾವಿಯಲ್ಲಿ ವಿಸರ್ಜನೆ ಮಾಡಲಾಯಿತು.

ಡಿಜೆ ಸಂಗೀತಕ್ಕೆ ಯುವಕರು ಕುಣಿದು ಸಂಭ್ರಮಿಸಿದರು. ಶ್ರೀಮತಿ ಗಾಯತ್ರಿ ಸಿದ್ದೇಶ್ವರ, ಕಾಂಗ್ರೆಸ್ ಮುಖಂಡರಾದ ನಂದಿಗಾವಿ ಶ್ರೀನಿವಾಸ್ ಬಿ.ಎಂ. ವಾಗೀಶ್‌ಸ್ವಾಮಿ, ಬಿಜೆಪಿ ಮುಖಂಡ ಚಂದ್ರಶೇಖರ್ ಪೂಜಾರ್ ಸೇರಿದಂತೆ ಪುರಸಭೆ ಸದಸ್ಯರು, ವಿವಿಧ ಸಮಾಜಗಳ ಮುಖಂಡರು ಭಾಗವಹಿಸಿದ್ದರು. ಪೊಲೀಸರು ಬಿಗಿ ಬಂದೋಬಸ್ತ್ ಕೈಗೊಂಡಿದ್ದರು.



**ಸೈಟುಗಳು ಮಾರಾಟಕ್ಕಿವೆ**
ಶಿವ-ಪಾರ್ವತಿ ಬಡಾವಣೆಯಲ್ಲಿ 40x70 ಪೂರ್ವ, ಜೈನ್ ಸ್ಕೂಲ್ ಹಿಂಭಾಗದಲ್ಲಿ 30x55 ಪಶ್ಚಿಮ, 30x40 ಪಶ್ಚಿಮ ಅಕ್ಕ-ಪಕ್ಕ, 35x50 ಉತ್ತರ-ಪಶ್ಚಿಮ ಕಾರ್ನರ್, 40x70 ಪಶ್ಚಿಮ.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಸೈಟುಗಳು ಮಾರಾಟಕ್ಕಿವೆ**
ಹದಡಿ ರಸ್ತೆ, ಶಿರಮಗೊಂಡನಹಳ್ಳಿ ಸುತ್ತ-ಮುತ್ತ 30x50 ಪಶ್ಚಿಮ ಅಕ್ಕ-ಪಕ್ಕ, 30x46 ಪೂರ್ವ ಅಕ್ಕ-ಪಕ್ಕ, 30x50 ಪೂರ್ವ, 30x40 ಪಶ್ಚಿಮ.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಬೇಕಾಗಿದ್ದಾರೆ**
ಆಟೋಮೊಬೈಲ್ ಅಂಗಡಿ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. ಪಿ.ಬಿ. ರೋಡ್, ದಾವಣಗೆರೆ. ಸಂಪರ್ಕಿಸಿ :
89048 09492

**ಮನೆಗಳು ಬಾಡಿಗೆ / ಲೀಸ್‌ಗಿವೆ**
2BHK ಆರ್ ಸಿ ಸಿ 2ನೇ ಮಹಡಿ ಲೀಸ್ 5 ಲಕ್ಷ, ಪೂರ್ವ ಬಾಗಿಲು, 2BHK ಆರ್.ಸಿ.ಸಿ. ಬಾಡಿಗೆ 5,500/- ದೇವರಾಜ್ ಅರಸ್ ಬಡಾವಣೆ, ದಾವಣಗೆರೆ. ಬೋರ್ ವೆಲ್/ಕಾರ್ಪೊರೇಷನ್ ನೀರು, ಕಾರ್ ಪಾರ್ಕಿಂಗ್ ಸೌಲಭ್ಯವಿದೆ. 1BHK ಆರ್.ಸಿ.ಸಿ. ನಿಟುವಳ್ಳಿ, ಲೆನಿನ್ ನಗರ, ಲೀಸ್ 2 ಲಕ್ಷ.
9741746205, 7349397287

**ಬೇಕಾಗಿದ್ದಾರೆ**
ಪತ್ರಿಕಾ ಕಾರ್ಯಾಲಯದಲ್ಲಿ ಸಂಜೆ ಪಾಳೆಯದಲ್ಲಿ ಕೆಲಸ ಮಾಡಲು ಕನ್ನಡ ಭಾಷಾ ಜ್ಞಾನ ಹಾಗೂ ಕನ್ನಡ ಟೈಪಿಂಗ್ ಬಲ್ಲ ಕಂಪ್ಯೂಟರ್ ಆಪರೇಟರ್ ಹುದ್ದೆಗೆ ಬೇಕಾಗಿದ್ದಾರೆ.
ಸಂಪರ್ಕಿಸುವ ಸಮಯ : ಮಧ್ಯಾಹ್ನ 12ರಿಂದ ಸಂಜೆ 5
ಫೋ. : 08192 254736

**ಮನೆ ಬಾಡಿಗೆಗೆ ಇದೆ**
ವಿದ್ಯಾನಗರ, 2ನೇ ಮುಖ್ಯರಸ್ತೆ, 5ನೇ ಅಡ್ಡ ರಸ್ತೆ, ಕಸ್ತೂರ ಬಾ ಸಮಾಜದ ಹತ್ತಿರ, 2BHK 2nd Floor, 3BHK 1st Floor (ಸಸ್ಯಹಾರಿಗಳಿಗೆ ಮಾತ್ರ)
9866 17014, 99457 75766

**ಬೇಕಾಗಿದ್ದಾರೆ**
ಅನುಭವವುಳ್ಳ ಯುವತಿಯರು ಬಟ್ಟೆ ಅಂಗಡಿ ಕೆಲಸಕ್ಕೆ ಜಾಕಿ ಶೋರೂಮ್‌ಗೆ ಬೇಕಾಗಿದ್ದಾರೆ. ದರ್ಶನ್ ಆರ್ಕೇಡ್ ಡೆಂಟಲ್ ಕಾಲೇಜ್ ರೋಡ್, ದಾವಣಗೆರೆ, ಸಂಪರ್ಕಿಸಿ :
08192 224842
ಸಮಯ 11Am to 6Pm ಬರುವಾಗ ದಯವಿಟ್ಟು ಪೋಟೋ ಬಯೋಡೇಟಾ ತನ್ನಿ

**ಬೇಕಾಗಿದ್ದಾರೆ**
ನಮ್ಮ ಆಫೀಸ್‌ನಲ್ಲಿ SSLCಯಾದ ಮಹಿಳೆಯರು ಬೇಕಾಗಿದ್ದಾರೆ.
ಶ್ರೀ ಈಶ್ವರಿ ಕ್ರಿಯೇಷನ್ಸ್
ವಸಂತ ರಸ್ತೆ, ದಾವಣಗೆರೆ.
94484 06702

**ಬೇಕಾಗಿದ್ದಾರೆ**
ಹೋಟೆಲ್‌ಗೆ ಅಡುಗೆ ಭಟ್ಟರು ಬೇಕಾಗಿದ್ದಾರೆ.
ಸಂಪರ್ಕಿಸಿ :
90367-34919

**ಸಂಘ-ಸಂಸ್ಥೆಗಳ, ಟ್ರಸ್ಟ್‌ಗಳ ಫೈನಾನ್ಸ್,**
GST & Income tax , ನೋಂದಣಿ, ನವೀಕರಣ ಆಡಿಟ್ ಮಾಡಿಕೊಡುತ್ತೇವೆ.
94838 62779

**ಬೇಕಾಗಿದ್ದಾರೆ**
ಅಕೌಂಟೆಂಟ್ ಹುದ್ದೆಗೆ ಲೇಡಿಸ್ ಬೇಕಾಗಿದ್ದಾರೆ. ಕಲಿಯುವವರಿಗೂ ಆದ್ಯತೆಯುಂಟು. ಕಂಪ್ಯೂಟರ್ ಆಪರೇಟರ್ ಬೇಕಾಗಿದ್ದಾರೆ.
91108 98377

**ಮನೆ ಬಾಡಿಗೆಗೆ ಇದೆ**
ಎಸ್.ಎಸ್.ಎಂ.ಎನ್. ಕ್ಲೇವ್ ಬಡಾವಣೆ, 4ನೇ ಅಡ್ಡ ರಸ್ತೆ, ಗ್ಲಾಸ್ ಹೌಸ್ ಹತ್ತಿರ, ದಾವಣಗೆರೆ, 2 ರೂಂ ಮನೆ ಬಾಡಿಗೆ ಇದೆ.
94805 00004
82175 48295
94499 73636
Veg Only

**2 BHK HOUSE FOR RENT**
1st floor, Kirwadi Layout, 4th main Road, Near Montessori Convent, Davangere-2.
99010 33555, 99457 13192

**ಬೇಕಾಗಿದ್ದಾರೆ**
1) ಸೇಲ್ಸ್ ಮನ್ 2) ಟ್ಯಾಲಿ ಆಪರೇಟರ್
ಅನುಭವವುಳ್ಳವರು ಮಾತ್ರ ಸಂಪರ್ಕಿಸಿ.
ಪ್ರಕಾಶ್ ಕಾಫಿ ವರ್ಕ್ಸ್
ವಿಜಯಲಕ್ಷ್ಮಿ ರಸ್ತೆ, ದಾವಣಗೆರೆ.
9900438052, 9740153513

**ಶ್ರೀ ಸಾಯಿ ಫೈನಾನ್ಸ್ (ರಿ)**
ನಮ್ಮಲ್ಲಿ ವ್ಯಾಪಾರಿಗಳಿಗೆ ಫೈನಾನ್ಸ್ ನೀಡಲಾಗುವುದು. ಹೋಟೆಲ್, ಬಟ್ಟೆ ಅಂಗಡಿ, ರೆಸ್ಟೋರೆಂಟ್ ಪ್ರಾವಿಜನ್ ಸ್ಟೋರ್, ಎಗ್‌ರೈಸ್ ಸೆಂಟರ್ ಇತ್ಯಾದಿ. ಶಿವಪ್ಪಯ್ಯ ಸರ್ಕಲ್, ದಾವಣಗೆರೆ. ಸಂಪರ್ಕಿಸಿ.
96860 22969

**ಬೇಕಾಗಿದ್ದಾರೆ**
PUC ಆದ ಮಹಿಳೆಯರು ಸ್ಟಾಕ್ ತೆಗೆಯಲು, ಹೋಲ್ ಸೇಲ್ ಫಾರ್ಮಾ ದಲ್ಲಿ ಬಿಲ್ಲಿಂಗ್ ಮಾಡಿರುವ ಅನುಭವವುಳ್ಳ ಮಹಿಳೆಯರು ಬೇಕಾಗಿದ್ದಾರೆ.
ಭೇಟಿ ಯ ಸಮಯ ಸಂಜೆ 6:30 ರ ನಂತರ
ಶ್ರೀ ಗುರು ಎಂಟರ್ ಪ್ರೈಸಸ್
#579, 6ನೇ ಮುಖ್ಯ ರಸ್ತೆ, ಪಿಜೆ ಬಡಾವಣೆ, ದಾವಣಗೆರೆ.

**ರಕ್ತ ದಾನ ಶ್ರೇಷ್ಠ ದಾನ**

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು, ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಆ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**TUITIONS**
ಗುರುದತ್ತ ಬಿ. ನಾಡಿಗೇರ್
Class 6 ಇಂದ Class 10
CBSE / ICSE Boards,
NEET / IIT - JEE / Olympiads
Memory Techniques + Hand Writing
97398 65711, 94822 44114

**TUITIONS**
ಗುರುದತ್ತ ಬಿ. ನಾಡಿಗೇರ್
PUC I / PUC II / Longterm / PCMB
NEET / IIT - JEE / KCET /
CLAT - Printed Notes + Study Materials
97398 65711, 94822 44114

**FLAT FOR LEASE**
3 BHK, Sqft :1888
AM Apartment
Nainika Prime Rose
Vidyanagar last city bus stop Davanagere.
89519 38228, 80502 22181

**LEARN PROGRAMMING**
`C' Language,
OOP'S with C++
Niyam Computers
PJ Extn. Davanagere
Call for more Info :
90367 19573

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
80739 48857

**HOUSE FOR RENT**
#5628/D-23 2BHK ground floor 4th main, 6th cross (left) East facing Near Indoor Nehru Stadium, S.S Badavane B Block, House name SHIVARATNA. Contact No.
94489 29509

**SSLC/PUC ಪರೀಕ್ಷೆಯಲ್ಲಿ ಮತ್ತು ಅವಕಾಶ ವಂಚಿತ ವಿದ್ಯಾರ್ಥಿಗಳಿಗೆ ಸುವರ್ಣಾವಕಾಶ**
ದೂರ ಶಿಕ್ಷಣದ ಮುಖಾಂತರ ಆನ್‌ಲೈನ್ ಪರೀಕ್ಷೆ ಮುಖಾಂತರ ಉತ್ತಮ ಫಲಿತಾಂಶಕ್ಕಾಗಿ ಮುಂದಿನ ವಿದ್ಯಾಭ್ಯಾಸ ಮುಂದುವರಿಸಲು/ಸರ್ಕಾರಿ/ಖಾಸಗಿ ಉದ್ಯೋಗಾವಕಾಶ ಪಡೆಯಬಹುದಾದ ಕರ್ನಾಟಕ ಸರ್ಕಾರದ ಪ.ಪೂ. ಮಾರ್ಗಸೂಚಿ ಪಟ್ಟಿಯಲ್ಲಿ (ಸಿಬಿಎಸ್‌ಇ) ಅನುಮೋದಿತಕೊಂಡಿದೆ.
BOSSE-SIKKIM (ಪ್ರವೇಶ ಪ್ರಾರಂಭವಾಗಿದೆ)
SHREYAS CORRESPONDENCE COLLEGE, DCM TownShip, Davangere.
97317 40827, 83107 47112, 97432 20274

**WANTED**
Banking Sector Tele Caller
(Female Only)
Qualification : Any Degree
90715 55081
Interview Time : 11AM

**ನಿವೇಶನ ಮಾರಾಟಕ್ಕಿದೆ**
64/38 ದಕ್ಷಿಣ, ಸಿದ್ದವೀರಪ್ಪ ಬಡಾವಣೆ, ಬಿಲ್ಡಿಂಗ್ ಮಾರಾಟಕ್ಕಿದೆ. 22/44 ದಕ್ಷಿಣ ವಸಂತ ರೋಡ್, ಸಂಪರ್ಕಿಸಿ.
96068 50128

**ಬೇಕಾಗಿದ್ದಾರೆ**
ಕೋ ಆಪರೇಟಿವ್ ಸೊಸೈಟಿಯಲ್ಲಿ ಕೆಲಸಕ್ಕೆ ಬೇಕಾಗಿದ್ದಾರೆ. ಪಿಗ್ಮಿ ಏಜೆಂಟರ್, ಹುಡುಗ-ಹುಡುಗಿಯರು, ಟೆಲಿಕಾಲರ್ ಮಹಿಳೆಯರು, ಫೀಲ್ಡ್ ಕೆಲಸಕ್ಕೆ ಸಹಾಯಕಿಯರು, ಮಹಿಳೆಯರು ತಕ್ಷಣ ಬೇಕಾಗಿದ್ದಾರೆ.
88614 38237

**ಬೇಕಾಗಿದ್ದಾರೆ**
ಹರಿಹರದಲ್ಲಿರುವ ಪೆಟ್ರೋಲ್ ಬಂಕ್‌ಗೆ ಹುಡುಗರು ಬೇಕಾಗಿದ್ದಾರೆ. ಸಂಪರ್ಕಿಸಿ :
80502 19547

**ಮನೆ ಬಾಡಿಗೆಗೆ ಇದೆ**
ಎಂಸಿಸಿ 'ಬಿ' ಬ್ಲಾಕ್ 6ನೇ ಕ್ರಾಸ್, ಕುವೆಂಪು ನಗರ, ದಾವಣಗೆರೆ, 2BHK ರೂಮ್ ಮುನ್ಸಿಪಲ್ ನೀರು & ಬೋರ್ ವೆಲ್ ಕಾರ್ ಪಾರ್ಕಿಂಗ್ ಸೌಲಭ್ಯವಿರುತ್ತದೆ.
94811 61164

**GROWAY FIN CARE**
Share Market Training Classes
F&O index fundamentals & Technical trading skills short & Long term investments skills.
Address : # 574/1 Aishwarya tower 1st Floor Lawyer road, KB Extn, Davanagere - 2
87923 67162

**ನಿವೇಶನ ಮಾರಾಟಕ್ಕಿದೆ**
ದಾವಣಗೆರೆ ಎಂಸಿಸಿ 'ಬಿ' ಬ್ಲಾಕ್, ಕುವೆಂಪು ನಗರದಲ್ಲಿ 40x60 ಅಡಿ ಅಳತೆಯ, ಪಶ್ಚಿಮ ದಿಕ್ಕಿನ, ಖಾಲಿ ನಿವೇಶನ ಮಾರಾಟಕ್ಕಿದೆ. ನಿವೇಶನ ಸಂಖ್ಯೆ 4242/2, ವಾರ್ಡ್ ನಂ. 33, 8ನೇ ಮೇನ್, 7ನೇ 'ಎ' ಕ್ರಾಸ್ ಹಳೇ ಆರ್‌ಟಿಓ ಆಫೀಸ್ ಹಿಂಭಾಗ ಬಿಐಇಟಿ ಎಂಜಿನಿಯರಿಂಗ್ ಕಾಲೇಜ್ ರಸ್ತೆ.
94483 67559
ಮಧ್ಯವರ್ತಿಗಳಿಗೆ ಅವಕಾಶವಿಲ್ಲ

## ಹೆಜ್ಬೊಲ್ಲಾದ ಇನ್ನೋರ್ವ ನಾಯಕ ಹತ

ಜೆರುಸಲೇಂ, ಸೆ. 29 – ಲೆಬನಾನ್ ಉಗ್ರವಾದಿ ಸಂಘಟನೆಯಾದ ಹೆಜ್ಬೊಲ್ಲಾ ಮೇಲೆ ನಡೆಸಲಾದ ದಾಳಿಯಲ್ಲಿ, ಸಂಘಟನೆಯ ಇನ್ನೋರ್ವ ಉನ್ನತ ನಾಯಕ ಹತನಾಗಿರುವುದಾಗಿ ಇಸ್ರೇಲ್ ತಿಳಿಸಿದೆ. ಹೆಜ್ಬೊಲ್ಲಾದ ಸೆಂಟ್ರಲ್ ಕೌನ್ಸಿಲ್ ಉಪ ಮುಖ್ಯಸ್ಥ ನಬಿಲ್ ಕವುಕ್ ದಾಳಿಯಲ್ಲಿ ಸಾವನ್ನಪ್ಪಿರುವುದನ್ನು ಹೆಜ್ಬೊಲ್ಲಾ ಖಚಿತ ಪಡಿಸಿದೆ. ಕಳೆದ ಒಂದು ವಾರದಲ್ಲಿ ಇಸ್ರೇಲ್ ನಡೆಸಿದ ದಾಳಿಯಲ್ಲಿ ಸಂಘಟನೆಯ ಮುಖ್ಯಸ್ಥ ಹಸನ್ ನಸ್ರಲ್ಲಾ ಸೇರಿ ಏಳು ಜನ ಪ್ರಮುಖರು ಹತರಾಗಿದ್ದಾರೆ. ಭಾನುವಾರ ಬ್ಯೂರತ್‌ನಲ್ಲಿ ನಡೆಸಿದ ದಾಳಿಯಲ್ಲಿ ನಬಿಲ್ ಕವುಕ್ ಸಾವನ್ನಪ್ಪಿರುವುದಾಗಿ ಇಸ್ರೇಲ್ ಸೈನ್ಯ ತಿಳಿಸಿದೆ.

## ವೇದಿಕೆ ಮೇಲೆ ಬಳಲಿದ ಖರ್ಗೆ

ಜಸ್ರೊತಾ, ಸೆ. 29 - ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಜಮ್ಮು ಮತ್ತು ಕಾಶ್ಮೀರದ ಜಸ್ರೋಟಾದಲ್ಲಿ ಸಮಾ ವೇಶದಲ್ಲಿ ಮಾತನಾಡುವಾಗ ಬಳಲಿ ಚಿಕಿತ್ಸೆ ಪಡೆದುಕೊಂಡಿದ್ದಾರೆ. ಸಮಾವೇಶದಲ್ಲಿ ಮಾತನಾಡುವಾಗಲೇ ಅವರು ಬಳಲಿದರು. ಅವರಿಗೆ ಕುರ್ಚಿ ತಂದು ನೆರವು ನೀಡಲಾಯಿತು. ನಂತರ ವೈದ್ಯಕೀಯ ನೆರವು ನೀಡಲಾಯಿತು. ನಂತರದಲ್ಲಿ ಉಧಾಂಪುರ ದಲ್ಲಿ ಖರ್ಗೆ ಪಾಲ್ಗೊಳ್ಳಬೇಕಿದ್ದ ಎರಡನೇ ಸಮಾವೇಶ ರದ್ದುಗೊಳಿಸಲಾಯಿತು. ಖರ್ಗೆ ದೆಹಲಿಗೆ ಮರಳಿದರು.

# ಯುಬಿಡಿಟಿ : ಶೇ.50 ಪೇಮೆಂಟ್ ಕೋಟಾ ರದ್ದಾಗುವವರೆಗೂ ಹೋರಾಟ




### ಶುಲ್ಕ ಕಡಿತ : ಎಐಡಿಎಸ್‌ಓ ನೇತೃತ್ವದ ವಿದ್ಯಾರ್ಥಿಗಳ ಹೋರಾಟದ ಫಲ

ದಾವಣಗೆರೆ, ಸೆ. 29- ಯುಬಿಡಿಟಿ ಕಾಲೇಜಿನ ಮೂರು ಮತ್ತು ನಾಲ್ಕನೇ ವರ್ಷದ ಇಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಹೆಚ್ಚಿಸಲ್ಪಟ್ಟಿದ್ದ ಶುಲ್ಕವನ್ನು ಎಐಡಿಎಸ್‌ಓ ಹಾಗೂ ಯುಬಿಡಿಟಿ ಉಳಿಸಿ ವಿದ್ಯಾರ್ಥಿಗಳ ಹೋರಾಟ ಸಮಿತಿ ನೇತೃತ್ವದಲ್ಲಿ ನಡೆಯುತ್ತಿರುವ ವಿದ್ಯಾರ್ಥಿ ಚಳವಳಿಯ ಫಲವಾಗಿ ಕಡಿತಗೊಳಿಸಲಾಗಿದೆ.

ಇತ್ತೀಚಿಗೆ ನಗರದ ಕುವೆಂಪು ಕನ್ನಡ ಭವನದಲ್ಲಿ ನಡೆದ 'ಯುಬಿಡಿಟಿ ಉಳಿಸಿ' ವಿದ್ಯಾರ್ಥಿಗಳ ಪ್ರತಿಭಟನಾ ಸಮಾವೇಶದಲ್ಲಿ ಶೇ.50 ರಷ್ಟು ಪೇಮೆಂಟ್ ಕೋಟಾ ರದ್ದುಪಡಿಸುವಂತೆ ಹಾಗೂ ಶುಲ್ಕ ಹೆಚ್ಚಳ ಕೈಬಿಡುವಂತೆ ಸರ್ಕಾರವನ್ನು ಆಗ್ರಹಿಸಲಾಗಿತ್ತು.

ಪ್ರಾಂಶುಪಾಲರಿಗೆ ವಿದ್ಯಾರ್ಥಿಗಳು ಮನವಿ ಸಲ್ಲಿಸಿದಾಗ ಎರಡು ದಿನಗಳ ಕಾಲಾವಕಾಶ ಕೇಳಿದ್ದರು. ಅಂತಿಮವಾಗಿ, ಎಐಡಿಎಸ್‌ಓ ನೇತೃತ್ವದಲ್ಲಿ ಕಾಲೇಜಿನ ವಿದ್ಯಾರ್ಥಿಗಳು ನಡೆಸಿದ ಹೋರಾಟದ ಫಲದಿಂದ ಶುಲ್ಕವನ್ನು ಕಡಿತಗೊಳಿಸಿ ಸುತ್ತೋಲೆ ಹೊರಡಿಸಲಾಗಿದೆ.

33.510 ರೂ.ಗೆ ಏರಿಸಲಾಗಿದ್ದ ಅಂತಿಮ ವರ್ಷದ ಶುಲ್ಕವನ್ನು 26.720 ರೂ.ಗೆ ಇಳಿಸಲಾಗಿದೆ. 34.510ರೂ.ಗೆ ಏರಿಸಲಾಗಿದ್ದ ಮೂರನೇ ವರ್ಷದ ಶುಲ್ಕವನ್ನು 30.530 ರೂ.ಗೆ ಇಳಿಸಲಾಗಿದೆ. ವಿದ್ಯಾರ್ಥಿಗಳ ರಾಜೀ ರಹಿತ ಹೋರಾಟಕ್ಕೆ ಸಂದ ಜಯ ಇದಾಗಿದೆ.

ಆದರೆ ಯುಬಿಡಿಟಿ ಕಾಲೇಜನ್ನು ಸ್ವ-ಹಣಕಾಸು ಸಂಸ್ಥೆಯನ್ನಾಗಿಸಿ ಕ್ರಮೇಣ ಖಾಸಗೀಕರಣಗೊಳಿಸುವ ಹುನ್ನಾರದ ಭಾಗವಾದ ಶೇ.50 ರಷ್ಟು ಪೇಮೆಂಟ್ ಕೋಟಾ ಇನ್ನೂ ಕೂಡ ರದ್ದಾಗಿಲ್ಲ. ಈ ಬೇಡಿಕೆ ಈಡೇರುವವರೆಗೂ ಹೋರಾಡುವ ಸಂಕಲ್ಪ ತೊಟ್ಟಿರುವ ವಿದ್ಯಾರ್ಥಿಗಳು 'ಯುಬಿಡಿಟಿ ಉಳಿಸಿ' ಹೋರಾಟದ ಮುಂದುವರಿಕೆಯಾಗಿ ಇಂದು ನಗರದ ಕೆ ಆರ್ ಮಾರುಕಟ್ಟೆ, ಗಡಿಯಾರ ಕಂಬ ಸೇರಿದಂತೆ ವಿವಿಧ ಸಾರ್ವಜನಿಕ ಸ್ಥಳಗಳಲ್ಲಿ ಜನಸಾಮಾನ್ಯರಿಂದ ಸಹಿ ಸಂಗ್ರಹ ಮಾಡಿದರು.

ವಿದ್ಯಾರ್ಥಿಗಳಿಗೆ ಸಂಪೂರ್ಣ ಬೆಂಬಲ ವ್ಯಕ್ತಪಡಿಸಿದ ವ್ಯಾಪಾರಿಗಳು, ರೈತರು ಹಾಗೂ ಸಾರ್ವಜನಿಕರು ಚಳವಳಿ ಬಲಪಡಿಸಲು ಸಹಿಯೊಂದಿಗೆ ದೇಣಿಗೆ ನೀಡಿ ವಿದ್ಯಾರ್ಥಿಗಳ ಹೋರಾಟಕ್ಕೆ ಶುಭ ಹಾರೈಸಿದರು.

ಈ ಸಂದರ್ಭದಲ್ಲಿ ಎಐಡಿಎಸ್‌ಓನ ಜಿಲ್ಲಾಧ್ಯಕ್ಷರಾದ ಪೂಜಾ ನಂದಿಹಳ್ಳಿ ಮಾತನಾಡಿ, ರೈತರು, ಬೀದಿ ಬದಿ ವ್ಯಾಪಾರಸ್ಥರು, ದಿನಗೂಲಿ ಕಾರ್ಮಿಕರು ಹಾಗೂ ಮಧ್ಯಮ ವರ್ಗದ ಜನಗಳು ದಿನಬಳಕೆ ವಸ್ತುಗಳ ಬೆಲೆ ಏರಿಕೆಯಿಂದ ಈಗಾಗಲೇ ತತ್ತರಿಸಿ ಹೋಗಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ತಮ್ಮ ಮಕ್ಕಳ ಶಿಕ್ಷಣಕ್ಕಾಗಿ ಅವರು ಅವಲಂಬಿತರಾಗಿರುವುದು ಸರ್ಕಾರಿ ಶಾಲಾ-ಕಾಲೇಜುಗಳ ಮೇಲೆ. ಹೀಗಿರುವಾಗ ಯುಬಿಡಿಟಿ ಕಾಲೇಜಿನಲ್ಲಿ ಜಾರಿಗೊಳಿಸಿರುವ ಶೇ. 50 ಪೇಮೆಂಟ್ ಕೋಟಾದ ಮೂಲಕ ಈ ಎಲ್ಲ ಜನಸಾಮಾನ್ಯರ ಮಕ್ಕಳನ್ನು ಉನ್ನತ ಶಿಕ್ಷಣದಿಂದ ದೂರ ತಳ್ಳಲಾಗುತ್ತಿದೆ. ಬಡ ಪ್ರತಿಭಾವಂತ ವಿದ್ಯಾರ್ಥಿಗಳ ಸೀಟುಗಳನ್ನು ಹಣವಂತರಿಗೆ ಮಾರಾಟ ಮಾರಲಾಗುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಜಿಲ್ಲಾ ಕಾರ್ಯದರ್ಶಿ ಟಿ.ಎಸ್. ಸುಮನ್ ಮಾತನಾಡಿ, ವಿದ್ಯಾರ್ಥಿಗಳ ಸಂಘಟಿತ ಹೋರಾಟಕ್ಕೆ ಮಣಿದು, ಹೆಚ್ಚಿಸಲ್ಪಟ್ಟಿದ್ದ ಶುಲ್ಕವನ್ನು ಕಡಿತಗೊಳಿಸಲಾಗಿದೆ. ಆದರೆ ಬಡವರಿಗೆ ದ್ರೋಹ ಎಸಗಿ ಜಾರಿಗೊಳಿಸಿರುವ ಶೇ.50 ರ ಪೇಮೆಂಟ್ ಕೋಟಾ ರದ್ದಾಗುವವರೆಗೂ, ವಿದ್ಯಾರ್ಥಿಗಳು ಐಕ್ಯತೆಯಿಂದ ಹೋರಾಟ ಮುಂದುವರೆಸುವುದಾಗಿ ಸರ್ಕಾರಕ್ಕೆ ಎಚ್ಚರಿಕೆ ನೀಡಿದರು.

ರಾಜ್ಯ ಕಚೇರಿ ಕಾರ್ಯದರ್ಶಿ ಮಹಾಂತೇಶ್ ಬೀಳೂರು, ಜಿಲ್ಲಾ ಉಪಾಧ್ಯಕ್ಷೆ ಬಿ.ಕಾವ್ಯ ಸೇರಿದಂತೆ ಹೋರಾಟ ಸಮಿತಿ ಸದಸ್ಯರಾದ ಅಭಿಷೇಕ್, ಸಂತೋಷ್, ರಾಜಶೇಖರ್, ಚೇತನ್, ರೀಮಾ, ಆದರ್ಶ್, ಶಿವನಗೌಡ ಮುಂತಾದವರು ಭಾಗವಹಿಸಿದ್ದರು.



# ಸ್ವಂತ ಕಟ್ಟಡದಲ್ಲಿ ಶ್ರೀ ವೀರಮಾಹೇಶ್ವರ ಕ್ರೆಡಿಟ್ ಸೊಸೈಟಿ

### ಸಂಘದ ವಾರ್ಷಿಕ ಮಹಾಸಭೆಯಲ್ಲಿ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ ಸಂತಸ

ದಾವಣಗೆರೆ, ಸೆ. 29 - ಶ್ರೀ ವೀರಮಾಹೇಶ್ವರ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿಯು ಸದಸ್ಯರ, ದಾನಿಗಳ, ಷೇರುದಾರರ, ಗ್ರಾಹಕರ ಸಹಕಾರದಿಂದಲೇ ಸ್ವಂತ ಕಟ್ಟಡ ನಿರ್ಮಾಣ ಮಾಡಿರುವುದು ಇಡೀ ಜಂಗಮ ಸಮಾಜ ಹೆಮ್ಮೆಯ ಪಡುವಂತಹ ವಿಷಯ ಎಂದು ಆವರಗೊಳ್ಳ ಪುರವರ್ಗ ಹಿರೇಮಠದ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ ಸಂತಸ ವ್ಯಕ್ತಪಡಿಸಿದರು.

ನಗರದ ಅಕ್ಕಮಹಾದೇವಿ ಕಲ್ಯಾಣ ಮಂಟಪದಲ್ಲಿ ನಡೆದ ಶ್ರೀ ವೀರಮಾಹೇಶ್ವರ ಕೋ - ಆಪರೇಟಿವ್ ಸೊಸೈಟಿಯ 28ನೇ ವಾರ್ಷಿಕ ಮಹಾ ಸಭೆಯ ಸಾನ್ನಿಧ್ಯ ವಹಿಸಿ ಶ್ರೀಗಳು ಆಶೀರ್ವಚನ ನೀಡಿದರು.

ಜಂಗಮ ಸಮಾಜದಲ್ಲಿ ಒಗ್ಗಟ್ಟಿನ ಕೊರತೆ ಇದೆ, ಇದು ಮುಂದಿನ ಪೀಳಿಗೆಗೆ ಮಾರಕವಾಗಬಹುದು. ಆಚಾರ-ವಿಚಾರ, ಸಂಸ್ಕಾರ ಕಲಿಸುವ ನಿಟ್ಟಿನಲ್ಲಿ ಸಮಾಜ ಶ್ರಮಿಸಲಿ ಎಂದು ಜಂಗಮ ಸಮಾಜಕ್ಕೆ ಕರೆ ಕೊಟ್ಟರು.

ಸಂಘದ ಅಧ್ಯಕ್ಷ ತ್ಯಾವಣಿಗಿ ವೀರಭದ್ರಸ್ವಾಮಿ ಮಾತನಾಡಿ, 2023-24ನೇ ಸಾಲಿನಲ್ಲಿ ಸಂಘವು 78,37,778-00 ಲಕ್ಷ ರೂ. ಲಾಭ ಗಳಿಸಿದ್ದು, ಕೊಡಬೇಕಾದ ಎಲ್ಲಾ ಮೊತ್ತವನ್ನು ಕೊಟ್ಟು 14,51,437 ಲಕ್ಷ ರೂ. ನಿವ್ವಳ ಲಾಭ ಗಳಿಸಿದೆ ಎಂದು ಸಂತಸ ವ್ಯಕ್ತಪಡಿಸಿದರು.

ಸಂಘವು ರೂ. 46,29,635 ಷೇರು ಬಂಡವಾಳ, 5,39,39,388-13 ಠೇವಣಿ ಹೊಂದಿದ್ದು, 3,67,97,808-20 ಸಾಲ ಒದಗಿಸಲಾಗಿದೆ. ಶೇ. 12ರಷ್ಟು ಡಿವಿಡೆಂಡ್ ನೀಡುವುದಾಗಿ ಅವರು ಘೋಷಿಸಿದರು.

ಎಸ್.ಆರ್.ಪಿ. ಶಾಲಾ ಮಕ್ಕಳು ಪ್ರಾರ್ಥಿಸಿದರು. ಎಲ್.ಎಂ.ಆರ್. ಬಸವರಾಜಯ್ಯ ಸ್ವಾಗತಿಸಿದರು. ಕಾರ್ಯದರ್ಶಿ ನಾಗರಾಜಯ್ಯ ಐನಳ್ಳಿ ಮಠದ ಕಾರ್ಯಕ್ರಮ ನಿರೂಪಿಸಿದರು. ಶ್ರೀಮತಿ ಸುಮನ್ ಕಟಗಿಹಳ್ಳಿ ಮಠ ವಂದಿಸಿದರು.

ಸಂಘದ ಉಪಾಧ್ಯಕ್ಷ ಪಂಚಾಕ್ಷರಯ್ಯ ಬಸಾಪುರ, ನಿರ್ದೇಶಕ ಎಲ್‌ಎಂ.ಆರ್. ಬಸವರಾಜಯ್ಯ, ಬಿ.ಎಂ. ರವಿ, ಆರ್.ಎಂ. ವೀರಯ್ಯ, ಎಸ್.ಎಂ. ವೀರೇಂದ್ರ, ವೃಷಭೇಂದ್ರ ಸ್ವಾಮಿ, ಶ್ರೀಮತಿ ತಾರಾ, ಶ್ರೀಮತಿ ರೇಖಾ, ಶ್ರೀಮತಿ ಸುಮನ್ ಕಟಗಿಹಳ್ಳಿ ಮಠ, ಚನ್ನಬಸವ ಶರ್ಮ, ವಿಶೇಷ ಆಹ್ವಾನಿತ ಎಸ್.ಕೆ. ರಾಜಕುಮಾರ್ ಅವರುಗಳು ಸಮಾರಂಭದ ವೇದಿಕೆಯಲ್ಲಿ ಉಪಸ್ಥಿತರಿದ್ದರು.

# ಸಿಎಂ ಸಿದ್ದು ರಾಜಿನಾಮೆಗೆ, ಮಾಜಿ ಶಾಸಕ ಎಂಪಿಆರ್ ಒತ್ತಾಯ

> **ಪೊಲೀಸರು ಅನಗತ್ಯವಾಗಿ ಹಿಂದೂ ಕಾರ್ಯಕರ್ತರಿಗೆ ಮತ್ತು ಕುಟುಂಬದ ಸದಸ್ಯರಿಗೆ ತೊಂದರೆ ನೀಡಿದರೆ ಸಹಿಸಲ್ಲ.**
> **- ಎಂ.ಪಿ. ರೇಣುಕಾಚಾರ್ಯ, ಮಾಜಿ ಶಾಸಕ**

ದಾವಣಗೆರೆ, ಸೆ.29- ಸಿಎಂ ಸಿದ್ದರಾಮಯ್ಯನವರು ಅಧಿಕಾರದಲ್ಲಿದ್ದರೇ ಮುಡಾ ತನಿಖೆಯ ಮೇಲೆ ರಾಜಕೀಯ ಪ್ರಭಾವ ಬೀಳಲಿದೆ. ಹಾಗಾಗಿ ಅವರು ಸಿಎಂ ಸ್ಥಾನಕ್ಕೆ ಕೂಡಲೇ ರಾಜಿನಾಮೆ ನೀಡಬೇಕು ಎಂದು ಮಾಜಿ ಶಾಸಕ ಎಂ.ಪಿ. ರೇಣುಕಾಚಾರ್ಯ ಒತ್ತಾಯಿಸಿದರು.

ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಿದ್ದರಾಮಯ್ಯನವರು ಆರೋಪ ಮುಕ್ತರಾದರೆ ಮತ್ತೆ ಸಿಎಂ ಸ್ಥಾನ ಅಲಂಕರಿಸುವುದಕ್ಕೆ ಯಾವುದೇ ತಕರಾರು ಇಲ್ಲ. ಆದರೆ ಅಲ್ಲಿಯ ತನಕ ಅವರು ಅಧಿಕಾರದಲ್ಲಿ ಇರಬಾರದು ಎಂದು ಆಗ್ರಹಿಸಿದರು.

ಈ ಹಿಂದೆ ಮುಖ್ಯಮಂತ್ರಿಯಾಗಿದ್ದ ರಾಮಕೃಷ್ಣ ಹೆಗಡೆ ಮತ್ತು ಬಿ.ಎಸ್. ಯಡಿಯೂರಪ್ಪ ಅವರ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಎಂ ಸಿದ್ದರಾಮಯ್ಯನವರು ರಾಜೀನಾಮೆಗೆ ಒತ್ತಾಯಿಸಿದ್ದರು. ಅದೇ ರೀತಿ ಸಿಎಂ ಹುದ್ದೆಗೆ ಅವರು ರಾಜೀನಾಮೆ ನೀಡಲಿ ಎಂದು ಹೇಳಿದರು.

ಸಿದ್ದರಾಮಯ್ಯನವರು ಆರೋಪ ಎದುರಿಸಿದ ಹೊಸ್ತಿಲಲ್ಲೇ ಮುಡಾದ 14 ಸೈಟುಗಳನ್ನು ವಾಪಸ್ ಮಾಡಿದ್ದರೆ ಸಿಎಂ ಕುರ್ಚಿಗೆ ಕಂಟಕ ಬರುತ್ತಿರಲಿಲ್ಲ. ಇಂದು ಕಾಂಗ್ರೆಸ್ ಸರ್ಕಾರ ಜನರ ಸಂಪೂರ್ಣ ವಿಶ್ವಾಸ ಕಳೆದುಕೊಂಡಿದೆ. ಹಾಗಾಗಿ ಸರ್ಕಾರ ವಿಸರ್ಜಿಸಲು ಮುಂದಾಗಿ, ಮತ್ತೊಮ್ಮೆ ಜನಾದೇಶದ ಸರ್ಕಾರ ರಚಿಸೋಣ ಎಂದು ಸವಾಲ್ ಎಸೆದರು.

ಮಲ್ಲಿಕಾರ್ಜುನ್ ಖರ್ಗೆ ಹೇಳಿಕೆ ಗಮನಿಸಿದರೆ, ರಾಜ್ಯದಲ್ಲಿ ಮುಸುಕಿನ ಗುದ್ದಾಟ ಪ್ರಾರಂಭವಾಗಿರುವುದು ಗೋಚರಿಸುತ್ತಿದೆ. ಮುಖ್ಯಮಂತ್ರಿಗಳ ಕುರ್ಚಿಗೆ ಟವೆಲ್, ಹಾಗೂ ಟಿಶ್ಯೂ ಪೇಪರ್ ಹಾಕುತ್ತಿದ್ದಾರೆ ಎಂದು ಟೀಕಿಸಿದರು.

ಪಂಚ ಗ್ಯಾರಂಟಿಗಳು ಸಂಪೂರ್ಣವಾಗಿ ವಿಫಲವಾಗಿವೆ. ಸುಳ್ಳು ಭರವಸೆ ಕೊಟ್ಟು ಸರ್ಕಾರ ರಚಿಸಿದ್ದಾರೆ. ಕಳೆದ 3-4 ತಿಂಗಳಿಂದ ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳು ಹಾಗೂ ಸಚಿವರು ಜನರ ಕೈಗೆ ಸಿಗುತ್ತಿಲ್ಲ. ಆಡಳಿತ ಯಂತ್ರ ಸಂಪೂರ್ಣವಾಗಿ ಕುಸಿದಿದೆ ಎಂದು ದೂರಿದರು.

ಈ ವೇಳೆ ಇಡಗುಂಜಿ ಜಾಧವ್, ಶ್ರೀನಿವಾಸ್, ಮಣಿಕಂಠ, ಮಂಜುನಾಥ್, ಜಯರುದ್ರೇಶ್ ಮತ್ತಿತರರು ಸುದ್ದಿಗೋಷ್ಠಿಯಲ್ಲಿದ್ದರು.

## ನಗರದಲ್ಲಿ ಇಂದು ಪ್ರತಿಭಾ ಪುರಸ್ಕಾರ

ಜಿಲ್ಲಾ ಪದವಿ ಪೂರ್ವ ಕಾಲೇಜುಗಳ ಪ್ರಾಚಾರ್ಯರ ಸಂಘದ ವತಿಯಿಂದ ಇಂದು ಬೆಳಿಗ್ಗೆ 10.30 ಕ್ಕೆ ಮಾಗನೂರು ಬಸಪ್ಪ ಪದವಿ ಪೂರ್ವ ಕಾಲೇಜು ಸಭಾಂಗಣದಲ್ಲಿ ದ್ವಿತೀಯ ಪಿಯುಸಿ ಪರೀಕ್ಷೆಯ-1 ರಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರವನ್ನು ಹಮ್ಮಿಕೊಳ್ಳಲಾಗಿದೆ.

ಉದ್ಘಾಟನೆ : ಎಡಿಸಿ ಪಿ.ಎನ್. ಲೋಕೇಶ್. ಅಧ್ಯಕ್ಷತೆ : ಜಿಲ್ಲಾ ಪದವಿ ಪೂರ್ವ ಕಾಲೇಜುಗಳ ಪ್ರಾಚಾರ್ಯರ ಸಂಘದ ಅಧ್ಯಕ್ಷ ಎಸ್. ಪ್ರದೀಪ್ ಕುಮಾರ್. ಮುಖ್ಯ ಅತಿಥಿಗಳು : ಹಿರಿಯ ಪತ್ರ ಕರ್ತ ಹೆಚ್.ಬಿ. ಮಂಜುನಾಥ್, ಪದವಿ ಪೂರ್ವ ಶಿಕ್ಷಣ ಇಲಾಖೆ ಉಪ ನಿರ್ದೇಶಕ ಎಸ್.ಜಿ. ಕರಿಸಿದ್ದಪ್ಪ, ಪ್ರಾಚಾರ್ಯ ಎ.ಟಿ. ರಂಗಪ್ಪ, ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ ಸಂಘದ ಅಧ್ಯಕ್ಷ ಸಿ.ಬಿ. ರವಿ, ಮಾಗನೂರು ಬಸಪ್ಪ ಪಬ್ಲಿಕ್ ಟ್ರಸ್ಟ್ ಕಾರ್ಯದರ್ಶಿ ಮಾಗನೂರು ಸಂಗಮೇಶ್ವರಗೌಡ್ರು, ಪ್ರಾಚಾರ್ಯ ಪ್ರಸಾದ್ ಬಂಗೇರ.

## ದಾಸಕರಿಯಪ್ಪ ನಿಧನಕ್ಕೆ ಎಂ.ಎನ್. ನಾ. ಶೋಕ

ದಾವಣಗೆರೆ, ಸೆ.29- ದೂಡಾ ಮಾಜಿ ಅಧ್ಯಕ್ಷರೂ, ಜನತಾ ಪರಿವಾರದ ಹಿರಿಯ ಮುಖಂಡರೂ ಆಗಿದ್ದ ಟಿ. ದಾಸಕರಿಯಪ್ಪ ಅವರ ನಿಧನಕ್ಕೆ ಜಿಲ್ಲಾ ಜೆಡಿಎಸ್ ಮುಖಂಡ ಎಂ.ಎನ್. ನಾಗರಾಜ್ ಸಂತಾಪ ವ್ಯಕ್ತಪಡಿಸಿದ್ದಾರೆ.

# ವಿಜ್ಞಾನದಿಂದ ದೇಶದ ಅಭಿವೃದ್ಧಿ ಸಾಧ್ಯ

### ಭೌತ ಶಾಸ್ತ್ರದ ಕಾರ್ಯಾಗಾರ ಉದ್ಘಾಟಿಸಿದ ಬಿ.ಡಿ. ಕುಂಬಾರ



ದಾವಣಗೆರೆ, ಸೆ. 29- ವಿಜ್ಞಾನದಿಂದ ದೇಶದ ಅಭಿವೃದ್ಧಿ ಸಾಧ್ಯ, ಹಾಗಾಗಿ ಮಕ್ಕಳಲ್ಲಿ ವಿಜ್ಞಾನದ ಅಭಿರುಚಿ ಬೆಳೆಸುವ ಕಾರ್ಯ ಶಿಕ್ಷಕರಿಂದ ನಡೆಯಬೇಕು ಎಂದು ದಾವಣಗೆರೆ ವಿವಿಯ ಕುಲಪತಿ ಬಿ.ಡಿ ಕುಂಬಾರ ಹೇಳಿದರು.

ಡಿ.ಆರ್.ಎಂ ವಿಜ್ಞಾನ ಕಾಲೇಜು ಹಾಗೂ ದಾವಣಗೆರೆ ವಿವಿಯ ಸಹಯೋಗದಲ್ಲಿ ನಗರದ ಎ.ವಿ.ಕೆ ಕಾಲೇಜಿನಲ್ಲಿ ಗುರುವಾರ ಆಯೋಜಿಸಿದ್ದ ಯುಜಿ ಭೌತ ಶಾಸ್ತ್ರದ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದರು.

ಗುಣಮಟ್ಟದ ಶಿಕ್ಷಕರು ಹಾಗೂ ಪ್ರಾಯೋಗಿಕ ಕೊಠಡಿಯಲ್ಲಿ ಮೂಲ ಸೌಕರ್ಯದ ಕೊರತೆಯಿಂದಾಗಿ ವಿಜ್ಞಾನ ವಿದ್ಯಾರ್ಥಿಗಳಿಗೆ ಮೌಲ್ಯಾಧಾರಿತ ಶಿಕ್ಷಣ ಶಿಕ್ಷಣ ಸಿಗುತ್ತಿಲ್ಲ. ಈ ನಿಟ್ಟಿನಲ್ಲಿ ಮಕ್ಕಳಿಗೆ ಶಿಕ್ಷಣ ನೀಡುವಲ್ಲಿ ಶೈಕ್ಷಣಿಕ ವ್ಯವಸ್ಥೆ ಎಡವಿದೆ ಎಂದು ಹೇಳಿದರು.

ವಿಜ್ಞಾನ ಬೋಧಿಸುವ ಶಿಕ್ಷಕರು ಪೂರ್ವ ಸಿದ್ಧತೆಯೊಂದಿಗೆ ಮಕ್ಕಳಿಗೆ ಪಾಠ ಮಾಡಬೇಕು. ತರಗತಿಯಲ್ಲಿ ಕೇಳುವ ಚಿಕ್ಕ ಪುಟ್ಟ ಪ್ರಶ್ನೆಗಳಿಗೆ ಉತ್ತರಿಸಿ ಅವರ ಜ್ಞಾನ ಸಂಪತ್ತು ಅಭಿವೃದ್ಧಿಗೊಳಿಸುವ ಕಾರ್ಯ ಮಾಡಿದರೆ ಕಾಲೇಜಿನ ದಾಖಲಾತಿ ಹೆಚ್ಚಾಗಲಿದೆ ಎಂದರು.

ವಿಜ್ಞಾನ ತನ್ನ ವ್ಯಾಪ್ತಿಯನ್ನು ಹೆಚ್ಚಿಸಿಕೊಳ್ಳುತ್ತಿದ್ದರಿಂದ ಪ್ರತಿ 3 ವರ್ಷಕ್ಕೊಮ್ಮೆ ಪಠ್ಯಕ್ರಮ ಬದಲಾಯಿಸಬೇಕು ಮತ್ತು ಪಠ್ಯ ಬದಲಾಯಿಸುವಾಗ ಹಿರಿಯ ವಿದ್ಯಾರ್ಥಿಗಳ ಸಲಹೆ ಪಡೆಯುವುದು ಮುಖ್ಯ ಎಂದು ಹೇಳಿದರು.

ಇಂತಹ ಉಪನ್ಯಾಸ ಮಾಲಿಕೆ ನಡೆಯುವುದು ವಿರಳವಾಗಿದೆ. ಹಾಗಾಗಿ ಶೈಕ್ಷಣಿಕ ಉತ್ತೇಜನಕ್ಕಾಗಿ ಪ್ರತಿ 3 ತಿಂಗಳಿಗೊಮ್ಮೆ ಹಿರಿಯ ಪ್ರಾಧ್ಯಾಪಕರು ಹಾಗೂ ವಿಜ್ಞಾನಿಗಳಿಂದ ಉಪನ್ಯಾಸ ಮಾಲಿಕೆ ನಡೆಸಬೇಕು ಎಂದು ಸಲಹೆ ನೀಡಿದರು. ಈ ವೇಳೆ ಕಾಲೇಜಿನ ಪ್ರಾಚಾರ್ಯೆ ಕಮಲಾ ಸೊಪ್ಪಿನ್, ಡಿಆರ್‌ಎಂ ವಿಜ್ಞಾನ ಕಾಲೇಜಿನ ಪ್ರಾಚಾರ್ಯೆ ಎಂ.ಪಿ. ರೂಪಶ್ರೀ, ಆರ್.ಆರ್. ಶಿವಕುಮಾರ್, ಪ್ರಾಧ್ಯಾಪಕರಾದ ಶ್ರೀನಿವಾಸ್, ವಿನೋದ್ ಕುಮಾರ್, ಹನುಮಂತರಾಯ ಮತ್ತಿತರರಿದ್ದರು.

# ಡಾ. ಮಹಾಂತ ಶಿವಾಚಾರ್ಯರ 87ನೇ ಜನ್ಮದಿನೋತ್ಸವ



ದಾವಣಗೆರೆ, ಸೆ. 29 - ನಗರದ ಕಿತ್ತೂರು ರಾಣಿ ಚನ್ನಮ್ಮ ವೃತ್ತದಲ್ಲಿ ವೀರಶೈವ ಲಿಂಗಾಯತ ಪಂಚಮಸಾಲಿ ಸಮಾಜದ 34ನೇ ವಾರ್ಡ್ ಘಟಕದ ನೇತೃತ್ವದಲ್ಲಿ ಜಿಲ್ಲೆಯ ಎಲ್ಲಾ ಘಟಕಗಳ ಸಹಯೋಗದಲ್ಲಿ ವೀರಶೈವ ಲಿಂಗಾಯತ ಪಂಚಮಸಾಲಿ ಜಗದ್ಗುರು ಪೀಠ ಹರಿಹರದ ಲಿಂಗೈಕ್ಯ ಜಗದ್ಗುರು ಡಾ. ಮಹಾಂತ ಶಿವಾಚಾರ್ಯರ 87ನೇ ಜನ್ಮದಿನೋತ್ಸವ ಆಚರಿಸಿ ನಂತರ ಪ್ರಸಾದ ವಿತರಣೆ ಮಾಡಲಾಯಿತು.

ಜಗದ್ಗುರು ಪೀಠದ ಪ್ರಧಾನ ಧರ್ಮದರ್ಶಿ ಹಾಗೂ ಪಂಚಮಸಾಲಿ ಸಮಾಜದ ಜಿಲ್ಲಾಧ್ಯಕ್ಷ ಬಿ.ಸಿ. ಉಮಾಪತಿ ಅವರು ದೀಪ ಬೆಳಗಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಮಹಾನಗರ ಪಾಲಿಕೆಗೆ ಉಪಮೇಯರ್ ಆಗಿ ಆಯ್ಕೆಯಾಗಿರುವ ಸೋಗಿ ಶಾಂತಕುಮಾರ್, ಎಂ. ದೊಡ್ಡಪ್ಪ, ಶ್ರೀಧರ್, ಶಿವಶಂಕರ್, ಮಲ್ಲಿನಾಥ, ಶ್ರೀಮತಿ ಸುಷ್ಮಾ ಪಾಟೀಲ್, ಶ್ರೀಮತಿ ಮೀನಾ ಪ್ರಸಾದ್, ಶ್ರೀಮತಿ ವೀಣಾ ನಟರಾಜ್ ಬೆಳ್ಳೂಡಿ, ಪಾರ್ವತಿ ಮತ್ತಿಹಳ್ಳಿ, ರಶ್ಮಿ ಕುಂಕೋದ್, ಸುರೇಶ್, ಚಂದ್ರಪ್ಪ, ಮಾಲತೇಶ ದೇಸಾಯಿ, ಶಿವಕುಮಾರ್, ಮಹೇಶ್ವರಪ್ಪ, ಬಸವರಾಜ್ ಉಚ್ಚಂಗಿದುರ್ಗ, ಬಾದಾಮಿ ಚಂದ್ರಶೇಖರ್, ನಾಗರಾಜ್, ತಿಪ್ಪೇಸ್ವಾಮಿ, ಚಂದ್ರಶೇಖರ್ ನೂಲಾ, ರಮೇಶ್ ಮತ್ತು ಇತರರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

# ನಿಲ್ದಾಣಗಳಿಂದ ಮರೆಯಲ್ಲಿ ಮೈದಾನ



## ಓದುಗರ ಪತ್ರ

ಮಾನ್ಯರೇ,

ಮೂರು ದಶಕಗಳ ಹಿಂದೆ ಇದ್ದ ಹಾಗೇ ದಾವಣಗೆರೆ ನಗರವು ಈಗ ಇಲ್ಲ. ನಗರ ಮಹಾನಗರವಾಗಿ ಬೆಳೆದಿದೆ, ಬೆಳೆಯುತ್ತಿದೆ. ಮುಂದೊಂದು ದಶಕ ಕಳೆದರೆ ಈಗ ಇರುವಂತೆಯೇ ದಾವಣಗೆರೆ ಮಹಾನಗರವು ಇರುವುದಿಲ್ಲ, ಮತ್ತಷ್ಟು ಹಿರಿದಾಗಿ ಬೆಳೆಯುತ್ತದೆ. ಹೀಗಿರುವಾಗ ಆ ಕಾಲದಿಂದ ಈ ಕಾಲಕ್ಕೂ ನಗರದಲ್ಲಿ ಆಟವಾಡಲು ಇರುವ ಮೈದಾನಗಳೆಂದರೆ ಅದು ಕೇವಲ ಜಿಲ್ಲಾ ಕ್ರೀಡಾಂಗಣ ಮತ್ತು ಹೈಸ್ಕೂಲ್ ಮೈದಾನಗಳು ಮಾತ್ರ.

ನಗರ ವಾಸಿಗಳ ಜನಸಂಖ್ಯೆಯು ದಶಕದಿಂದ ದಶಕಕ್ಕೆ ಏರುತ್ತಲೇ ಇದೆ. ಆದರೆ ಸಾರ್ವಜನಿಕರಿಗೆ, ಮಕ್ಕಳಿಗೆ ಆಟವಾಡಲು ಮೈದಾನಗಳು ಎಷ್ಟು ಹೊಸದಾಗಿ ಹೆಚ್ಚಿವೆ? ಎಂಬ ಪ್ರಶ್ನೆಗೆ ಉತ್ತರ ಸಿಗದು! ಉತ್ತರ ಸಿಕ್ಕರೂ ಜೆ.ಹೆಚ್. ಪಟೇಲ್ ನಗರ ಮತ್ತು ಶಿವನಗರದಲ್ಲಿ ಒಟ್ಟು ಹೊಸ ಎರಡು ಮೈದಾನಗಳು ಕಾಣಬಹುದು, ಆದರೆ ಅವುಗಳು ನಗರದ ಹೊರವಲಯದ ಏರಿಯಗಳಲ್ಲಿ ನೆಲೆಯೂರಿವೆ. ತಾಂತ್ರಿಕವಾಗಿ ಮನುಷ್ಯರು ಬಂಧನಕ್ಕೊಳಗಾಗಿ ಆಟೋಪಚಾರವು ಎಲ್ಲಾ ಕೂತ ಕಡೆಯಲ್ಲೇ ನಡೆದು ಹೋಗುತ್ತವೆ ಹೊರತು ದೈಹಿಕವಾಗಿ ಆಟವಾಡದೇ, ಆರಾಮವಾಗಿ ನಡೆಯುವುದನ್ನು ಮರೆಯುತ್ತಿದ್ದಾರೆ. ಇದಕ್ಕೆಲ್ಲಾ ಇರುವ ಕಾರಣಗಳಲ್ಲಿ ಒಂದು ಯಾವುದು ಎಂದರೆ ನಗರದಲ್ಲಿ ಉತ್ತಮ ರೀತಿಯ ಮೈದಾನಗಳು, ವಾಯು ವಿಹಾರಕ್ಕೆ ಸರಿಯಾದ ರೀತಿಯಲ್ಲಿ ಸ್ಥಳಾವಕಾಶ ಇಲ್ಲದೇ ಇರುವುದು.

ನೆಮ್ಮದಿಯ ವಿಚಾರವೇನೆಂದರೆ, ಕೆಲ ವರ್ಷಗಳಿಂದ ಖಾಸಗೀ ಮತ್ತು ಸರ್ಕಾರಿ ಬಸ್ಸು ನಿಲ್ದಾಣ ಕಟ್ಟಡಗಳ ನೂತನ ಕಟ್ಟಡ ನಿರ್ಮಾಣಗೊಂಡು ಈಗಾಗಲೇ ತಾತ್ಕಾಲಿಕ ಸರ್ಕಾರಿ ಬಸ್ಸು ನಿಲ್ದಾಣವು ತನ್ನ ಮೂಲ ಸ್ಥಳಕ್ಕೆ ಸೇರಿಕೊಂಡು ಹೈಸ್ಕೂಲ್ ಮೈದಾನವನ್ನು ಹಳೆಯ ಸ್ವರೂಪಕ್ಕೆ ತರಲು ಸಹಕರಿಸಿದೆ. ಅದರಂತೆಯೇ ತಾತ್ಕಾಲಿಕ ಖಾಸಗೀ ಬಸ್ ನಿಲ್ದಾಣವು ಕೂಡ ತನ್ನ ಮೂಲ ಸ್ಥಳಕ್ಕೆ ಸೇರಿಕೊಂಡು ಹೈಸ್ಕೂಲ್ ಮೈದಾನವನ್ನು ಮೊದಲಿನಂತೆಯೇ ಇರಲು ಸಹಕರಿಸಬೇಕಿದೆ. ವಾಯು ವಿಹಾರಕ್ಕೆ, ಆಟವಾಡಲಿಕ್ಕೆ ಸಾರ್ವಜನಿಕರಿಗೆ ನಿತ್ಯ ಸಿಗುವಂತೆ ಆಗಲಿ. ಮನುಷ್ಯ ಕ್ರೀಡೆ, ಯೋಗ, ವ್ಯಾಯಾಮಗಳಲ್ಲಿ ತೊಡಗಿಸಿಕೊಂಡು ಉತ್ತಮ ಆರೋಗ್ಯ ಪಡೆದುಕೊಳ್ಳಲು ಹೈಸ್ಕೂಲ್ ಮೈದಾನದ ಪಾತ್ರವು ತುಂಬಾ ಮಹತ್ತರವಾದದ್ದಾಗಿದೆ. ಸಾಧ್ಯವಾದರೆ, ಒಂದಿಷ್ಟು ಹೊಸ ಮೈದಾನಗಳು ರೂಪುಗೊಳ್ಳಲಿ, ಅದಕ್ಕಾಗಿ ಸ್ಥಳವನ್ನು ಗುರುತು ಮಾಡಿ ಬೇರೆ ಉದ್ದೇಶಕ್ಕೆ ಹೋಗದ ರೀತಿಯಲ್ಲಿ ದಾವಣಗೆರೆ ಜನತೆಗೆ ದೊರಕಲಿ ಎಂದು ಸಾರ್ವಜನಿಕ ಪರ ವಿನಂತಿ.

**ವೈ. ವಾದಿರಾಜ ಭಟ್**, ವಕೀಲರು, ದಾವಣಗೆರೆ.

# ಪುರಸ್ಕಾರದಿಂದ ಮಕ್ಕಳ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ಕೊಟ್ಟಂತಾಗುತ್ತದೆ



### ಅಶ್ವತ್ಥಪುರ ದೇಶಸ್ಥ ಬ್ರಾಹ್ಮಣ ಸಮಾಜದ ಕಾರ್ಯಕ್ರಮದಲ್ಲಿ ಡಾ.ಪಿ.ಎಸ್.ಸುರೇಶ್ ಬಾಬು

ದಾವಣಗೆರೆ, ಸೆ. 29 - ನಗರದ ಅಶ್ವತ್ಥಪುರ ದೇಶಸ್ಥ ಬ್ರಾಹ್ಮಣ ಸಮಾಜದಿಂದ ಇಂದು ನಡೆದ ಸರ್ವ ಸದಸ್ಯರ ಸಭೆ ಹಾಗೂ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಅಧ್ಯಕ್ಷತೆ ವಹಿಸಿ ಮಾತನಾ ಡಿದ ಡಾ. ಪಿ. ಎಸ್. ಸುರೇಶ್ ಬಾಬು, ಇಂದಿನ ಮಕ್ಕಳಲ್ಲಿ ವಿದ್ಯಾಭ್ಯಾಸದಲ್ಲಿ ಪೈಪೋಟಿ ಇದ್ದು ಮಕ್ಕಳಿಗೆ ಪ್ರೋತ್ಸಾಹ ನೀಡುವುದರಿಂದ ಹೆಚ್ಚಿನ ಅಂಕ ಗಳಿಸಲು ಸಾಧ್ಯವಾಗುತ್ತದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ದ್ವಿತೀಯ ಪಿಯುಸಿಯಲ್ಲಿ ಶೇ. 94.33 ಅಂಕವನ್ನು ಪಡೆದ ಕು. ಶೃತಿ ಬಿ.ಎಸ್, ಅಂತಿಮ ಬಿಎಸ್ಸಿ ಪದವಿಯಲ್ಲಿ ಶೇ.93 ಅಂಕವನ್ನು ಪಡೆದ ಕು. ಅರ್ಪಿತ, ಹಾಗೂ ಎಂಬಿಎ ಪದವಿಯಲ್ಲಿ ಶೆ. 94 ಅಂಕವನ್ನು ಪಡೆದು 6 ರ್‍ಯಾಂಕ್ ಪಡೆದ ಕು. ಸಿರಿಲಕ್ಷ್ಮಿ ಇವರಿಗೆ ಸಂಸ್ಥೆ ವತಿಯಿಂದ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು.

ಸಂಸ್ಥೆಯಿಂದ ಹೊಸ ಯೋಜನೆಗಳನ್ನು ಸಭೆಗೆ ವಿವರಿಸಿದರು. ಶಿಕ್ಷಕರ ದಿನಾಚರಣೆ ಅಂಗವಾಗಿ ವೃತ್ತಿಯಲ್ಲಿ ಶಿಕ್ಷಕರಾಗಿ ನಿವೃತ್ತಿಯನ್ನು ಪಡೆದಂತಹ ನಾಗೇಶ್ ರಾವ್ ಕೇಂಜೆ ಹಾಗೂ ಶ್ರೀಮತಿ ಶುಭ ವಸಂತ ಅವರನ್ನು ಸಂಸ್ಥೆ ವತಿಯಿಂದ ಸನ್ಮಾನಿಸಲಾಯಿತು.

ಭಾರತ ಸರ್ಕಾರದ ಅಧೀನದಲ್ಲಿರುವ ನೌಕಾ ಪಡೆಯಲ್ಲಿ 18 ವರ್ಷಗಳ ಕಾಲ ಸೇವೆ ಸಲ್ಲಿಸಿ, ನಿವೃತ್ತರಾದ ದಿವಾಕರ್ ಕಾಂತಾವರ ಹಾಗೂ ಸಮಾಜದ ಹಿರಿಯ ಕೊಲ್ಲೂರ್ ಜಯಪ್ರಕಾಶ್ ಅವರನ್ನು ಸನ್ಮಾನಿಸಲಾಯಿತು.

ವೇದಿಕೆ ಮೇಲೆ ಕಾರ್ಯದರ್ಶಿ ಸುಬ್ರಹ್ಮಣ್ಯ ಎಲ್.ವಿ, ಖಜಾಂಚಿ ಉತ್ಸವ ವಿ.ಎನ್, ಸಾಂಸ್ಕೃತಿಕ ಮುಖ್ಯಸ್ಥ ಬಿ. ಟಿ ಚಂದ್ರಶೇಖರ್, ಉಪಾಧ್ಯಕ್ಷ ಪಿ .ಎಲ್. ಶಂಕರ್ ರಾವ್ ಉಪಸ್ಥಿತರಿದ್ದರು.

ಹೇಮಾ ಶಂಕರ್ ಪ್ರಾರ್ಥಿಸಿದರು. ಅಚ್ಯುತ ಮೂರ್ತಿ ಕಾಂತಾವರ ಎಲ್ಲರನ್ನು ಸ್ವಾಗತಿಸಿದರು. ವಿಜಯ್ ಕುಮಾರ್ ಕುಂಚಿತಬೆಟ್ಟು ವಂದಿಸಿದರು. ಅನಿಲ್ ಬಾರಂಗೆಳ ಕಾರ್ಯಕ್ರಮ ನಿರೂಪಿಸಿದರು.

## ಇಂದು ಪಟಾಕಿ ವರ್ತಕರಿಗೆ ಕಾರ್ಯಾಗಾರ

ವಿಶಾಲ ಕರ್ನಾಟಕ ಪಟಾಕಿ ವರ್ತಕರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಇಂದು ಬೆಳಿಗ್ಗೆ 10 ಗಂಟೆಗೆ ಎಸ್.ಬಿ.ಸಿ. (ಅಥಣಿ) ಕಾಲೇಜು ಸಭಾಂಗಣದಲ್ಲಿ ಜಿಲ್ಲಾ ಪಟಾಕಿ ವರ್ತಕರಿಗೆ ಅಗ್ನಿಶಾಮಕ ದಳ ಇಲಾಖೆ ವತಿಯಿಂದ ಕಾರ್ಯಾಗಾರ ಏರ್ಪಡಿಸಲಾಗಿದೆ. ದೂಡಾ ಅಧ್ಯಕ್ಷ ದಿನೇಶ್ ಕೆ. ಶೆಟ್ಟಿ ಕಾರ್ಯಕ್ರಮ ಉದ್ಘಾಟಿಸುವರು. ಕಾಲೇಜಿನ ಪ್ರಾಚಾರ್ಯ ಡಾ. ಷಣ್ಮುಖಪ್ಪ, ಗುರು, ಅಗ್ನಿಶಾಮಕ ದಳದ ಅಧಿಕಾರಿ ಅಶೋಕ ಭಾಗವಹಿಸಲಿದ್ದು, ಸಂಘದ ಅಧ್ಯಕ್ಷ ಪಿ.ಸಿ. ಶ್ರೀನಿವಾಸ್ ಅಧ್ಯಕ್ಷತೆ ವಹಿಸಲಿದ್ದಾರೆ.

## ನಗರದಲ್ಲಿಂದು ಪೆರಿಯಾರ್ ಜನ್ಮದಿನೋತ್ಸವ

ಪೆರಿಯಾರ್ ರಾಮಸ್ವಾಮಿ ನಾಯಕರ ವಿಚಾರ ವೇದಿಕೆಯ ಜಿಲ್ಲಾ ಘಟಕದಿಂದ ಪೆರಿಯಾರ್ ರಾಮಸ್ವಾಮಿ ನಾಯಕರ ಜನ್ಮದಿನೋತ್ಸವ ಕಾರ್ಯಕ್ರಮವನ್ನು ಇಂದು ಬೆಳಿಗ್ಗೆ 11 ಗಂಟೆಗೆ ರೋಟರಿ ಬಾಲ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ.

**ಶ್ರೀ ಮಾಚಿದೇವ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ನಿಯಮಿತ**
ನಂ.10. ಪಿ. ಹಾಲೇಶಪ್ಪ ಕಾಂಪ್ಲೆಕ್ಸ್, ಹಳೇ ಅಂಡರ್ ಬ್ರಿಡ್ಜ್ ಹತ್ತಿರ, ದಾವಣಗೆರೆ-577001

**25ನೇ ವಾರ್ಷಿಕ ಮಹಾಸಭೆಯ ಆಹ್ವಾನ ಪತ್ರಿಕೆ**

2023-24ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯನ್ನು ದಿನಾಂಕ 30.09.2024ರ ಸೋಮವಾರ ಮಧ್ಯಾಹ್ನ 12.30ಕ್ಕೆ ಶ್ರೀ ಮಾಚಿದೇವ ಸೊಸೈಟಿಯ ಆವರಣದಲ್ಲಿ ಕರೆಯಲಾಗಿದೆ. ಮಾನ್ಯ ಎಲ್ಲಾ ಸದಸ್ಯರು ಮೇಲ್ಕಂಡ ಸಭೆಗೆ ಆಗಮಿಸಿ ಸಭೆಯನ್ನು ಯಶಸ್ವಿಗೊಳಿಸಬೇಕಾಗಿ ಈ ಮೂಲಕ ಕೋರಲಾಗಿದೆ.

ಸ್ಥಳ : ದಾವಣಗೆರೆ
ದಿನಾಂಕ : 30.09.2024

ಆಡಳಿತ ಮಂಡಳಿಯ ಅಪ್ಪಣೆ ಮೇರೆಗೆ
ಎ.ರಾಮಚಂದ್ರಪ್ಪ (ಹುಲಿಕಟ್ಟೆ), ಅಧ್ಯಕ್ಷರು

# ಹರಿಹರ: ಗಣೇಶನ ಶೋಭಾಯಾತ್ರೆ ಅದ್ಧೂರಿ

ಹರಿಹರ, ಸೆ.29- ನಗರದ ಹಿಂದೂ ಮಹಾ ಗಣಪತಿ ಮೂರ್ತಿಯನ್ನು ವಿಜೃಂಭಣೆಯ ಶೋಭಾ ಯಾತ್ರೆಯೊಂದಿಗೆ ಭಾನುವಾರ ವಿಸರ್ಜಿಸಲಾಯಿತು.

ಬೆಳಿಗ್ಗೆ ಶಾಸಕ ಬಿ.ಪಿ. ಹರೀಶ್ ಮೆರವಣಿಗೆಗೆ ಚಾಲನೆ ನೀಡಿದರು. ಪೇಟೆ ಆಂಜನೇಯ ಸ್ವಾಮಿ ದೇವಸ್ಥಾನ ಮುಂಭಾಗದಿಂದ ಆರಂಭಗೊಂಡ ಮೆರವಣಿಗೆ, ಹಳೆ ಪಿ.ಬಿ ರಸ್ತೆ, ಗಾಂಧಿ ವೃತ್ತ, ಮುಖ್ಯ ರಸ್ತೆ, ರಾಣಿ ಚೆನ್ನಮ್ಮ ವೃತ್ತ, ಶಿವಮೊಗ್ಗ ರಸ್ತೆ ಹಾದು ಪುನಃ ಗಾಂಧಿ ವೃತ್ತದ ಮೂಲಕ ಹಾದು ನಗರಸಭೆ ನಿಗದಿ ಪಡಿಸಿರುವ ಸ್ಥಳದತ್ತ ಆಗಮಿಸಿದಾಗ ಮೂರ್ತಿ ವಿಸರ್ಜಿಸಲಾಯಿತು.

ಮೆರವಣಿಗೆ ರಾಣಿ ಚೆನ್ನಮ್ಮ ವೃತ್ತಕ್ಕೆ ಆಗಮಿಸುತ್ತಿದ್ದಂತೆ ಶಾಸಕ ಬಸವನಗೌಡ ಪಾಟೀಲ್ ಯತ್ನಾಳ, ಮಾಜಿ ಸಂಸದ ಮೈಸೂರಿನ ಪ್ರತಾಪ್ ಸಿಂಹ, ಜಿ.ಎಂ. ಸಿದ್ದೇಶ್ವರ, ಶಾಸಕ ಬಿ.ಪಿ. ಹರೀಶ್, ಮಾಜಿ ಶಾಸಕ ಹೆಚ್. ಎಸ್. ಶಿವಶಂಕರ್, ಮಾಜಿ ಜಿ.ಪಂ ಅಧ್ಯಕ್ಷ ಎಸ್.ಎಂ. ವೀರೇಶ್ ಹನಗವಾಡಿ, ಗಾಯತ್ರಿ ಸಿದ್ದೇಶ್ವರ, ಪೂಜಾರ್ ಚಂದ್ರಶೇಖರ್ ಆಗಮಿಸಿದಾಗ ಮೆರವಣಿಗೆಯಲ್ಲಿದ್ದ ಯುವಜನತೆಯ ಉತ್ಸಾಹ ಮತ್ತಷ್ಟು ಹೆಚ್ಚಾಯಿತು. ಮೆರವಣಿಗೆಯಲ್ಲಿ ವಿವಿಧ ಕಲಾ ಮೇಳಗಳಿದ್ದವು. ಪುರುಷರು ಹಾಗೂ ಮಹಿಳೆಯರಿಗೆ ಪ್ರತ್ಯೇಕ ಡಿಜೆ ವ್ಯವಸ್ಥೆ ಮಾಡಲಾಗಿತ್ತು.

ವಿವಿಧ ಸಂಘ-ಸಂಸ್ಥೆಗಳು ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದವರಿಗೆ ಉಪಹಾರ, ಊಟ, ಪಾನಕ, ನೀರಿನ ಬಾಟೆಲ್ ವ್ಯವಸ್ಥೆ ಮಾಡಿದ್ದರು. ಸ್ವಾತಂತ್ರ್ಯ ಹೋರಾಟಗಾರರು, ಸಂತರ ಸ್ತಬ್ಧ ಚಿತ್ರಗಳು ಗಮನ ಸೆಳೆದವು.

ಡಾ ಬಾಬಾ ಸಾಹೇಬ್ ಅಂಬೇಡ್ಕರ್, ಪುನೀತ್ ರಾಜ್‌ಕುಮಾರ್, ಫೋಟೋ ಮತ್ತು ದರ್ಶನ ಫೋಟೋ ಗಳಿಗೆ ಯುವಕರು ಹಾಲಿನಿಂದ ಅಭಿಷೇಕ ಮಾಡಿದರು. ಬೆಳಗ್ಗೆ ಯಿಂದ ಸಂಜೆಯವರೆಗೆ ಎಲ್ಲಾ ಅಂಗಡಿ ಮುಂಗ್ಗಟ್ಟುಗಳನ್ನು ಬಂದ್ ಮಾಡಲಾಗಿತ್ತು.

ಎಸ್ಪಿ ಉಮಾ ಪ್ರಶಾಂತ್, ಅಡಿಷನಲ್ ಎಸ್ಪಿ ಜಿ. ಮಂಜುನಾಥ್, ಡಿವೈಎಸ್ಪಿ ಜಿ.ಎಸ್. ಬಸವರಾಜ್, ಸಿ.ಪಿ.ಐ ಗಳಾದ ಸುರೇಶ್ ಸಗರಿ, ದೇವಾನಂದ್, ಲಕ್ಷ್ಮಣ್ ನಾಯ್ಕ್, ಪಿಎಸ್ಐ ಶ್ರೀಪತಿ, ಗನ್ನಿ, ಮಂಜುನಾಥ್ ಕುಪ್ಪೇಲೂರು, ಸೋಮಶೇಖರ್ ರಡ್ಡಿ, ವಿಜಯಕುಮಾರ್ ಇತರರು ಯಾವುದೇ ಅವಘಡ ನಡೆಯದಂತೆ ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡಿದ್ದರು.

ಈ ಸಂದರ್ಭದಲ್ಲಿ ಮಾಜಿ ಸಚಿವ ಎಂ. ಪಿ. ರೇಣುಕಾಚಾರ್ಯ, ಕಾಂಗ್ರೆಸ್ ಮುಖಂಡ ನಂದಿಗಾವಿ ಶ್ರೀನಿವಾಸ್, ಅರ್ಜುನ ಬಿ.ಪಿ. ಹರೀಶ್, ಹಿಂದೂ ಮಹಾಗಣಪತಿ ಸೇವಾ ಟ್ರಸ್ಟ್ ಅಧ್ಯಕ್ಷ ಬಸವನಗೌಡ, ಹಿಂದೂ ಜಾಗರಣಾ ವೇದಿಕೆಯ ದಿನೇಶ್, ಚಂದನ್ ಮೂರ್ಕಲ್, ಧರಣೇಂದ್ರ, ಹೆಚ್. ಎಸ್. ರಾಘವೇಂದ್ರ, ಶಿವಪ್ರಕಾಶ್ ಶಾಸ್ತ್ರಿ, ಮಹೇಶ್, ಶಿವಕುಮಾರ್, ರಟ್ಟಿಹಳ್ಳಿ ಮಂಜುನಾಥ್, ಸ್ವಾತಿ ಹನುಮಂತ್, ಹೆಚ್.ಸಿ . ಕೀರ್ತಿ ಕುಮಾರ್, ವಡ್ನಾಳ ಪ್ರಕಾಶ್, ಕಸಬಾ ಗೌಡ್ರು ಲಿಂಗರಾಜ್ ಪಾಟೀಲ್, ಉದ್ಯಮಿ ಅರುಣ್ ಕುಮಾರ್ ಮಿಠಾಯಿ, ನವರತ್ನ ಶಶಿಕಾಂತ್, ಡಾ ವಿ.ಟಿ. ನಾಗರಾಜ್, ಟಿ.ಜೆ. ಮುರುಗೇಶಪ್ಪ, ನಗರಸಭೆ ಸದಸ್ಯರಾದ ಹನುಮಂತಪ್ಪ, ಎ.ಬಿ. ವಿಜಯಕುಮಾರ್, ಶಂಕರ್ ಖಟಾವ್ಕರ್, ಬಿಜೆಪಿ ಅಜಿತ್ ಸಾವಂತ್, ಜೆಡಿಸ್ ಅಡಕಿ ಕುಮಾರ್, ಎಂ ಚಿದಾನಂದ ಕಂಚಿಕೇರಿ ಮತ್ತು ಇತರರು ಹಾಜರಿದ್ದರು.

ಬೆಳಕೇರಿ ನಾಗಣ್ಣ, ಬೇಳಕೇರಿ ಚಂದ್ರಪ್ಪ, ಶೇರಾಪುರ ರಾಜಪ್ಪ, ಎಂ. ಅರ್. ತಿಪ್ಪೇಸ್ವಾಮಿ, ಮೂಲಿಮನೆ, ರಮೇಶ್, ಮೂಲಿಮನಿ ಕಿರಣ್, ಮುದೇಗೌಡ್ರು ಪ್ರಭು, ಮುದ್ದಪರ, ವಿಜಯ ಕುಮಾರ್, ಬಾಬು ದೋಸೆ ವ್ಯವಸ್ಥೆ ಮಾಡಲಾಗಿತ್ತು.



ಹಿಂದೂ ಮಹಾಗಣಪತಿಯನ್ನು ವಾಟರ್ ವರ್ಕ್ ಹತ್ತಿರದ ನೀರು ಶೇಖರಣಾ ಹೊಂಡದಲ್ಲಿ ವಿಶೇಷ ಪೂಜೆ, ಮಹಾಮಂಗಳಾರತಿ ಮಾಡಿ ವಿಸರ್ಜನೆ ಮಾಡಲಾಯಿತು.





# ಅಂಧರಿಗೆ ಬೆಳಕಾಗಿದ್ದ ಹಾನಗಲ್ ಕುಮಾರ ಶ್ರೀ

**ಹಾನಗಲ್ ಲಿಂ. ಶ್ರೀ ಕುಮಾರ ಶಿವಯೋಗಿಗಳ 157 ನೇ ಜಯಂತ್ಯುತ್ಸವದಲ್ಲಿ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ**

ದಾವಣಗೆರೆ, ಸೆ. 29- ಶಿವಯೋಗ ಮಂದಿರ ಮತ್ತು ಅಖಿಲ ಭಾರತ ವೀರಶೈವ ಮಹಾಸಭಾ ಸ್ಥಾಪನೆ ಹಾನಗಲ್ ಕುಮಾರ ಮಹಾಶಿವಯೋಗಿಗಳ ದೂರದೃಷ್ಟಿಗೆ ಸಾಕ್ಷಿಯಾಗಿದ್ದು, ಅಂಧರ ಪಾಲಿಗೆ ಬೆಳಕಾಗಿದ್ದರು ಎಂದು ಆವರಗೊಳ್ಳ ಪುರವರ್ಗ ಮಠದ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ನಗರದ ಬಾಡಾ ಕ್ರಾಸ್ ಬಳಿ ಇರುವ ಶ್ರೀ ವೀರೇಶ್ವರ ಪುಣ್ಯಾಶ್ರಮದಲ್ಲಿ ಅಖಿಲ ಕರ್ನಾಟಕ ಶ್ರೀ ಗುರು ಕುಮಾರೇಶ್ವರ ಅಂಧ ಸಂಗೀತ ಕಲಾವಿದರ ಸಂಘದ ವತಿಯಿಂದ ಹಮ್ಮಿಕೊಂಡಿದ್ದ ಹಾನಗಲ್ ಲಿಂ. ಶ್ರೀ ಕುಮಾರ ಮಹಾ ಶಿವಯೋಗಿಗಳ 157 ನೇ ಜಯಂತ್ಯುತ್ಸವ, ತುಲಾಭಾರ, ಸ್ವಾಮಿ ಸುಕುಮಾರ ಸಮ್ಮಾನ್ ಪ್ರಶಸ್ತಿ ಪ್ರದಾನ ಸಮಾರಂಭದ ಸಾನ್ನಿಧ್ಯ ವಹಿಸಿ ಮಾತನಾಡಿದರು.

ಹಾನಗಲ್ ಕುಮಾರಸ್ವಾಮಿಗಳು ಅರಮನೆಯ ಸಂಗೀತವನ್ನು ಗುರುಮನೆಗೆ ತಂದು ಅಂಧರ ಬಾಳು ಬೆಳಗಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಅಂಧ ವಿದ್ಯಾರ್ಥಿಗಳಿಗೆ ಸಂಗೀತದ ಬೆಳಕು ತೋರಿದವರು ಪಂಚಾಕ್ಷರಿ ಗವಾಯಿ ಹಾಗೂ ಪಂಡಿತ್ ಪುಟ್ಟರಾಜ್ ಕವಿ ಗವಾಯಿಗಳು. ಆದರೆ ಸಂಗೀತದ ಬೀಜ ಬಿತ್ತಿದವರು ಹಾನಗಲ್ ಕುಮಾರಸ್ವಾಮಿಗಳು ಎಂದರು.

ಇಡೀ ಜೀವನವನ್ನೇ ಸಮಾಜಕ್ಕಾಗಿ ಸಮರ್ಪಿಸಿಕೊಂಡವರು ಹಾನಗಲ್ ಶ್ರೀಗಳು. ಅವರು ಸ್ಥಾಪಿಸಿದ ಶಿವಯೋಗ ಮಂದಿರದಿಂದ ಗುರು-ವಿರಕ್ತರ ಸಮನ್ವಯತೆ ಸಾಧ್ಯವಾಯಿತು. ಇಂದಿಗೂ ಸಹ ಅಲ್ಲಿ ನೂರಾರು ಸಾಧಕ ವಟುಗಳು ವೇದ, ಆಗಮ, ಸಂಸ್ಕೃತ, ವಚನ ಸಾಹಿತ್ಯದ ಅಧ್ಯಯನ ಮಾಡುತ್ತಿದ್ದು, ಸ್ವಾಮೀಜಿಗಳನ್ನು ತಯಾರು ಮಾಡುವ ಪ್ರಮುಖ ಕೇಂದ್ರವಾಗಿದೆ ಎಂದು ಹೇಳಿದರು.

ಹಾನಗಲ್ ಕುಮಾರ ಮಹಾಶಿವಯೋಗಿಗಳು ಇಲ್ಲದಿದ್ದರೆ ನಾಡಿನ ಸಾವಿರಾರು ಮಠಗಳು ಅಸ್ತಿತ್ವ ಕಳೆದುಕೊಳ್ಳುತ್ತಿದ್ದವು. ವೀರಶೈವ ಸಮಾಜ ಸಂಘಟನೆಗೆ ಹಿನ್ನಡೆ ಉಂಟಾಗುತ್ತಿತ್ತು ಎಂದು ತಿಳಿಸಿದರು.

ದಾವಣಗೆರೆ, ಗದಗ, ಶಿವಮೊಗ್ಗದಲ್ಲಿರುವ ಶ್ರೀ ವೀರೇಶ್ವರ ಪುಣ್ಯಾಶ್ರಮದಲ್ಲಿ ಸಂಗೀತ ಪಾಠ ಕಲಿತ ಅನೇಕರು ಉತ್ತಮ ಕಲಾವಿದರಾಗಿ, ಸಂಗೀತ ಶಿಕ್ಷಕರಾಗಿ ಹೊರ ಹೊಮ್ಮುವ ಮೂಲಕ ಆಶ್ರಮದ ಕೀರ್ತಿಯನ್ನು ಬೆಳಗಿದ್ದಾರೆ ಎಂದು ಹೇಳಿದರು.

ವೀರೇಶ್ವರ ಪುಣ್ಯಾಶ್ರಮದ ಅಧ್ಯಕ್ಷರಾದ ಡಾ. ಅಥಣಿ ಎಸ್. ವೀರಣ್ಣ ಅಧ್ಯಕ್ಷತೆ ವಹಿಸಿ ಮಾತನಾಡಿ, ಡಾ. ಶಾಮನೂರು ಶಿವಶಂಕರಪ್ಪ, ಎನ್.ಎಂ. ಕಡೇಕೊಪ್ಪ, ಎ.ಸಿ. ಜಯಣ್ಣ ಮೊದಲ್ಗೊಂಡು ಅನೇಕ ದಾನಿಗಳ ಸಹಕಾರದಿಂದ ಇಂದು ವೀರೇಶ್ವರ ಪುಣ್ಯಾಶ್ರಮ ಸಾಕಷ್ಟು ಅಭಿವೃದ್ಧಿ ಕಂಡಿದೆ. ತುಲಾಭಾರದ ಮೂಲಕ ದಾನ ಮಾಡುವ ಮೂಲಕ ಶಿಲಾ ಮಂಟಪ ನಿರ್ಮಾಣಕ್ಕೆ ಕಾರಣೀಭೂತರಾಗಿದ್ದು, ಅವರ ಹೆಸರುಗಳನ್ನು ಆಶ್ರಮದಲ್ಲಿ ಹಾಕಿಸಲು ಕ್ರಮ ಕೈಗೊಳ್ಳಲಾಗುವುದು ಎಂದರು.

ಪಂಡಿತ್ ಪುಟ್ಟರಾಜ ಕವಿ ಗವಾಯಿಗಳ ಪ್ರತಿಮೆ ಸ್ಥಾಪಿಸುವ ಕಾರ್ಯ ಪ್ರಗತಿಯಲ್ಲಿದ್ದು, ಈ ವರ್ಷ 365 ದಿನಗಳ ಕಾಲ ನಿರಂತರವಾಗಿ ದಾಸೋಹ ನಡೆಸಲು ನಿತ್ಯ ದಾಸೋಹಿಗಳನ್ನು ನೋಡುತ್ತಿದ್ದೇವೆ. ಈಗಾಗಲೇ ಸಾಕಷ್ಟು ದಾನಿಗಳು ಮುಂದೆ ಬಂದಿದ್ದಾರೆಂದರು.

ಪ್ರಸ್ತುತ 50 ಮಕ್ಕಳು ಸಂಗೀತಾಭ್ಯಾಸ ಮಾಡುತ್ತಿದ್ದು, ಇನ್ನೂ 50 ಮಕ್ಕಳಿಗೆ ಅವಕಾಶ ಕಲ್ಪಿಸಲಾಗುವುದು. ಅವರಿಗೆ ಎಲ್ಲಾ ರೀತಿಯ ಮೂಲ ಸೌಕರ್ಯಗಳನ್ನು ನೀಡುವ ಗುರಿ ಹೊಂದಲಾಗಿದೆ ಎಂದು ಹೇಳಿದರು.

ಬೆಂಗಳೂರಿನ ವಕೀಲರಾಗಿದ್ದ ಅಕ್ಕಮಹಾದೇವಿಯವರು ತಮ್ಮ ಆಸ್ತಿಯ ಶೇ. 60 ರಷ್ಟನ್ನು ಆಶ್ರಮದ ಅಭಿವೃದ್ಧಿಗೆ ದೇಣಿಗೆಯಾಗಿ ನೀಡಲು ವಿಲ್ ಬರೆದಿದ್ದಾರೆ. ಕೆಲವು ಕಾನೂನು ತೊಡಕುಗಳ ಹಿನ್ನೆಲೆಯಲ್ಲಿ ವಿಳಂಬವಾಗಿದೆ. ಇದಲ್ಲದೇ 25 ಲಕ್ಷ ರೂ.ಗಳನ್ನೂ ಸಹ ಅವರು ನೀಡಿದ್ದಾರೆಂದು ಮಾಹಿತಿ ನೀಡಿದರು.

ಇದೇ ವೇಳೆ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರೂ, ಶಿವಮೊಗ್ಗ ಶ್ರೀ ವೀರೇಶ್ವರ ಪುಣ್ಯಾಶ್ರಮದ ಸಂಸ್ಥಾಪಕ ಅಧ್ಯಕ್ಷರೂ ಆದ ಆರ್. ವಿ. ಸಂಗಮೇಶ್ವರ ಗವಾಯಿಗಳಿಗೆ 'ಸ್ವಾಮಿ ಸುಕುಮಾರ ಸಮ್ಮಾನ್' ಪ್ರಶಸ್ತಿ ಪ್ರದಾನ ಮಾಡಲಾಯಿತು.

ಬೃಹನ್ಮಠ ಅಡ್ನೂರ, ರಾಜೂರ, ಗದಗದ ಶ್ರೀ ಅಭಿನವ ಪಂಚಾಕ್ಷರ ಶಿವಾಚಾರ್ಯ ಸ್ವಾಮೀಜಿ, ಗದಗ - ದಾವಣಗೆರೆ - ಶಿವಮೊಗ್ಗ ಶ್ರೀ ವೀರೇಶ್ವರ ಪುಣ್ಯಾಶ್ರಮದ ಪೀಠಾಧಿಪತಿ ಡಾ. ಕಲ್ಲಯ್ಯಜ್ಜನವರು ಸಾನ್ನಿಧ್ಯ ವಹಿಸಿದ್ದರು.

ಅಖಿಲ ಕರ್ನಾಟಕ ಶ್ರೀ ಗುಗು ಕುಮಾರೇಶ್ವರ ಅಂಧ ಸಂಗೀತ ಕಲಾವಿದರ ಸಂಘದ ಅಧ್ಯಕ್ಷ ರಾಜಕುಮಾರ್ ಮುಲಗೆ, ಕಾರ್ಯದರ್ಶಿ ಸಂತೋಷ್ ಬಾಣಿ, ವೀರೇಶ್ವರ ಪುಣ್ಯಾಶ್ರಮದ ಉಪಾಧ್ಯಕ್ಷ ಎ.ಎಸ್. ಮೃತ್ಯುಂಜಯ, ನಿರ್ದೇಶಕ ಎ.ಹೆಚ್. ಸಿದ್ಧಲಿಂಗ ಸ್ವಾಮಿ, ವಾಣಿ ನಾಗಭೂಷಣ್ ಮತ್ತಿತರರು ಭಾಗವಹಿಸಿದ್ದರು.

ಜಯಲಕ್ಷ್ಮಿ ಹೆಗಡೆ ಮತ್ತು ಕುಟುಂಬದವರು ತುಲಾಭಾರ ನೆರವೇರಿಸಿದರು. ಶಿವಮೊಗ್ಗ ವೀರೇಶ್ವರ ಪುಣ್ಯಾಶ್ರಮದ ಅಂಧ ವಿದ್ಯಾರ್ಥಿಗಳು ಸಂಗೀತ ಕಾರ್ಯಕ್ರಮ ನಡೆಸಿಕೊಟ್ಟರು.

ಸರೋಜಮ್ಮ ನಿಜಲಿಂಗಪ್ಪ ಕಡೇಕೊಪ್ಪ, ವಾಣಿ ವಿಲಾಸ, ಜಿ.ಇ. ನಾಗರತ್ನಮ್ಮ ಚನ್ನವೀರಪ್ಪ, ಶಿಲ್ಪ ಮೃತ್ಯುಂಜಯ ಕಂಚಿಕೆರೆ, ಎಂ.ಬಸವರಾಜ್, ಬಸವನಗೌಡ ಮತ್ತಿತರರನ್ನು ಗೌರವಿಸಲಾಯಿತು.

ವೀರೇಶ್ವರ ಪುಣ್ಯಾಶ್ರಮದ ಅಂಧ ಮಕ್ಕಳು ಪ್ರಾರ್ಥಿಸಿದರು. ಶಿವಬಸಯ್ಯ ಚರಂತಿಮಠ ಸ್ವಾಗತಿಸಿದರು. ರಘುನಂದ ಶಾಸ್ತ್ರಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಬಂಡಯ್ಯ ಶಾಸ್ತ್ರಿ ನಿರೂಪಿಸಿದರು.

# ಸಕಾರಾತ್ಮಕ ಧೋರಣೆಯಲ್ಲೂ ಜನಾಕರ್ಷಣೆ : ಮೋದಿ

ನವದೆಹಲಿ, ಸೆ. 29 - ಕೇವಲ ಮಸಾಲೆ ಇಲ್ಲವೇ ನಕಾರಾತ್ಮಕ ವಿಷಯಗಳಿಗಷ್ಟೇ ಆಕರ್ಷಣೆ ಇದೆ ಎಂಬ ನಂಬಿಕೆಯನ್ನು ಮನ್ ಕಿ ಬಾತ್ ಹುಸಿ ಮಾಡಿದೆ. ಜನರು ಸಕಾರಾತ್ಮಕ ಹಾಗೂ ಸ್ಫೂರ್ತಿದಾಯಕ ಉದಾಹರಣೆಗಳನ್ನೂ ಇಷ್ಟಪಡುತ್ತಾರೆ ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಹೇಳಿದ್ದಾರೆ.

ಮಾಸಿಕ ಮನ್ ಕಿ ಬಾತ್ ರೇಡಿಯೋ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಈ ಕಾರ್ಯಕ್ರಮಕ್ಕೆ ಹತ್ತು ವರ್ಷ ತುಂಬಿರುವುದು ಭಾವನಾತ್ಮಕ ಕ್ಷಣ. ಭಾರತದ ಚೈತನ್ಯವನ್ನು ಸಂಭ್ರಮಿಸಲು ಇದು ವಿಶಿಷ್ಟ ವೇದಿಕೆಯಾಗಿದೆ ಎಂದರು.

ಈ ಕಾರ್ಯಕ್ರಮದ ವೇಳೆ ನನಗೆ ಹಲವಾರು ಹಳೆಯ ನೆನಪಾಗುತ್ತಿವೆ. ಹತ್ತು ವರ್ಷಗಳ ಹಿಂದೆ ಅಕ್ಟೋಬರ್ 3ರ ವಿಜಯದಶಮಿ ದಿನದಂದು ಮನ್ ಕಿ ಬಾತ್ ಕಾರ್ಯಕ್ರಮ ಆರಂಭಿಸಲಾಗಿತ್ತು ಎಂದು ಮೋದಿ ಹೇಳಿದರು.

ಕಾಕತಾಳೀಯ ಎಂಬಂತೆ ಹತ್ತು ವರ್ಷಗಳ



**ಮನ್ ಕಿ ಬಾತ್‌ಗೆ ಹತ್ತು ವರ್ಷ**

ಮನ್ ಕಿ ಬಾತ್ ಪೂರ್ಣಗೊಳ್ಳುವ ದಿನವಾದ ಅಕ್ಟೋಬರ್ 3, ನವರಾತ್ರಿಯ ಆರಂಭವಾಗಿದೆ. ಇದನ್ನು ಎಂದೂ ಮರೆಯಲಾಗದು ಎಂದಿದ್ದಾರೆ.

ಕೋಟ್ಯಂತರ ಶ್ರೋತೃಗಳು ಈ ಯಾನದಲ್ಲಿ ನನಗೆ ಜೊತೆಯಾಗಿದ್ದಾರೆ. ದೇಶದ ಮೂಲೆ ಮೂಲೆಗಳಿಂದ ಜನರು ನನಗೆ ಮಾಹಿತಿ ನೀಡುತ್ತಿದ್ದಾರೆ ಎಂದರು.

ಯಾವುದೇ ಮಸಾಲೆ ಇಲ್ಲವೇ ನಕಾರಾತ್ಮಕ ಅಂಶ ಇಲ್ಲದಿದ್ದರೆ ಜನರ ಗಮನ ಸೆಳೆಯಲು ಸಾಧ್ಯವಾಗದು ಎಂಬ ಭಾವನೆ ಸಾಮಾನ್ಯವಾಗಿದೆ. ಆದರೆ, ಸಕಾರಾತ್ಮಕ, ಸ್ಫೂರ್ತಿದಾಯಕ ಉದಾಹರಣೆ ಹಾಗೂ ಉತ್ತೇಜನಕಾರಿ ಕಥೆಗಳಿಂದಲೂ ಜನರ ಗಮನ ಸೆಳೆಯಲು ಸಾಧ್ಯ ಎಂದು ಮನ್ ಕಿ ಬಾತ್ ಕಾರ್ಯಕ್ರಮ ತೋರಿಸಿದೆ ಎಂದು ಮೋದಿ ಹೇಳಿದರು.

ಮನ್ ಕಿ ಬಾತ್ ಇಡೀ ಪ್ರಕ್ರಿಯೆ ನನ್ನ ಪಾಲಿಗೆ ದೇವಾಲಯಕ್ಕೆ ಹೋಗಿ ದೇವರ ದರ್ಶನ ಪಡೆದ ಭಾವನೆ ತಂದಿದೆ. ಪ್ರತಿಯೊಂದು ಸಂಪರ್ಕವೂ ನನಗೆ ಜನತಾ ಜನಾರ್ದನನ ದರ್ಶನದಂತಿದೆ ಎಂದು ಪ್ರಧಾನಿ ತಿಳಿಸಿದರು.

ಈ ಮೈಲಿಗಲ್ಲು ತಲುಪಲು ದೂರದರ್ಶನ, ಪ್ರಸಾರ ಭಾರತಿ ಹಾಗೂ ಆಲ್ ಇಂಡಿಯಾ ರೇಡಿಯೋ ಸಿಬ್ಬಂದಿ ಸಹಕರಿಸಿದ್ದನ್ನು ಸ್ಮರಿಸುತ್ತೇನೆ. ಅವರ ಅವಿರತ ಶ್ರಮದಿಂದ ಮನ್ ಕಿ ಬಾತ್ ಈ ಘಟ್ಟ ತಲುಪಲು ಸಾಧ್ಯವಾಗಿದೆ ಎಂದು ಮೋದಿ ಹೇಳಿದರು.

# ನಗರದಲ್ಲಿ ಇಂದು ಜಯದೇವ ಜಗದ್ಗುರುಗಳ ಸ್ಮರಣೋತ್ಸವ, ರಥೋತ್ಸವ



ಶ್ರೀ ಮುರುಘರಾಜೇಂದ್ರ ವಿರಕ್ತಮಠ, ಶ್ರೀ ಜಗದ್ಗುರು ಮುರುಘರಾಜೇಂದ್ರ ಶಿವಯೋಗಾಶ್ರಮ ಟ್ರಸ್ಟ್ ಸಹಯೋಗದಲ್ಲಿ ಇಂದು ಬೆಳಿಗ್ಗೆ 11 ಗಂಟೆಗೆ ಶ್ರೀ ಶಿವಯೋಗಾಶ್ರಮದ ಆವರಣದಲ್ಲಿ ಲಿಂ. ಶ್ರೀ ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳವರ 68 ನೇ ಸ್ಮರಣೋತ್ಸವ, ರಥೋತ್ಸವ ಹಾಗೂ ವಚನ ಗ್ರಂಥ ಮೆರವಣಿಗೆ ಏರ್ಪಡಿಸಲಾಗಿದೆ. ಶ್ರೀ ಬಸವ ಪ್ರಭು ಸ್ವಾಮೀಜಿ ಅಧ್ಯಕ್ಷತೆ ವಹಿಸುವರು. ಚನ್ನಗಿರಿ ಮಹಾಂತೇಶ್ ಶಾಸ್ತ್ರಿಗಳಿಂದ 'ಶ್ರೀ ಜಯದೇವ ಲೀಲೆ' ಪ್ರವಚನ, ಮಧ್ಯಾಹ್ನ 1 ಗಂಟೆಗೆ ಮಹಾ ದಾಸೋಹ, ಸಂಜೆ 5 ಗಂಟೆಗೆ 68 ನೇ ವರ್ಷದ ರಥೋತ್ಸವ, ವಚನಗ್ರಂಥ ಮೆರವಣಿಗೆ, ಸಂಜೆ 6 ಗಂಟೆಗೆ ವಚನ ಸಂಗೀತೋತ್ಸವ ಹಮ್ಮಿಕೊಳ್ಳಲಾಗಿದೆ.

# ಕರ್ನಾಟಕದಲ್ಲಿ ಗ್ಯಾರಂಟಿಗಳು ವಿಫಲ : ಅಮಿತ್ ಷಾ

ಚಂಡೀಘಡ, ಸೆ. 29 - ಕಾಂಗ್ರೆಸ್ ಆಡಳಿತಕ್ಕೆ ಬಂದಿರುವ ಕರ್ನಾಟಕ ಹಾಗೂ ಹಿಮಾಚಲ ಪ್ರದೇಶಗಳಲ್ಲಿ ಆ ಪಕ್ಷದ ಗ್ಯಾರಂಟಿಗಳು ವಿಫಲವಾಗಿವೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಷಾ ಹೇಳಿದ್ದಾರೆ. ಗುರು ಗ್ರಾಮದ ಬಾದ್‌ಷಾಪುರದಲ್ಲಿ ಆಯೋಜಿಸಲಾಗಿದ್ದ ಚುನಾವಣಾ ಸಮಾವೇಶದಲ್ಲಿ ಮಾತನಾಡಿದ ಅಮಿತ್ ಷಾ, ಚುನಾವಣಾ ಸಮಯದಲ್ಲಿ ಕಾಂಗ್ರೆಸ್ ದೊಡ್ಡ ಭರವಸೆ ನೀಡುತ್ತದೆ. ಆದರೆ, ಚುನಾವಣೆ ನಂತರ ರಾಹುಲ್ ಗಾಂಧಿ ಗ್ಯಾರಂಟಿಗಳು ವಿಫಲವಾಗುತ್ತವೆ ಎಂದಿದ್ದಾರೆ. ಮತ್ತೊಂದೆಡೆ ಬಿಜೆಪಿ ಈಡೇರಿಸಲು ಸಾಧ್ಯವಾಗದ ಯಾವುದೇ ಭರವಸೆ ನೀಡುವುದಿಲ್ಲ ಎಂದು ಅಮಿತ್ ಷಾ ಹೇಳಿದರು.

# ಏಕಕಾಲಕ್ಕೆ ಚುನಾವಣೆ : ಮೂರು ಮಸೂದೆಗಳಿಗೆ ಕೇಂದ್ರ ಪರಿಶೀಲನೆ

ನವದೆಹಲಿ, ಸೆ. 29 - ಏಕಕಾಲಕ್ಕೆ ಚುನಾವಣೆ ನಡೆಸುವುದಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ ಮೂರು ಮಸೂದೆಗಳನ್ನು ರೂಪಿಸಲು ಪರಿಶೀಲಿಸುತ್ತಿದೆ. ಇವುಗಳಲ್ಲಿ ಎರಡು ಸಂವಿಧಾನ ತಿದ್ದುಪಡಿ ಮಸೂದೆಗಳಾಗಿವೆ.

ಸ್ಥಳೀಯ ಸಂಸ್ಥೆ ಚುನಾವಣೆಗಳನ್ನು ಲೋಕಸಭೆ ಹಾಗೂ ವಿಧಾನಸಭಾ ಚುನಾವಣೆಗಳ ಜೊತೆ ನಡೆಸಲು ಸಂವಿಧಾನಕ್ಕೆ ತಿದ್ದುಪಡಿ ಮಾಡಲು ಮಸೂದೆಗೆ ಪ್ರಸ್ತಾಪಿಸಲಾಗಿದೆ. ಈ ಮಸೂದೆಗೆ ಶೇ.50ರಷ್ಟು ರಾಜ್ಯಗಳ ಅನುಮೋದನೆಯ ಅಗತ್ಯವಿದೆ.

ಒಂದು ದೇಶ - ಒಂದು ಚುನಾವಣೆ ದಿಸೆಯಲ್ಲಿ ಕೇಂದ್ರ ಸರ್ಕಾರ ಹೆಜ್ಜೆ ಇಡುತ್ತಿದೆ. ಏಕಕಾಲಕ್ಕೆ ಚುನಾವಣೆ ನಡೆಸುವ ಕುರಿತು ಉನ್ನತ ಹಂತದ ಸಮಿತಿ ಮಾಡಿರುವ ಶಿಫಾರಸ್ಸನ್ನು ಕೇಂದ್ರ ಸರ್ಕಾರ ಈಗಾಗಲೇ ಅಂಗೀಕರಿಸಿದೆ.

ಉನ್ನತ ಹಂತದ ಸಮಿತಿಯ ಶಿಫಾರಸ್ಸಿನಂತೆ ಸಂವಿಧಾನದ 82ಎ ವಿಧಿಗೆ ಬದಲಾವಣೆ ತರಲಾಗುವುದು. ಲೋಕಸಭೆ ಹಾಗೂ ವಿಧಾನಸಭೆಗಳೆರಡರ ಅವಧಿಯನ್ನು ಏಕಕಾಲಕ್ಕೆ ಅಂತ್ಯಗೊಳಿಸಲು ಈ ಕ್ರಮ ತೆಗೆದುಕೊಳ್ಳಲಾಗುವುದು.

ಸಂವಿಧಾನದ 83 (2) ವಿಧಿಯಲ್ಲಿ ಬದಲಾವಣೆ ತರುವ ಮೂಲಕ ಲೋಕಸಭೆಯ ಅವಧಿ ಹಾಗೂ ವಿಸರ್ಜನೆಗೆ ಬದಲಾವಣೆ ತರಲಾಗುವುದು. 327ನೇ ವಿಧಿಗೆ ತಿದ್ದುಪಡಿ ತಂದು, ಏಕಕಾಲಕ್ಕೆ ಚುನಾವಣೆ ಎಂಬ ಅಂಶ ಸೇರಿಸಲಾಗುವುದು.

ಆದರೆ, ಈ ಮಸೂದೆಗೆ ಶೇ.50ರಷ್ಟು ರಾಜ್ಯಗಳ ಅನುಮೋದನೆಯ ಅಗತ್ಯವಿಲ್ಲ ಎಂದು ಸಮಿತಿಯ ಶಿಫಾರಸ್ಸಿನಲ್ಲಿ ತಿಳಿಸಲಾಗಿದೆ.

ಇದೇ ವೇಳೆ, ರಾಜ್ಯ ಚುನಾವಣಾ ಆಯೋಗದ ಜೊತೆ ಸಮಾಲೋಚನೆ ನಡೆಸಿ ಚುನಾವಣಾ ಆಯೋಗವು ಮತದಾರರ ಪಟ್ಟಿ ರೂಪಿಸುವ ಕುರಿತೂ ಸಂವಿಧಾನಕ್ಕೆ ತಿದ್ದುಪಡಿ ತರಲಾಗುವುದು.

ಚುನಾವಣಾ ಆಯೋಗ ಹಾಗೂ ರಾಜ್ಯ ಚುನಾವಣಾ ಆಯೋಗಗಳು ಪ್ರತ್ಯೇಕ ಸಂಸ್ಥೆಗಳಾಗಿವೆ.

ಚುನಾವಣಾ ಆಯೋಗವು ರಾಷ್ಟ್ರಪತಿ, ಉಪ ರಾಷ್ಟ್ರಪತಿ, ಲೋಕಸಭೆ, ರಾಜ್ಯ ಸಭೆ ರಾಜ್ಯ ವಿಧಾನಸಭೆ ಹಾಗೂ ರಾಜ್ಯ ವಿಧಾನ ಪರಿಷತ್‌ಗಳ ಚುನಾವಣೆ ನಿರ್ವಹಿಸುತ್ತದೆ. ರಾಜ್ಯ ಚುನಾವಣಾ ಆಯೋಗಗಳು ನಗರ ಸ್ಥಳೀಯ ಸಂಸ್ಥೆ ಹಾಗೂ ಪಂಚಾಯ್ತಿಗಳ ಚುನಾವಣೆ ನಿರ್ವಹಿಸುತ್ತವೆ.

ಪುದುಚೆರಿ, ದೆಹಲಿ ಮುಂತಾದ ಕೇಂದ್ರಾಡಳಿತ ಪ್ರದೇಶಕ್ಕೆ ಸಂಬಂಧಿಸಿದಂತೆ ಮೂರನೇ ಮಸೂದೆ ರೂಪಿಸಲಾಗುತ್ತಿದೆ. ಇದು ಸಾಮಾನ್ಯ ಮಸೂದೆಯಾಗಿದೆ.

# ದೊಡ್ಡ ರಾಜಕಾರಣಿಗಳ 'ಸಹಕಾರ' ಧೋರಣೆ



ಗಲಭೆ ಪ್ರಕರಣದಲ್ಲಿ ಬಂಧಿತ ಆರೋಪಿ ಹಿಂದೂ ಕಾರ್ಯಕರ್ತ ಸತೀಶ್ ಪೂಜಾರಿ ಮನೆಗೆ ಬಿಜೆಪಿ ಹಿರಿಯ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್, ಮಾಜಿ ಕೇಂದ್ರ ಸಚಿವ ಜಿ.ಎಂ. ಸಿದ್ದೇಶ್ವರ ಮತ್ತು ಮಾಜಿ ಸಂಸದ ಪ್ರತಾಪ್ ಸಿಂಹ ಭೇಟಿ ನೀಡಿ ಕುಟುಂಬದವರಿಗೆ ಸ್ಥೈರ್ಯ ತುಂಬಿದರು.

**ಮಾಜಿ ಸಂಸದ ಪ್ರತಾಪ್ ಸಿಂಹ ತರಾಟೆ**

ದಾವಣಗೆರೆ, ಸೆ. 29 – ರಾಜ್ಯದ ಹಿರಿಯ ರಾಜಕಾರಣಿಗಳು ಪರಸ್ಪರ ಹೊಂದಾಣಿಕೆಯಲ್ಲಿದ್ದಾರೆ. ಅವರ ಬೆನ್ನು ಇವರು ಇವರ ಬೆನ್ನು ಅವರು ಕೆರೆಯುತ್ತಿದ್ದಾರೆ ಎಂದು ಮಾಜಿ ಸಂಸದ ಪ್ರತಾಪ್ ಸಿಂಹ ಲೇವಡಿ ಮಾಡಿದ್ದಾರೆ.

ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಪರಸ್ಪರ ಸಹಕಾರ ನೀಡುವ ಇಂತಹ ಹಿರಿಯ ರಾಜಕಾರಣಿಗಳ ಹಣೇಬರಹವನ್ನು ರಾಜ್ಯದ ಜನ ನೋಡಿದ್ದಾರೆ ಎಂದೂ ಹೇಳಿದರು.

2013ರ ವಿಧಾನಸಭಾ ಚುನಾವಣೆ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷದವರು ಪೇಸಿಎಂ, ಪಿಎಸ್ಐ, ಬಿಟ್‌ಕಾಯಿನ್, 40 ಪರ್ಸೆಂಟ್ ಕಮೀಷನ್ ಎಂದೆಲ್ಲಾ ತಮಟೆ ಹೊಡೆದರು. ಆದರೆ, ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದು ಒಂದೂವರೆ ವರ್ಷವಾಗುತ್ತಾ ಬಂದರೂ ಈ ಆರೋಪಗಳ ಬಗ್ಗೆ ಒಂದು ಸಾಕ್ಷಿಯನ್ನೂ ಹೊರ ತರಲು ಸಾಧ್ಯವಾಗಿಲ್ಲ ಎಂದರು.

ಈಗ ಮುಡಾ ಹಗರಣ ಬೆಳಕಿಗೆ ಬಂದ ನಂತರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬಿಜೆಪಿಯವರ ಮೇಲೆ ಪ್ರತಿ ಕೇಸು ದಾಖಲಿಸುವ ಹಾಗೂ ಜೈಲಿಗೆ ಕಳಿಸುವ ಮಾತನಾಡುತ್ತಿದ್ದಾರೆ ಎಂದು ಸಿಂಹ ತರಾಟೆಗೆ ತೆಗೆದುಕೊಂಡರು.

ಸಿದ್ದರಾಮಯ್ಯ ಅವರ ಕುರ್ಚಿ ಹೋಗುವ ಪರಿಸ್ಥಿತಿಯಾಗಿ, ಕುತ್ತಿಗೆಗೆ ಬರುವ ಪ್ರಸಂಗ ಬಂದಾಗ ಕೇಸು ಹಾಕುವ ಪೊಳ್ಳು ಧಮಕಿ ಹಾಕುತ್ತಿದ್ದಾರೆ. ಎಷ್ಟು ಬೇಕಾದರೂ ಎಫ್.ಐ.ಆರ್. ದಾಖಲಿಸಿ, ತಪ್ಪು ಮಾಡಿದವರನ್ನು ಜೈಲಿಗೆ ಕಳಿಸಿ ಎಂದು ಸವಾಲು ಹಾಕಿದರು.

ಮುಡಾ ಹಗರಣಕ್ಕೆ ಸಂಬಂಧಿಸಿದಂತೆ ಸಿದ್ದರಾಮಯ್ಯ ಅವರು 14 ನಿವೇಶನಗಳನ್ನು ಮರಳಿಸಲು ಸಲಹೆ ನೀಡಿದ್ದೆ. ಅವರು ಹಾಗೆ ಮಾಡಿದ್ದರೆ ಪ್ರಕರಣ ತಾರ್ಕಿಕ ಅಂತ್ಯಕ್ಕೆ ಹೋಗುತ್ತಿತ್ತು. ಸೈಟು ಪಡೆದ ಬೇರೆಯವರೆಲ್ಲ ಸಿಕ್ಕಿ ಬೀಳುತ್ತಿದ್ದರು ಎಂದೂ ಸಿಂಹ ಹೇಳಿದರು.

ಆದರೆ, ಸಿದ್ದರಾಮಯ್ಯ ಹಾಗೆ ಮಾಡದೇ ತಮ್ಮ ನಿವೇಶನಗಳಿಗೆ 62 ಕೋಟಿ ರೂ. ಕೊಡಬೇಕು ಎಂದು ಕೇಳಿದರು. ಇದೇನು ಅವರ ದುಡಿದು ಸಂಪಾದನೆ ಮಾಡಿರುವ ಆಸ್ತಿಯಾ? ಯಾರದೋ ದಲಿತರ ಭೂಮಿ. ಈ ರೀತಿಯ ಮಾತಿನಿಂದ 45 ವರ್ಷಗಳ ಸಿದ್ದರಾಮಯ್ಯ ರಾಜಕೀಯ ಜೀವನದ ಮೇಲ್ಪಂಕ್ತಿ ಉರುಳಿ ಹೋಯಿತು. ಸಿದ್ದರಾಮಯ್ಯ ಅವರು ಪ್ರಾಮಾಣಿಕರು ಎಂದುಕೊಂಡಿದ್ದವರಿಗ ಸತ್ಯ ಗೊತ್ತಾಯಿತು ಎಂದರು.

# ರಾಷ್ಟ್ರಮಟ್ಟದ ವೇಯ್ಟ್‌ಲಿಫ್ಟಿಂಗ್: ಪಾಲಿಕೆ ಸದಸ್ಯ ಕೆ.ಎಂ. ವೀರೇಶ್‌ಗೆ ಚಿನ್ನದ ಪದಕ




ದಾವಣಗೆರೆ, ಸೆ.29- ನಗರದ ಕೆಇಬಿ ಸಮುದಾಯ ಭವನದಲ್ಲಿ ಶನಿವಾರ ನಡೆದ ಪ್ಯಾನ್ ಇಂಡಿಯಾ ಮಾಸ್ಟರ್ ಗೇಮ್ಸ್ ಫೆಡರೇಷನ್ ವತಿಯಿಂದ ಹಮ್ಮಿಕೊಳ್ಳಲಾಗಿದ್ದ 3ನೇ ರಾಷ್ಟ್ರೀಯ ಮಾಸ್ಟರ್ಸ್ ವೇಯ್ಟ್ ಲಿಫ್ಟಿಂಗ್ ಚಾಂಪಿಯನ್ ಶಿಪ್ ಸ್ಪರ್ಧೆಯಲ್ಲಿ ಮಹಾನಗರ ಪಾಲಿಕೆ ಸದಸ್ಯ ಕೆ.ಎಂ. ವೀರೇಶ್ ಚಿನ್ನದ ಪದಕ ಪಡೆದಿದ್ದಾರೆ.

45+ ವಯೋಮಾನದ 73 ಕೆ.ಜಿ. ವಿಭಾಗದಲ್ಲಿ ಪ್ರಥಮ ಸ್ಥಾನ ಪಡೆಯುವ ಮೂಲಕ ಮಾರ್ಚ್‌ನಲ್ಲಿ ನಡೆಯಲಿರುವ ಅಂತರ್ ರಾಷ್ಟ್ರೀಯ ಮಟ್ಟದ ಸ್ಪರ್ಧೆಗೆ ಆಯ್ಕೆಯಾಗಿದ್ದಾರೆ.

# ನೇಪಾಳ : ಮಳೆ ಅನಾಹುತಗಳಲ್ಲಿ 170 ಸಾವು

ಕಠ್ಮಂಡು, ಸೆ. 29 – ನೇಪಾಳದಲ್ಲಿ ಸಂಭವಿಸಿದ ಮಳೆ ಅನಾಹುತದಲ್ಲಿ ಮೃತರ ಸಂಖ್ಯೆ 170ಕ್ಕೆ ಏರಿಕೆಯಾಗಿದೆ. 42 ಜನ ಕಣ್ಮರೆಯಾಗಿದ್ದಾರೆ ಎಂದು ಅಧಿಕಾರಿಗಳು ಹೇಳಿದ್ದಾರೆ. ಶುಕ್ರವಾರದಿಂದ ನೇಪಾಳದ ಪೂರ್ವ ಹಾಗೂ ಮಧ್ಯ ಭಾಗಗಳಲ್ಲಿ ಭಾರೀ ಮಳೆಯಾಗುತ್ತಿದೆ. ಇದರಿಂದ ಹಲವೆಡೆ ಕ್ಷಿಪ್ರ ಪ್ರವಾಹ ಉಂಟಾಗಿದೆ. ಮಳೆ ಸಂಬಂಧದ ಘಟನೆಗಳಲ್ಲಿ 111 ಜನ ಗಾಯಗೊಂಡಿದ್ದಾರೆ.